ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜುಲೈ 13 ಗುರುವಾರ 2023

ಸಂಪುಟ: 44 | ಸಂಚಿಕೆ: 88 | ಪುಟಗಳು: 10


ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹ 4

ಹೆಚ್.ಡಿ.ಕುಮಾರಸ್ವಾಮಿ ವಿಪಕ್ಷ ನಾಯಕರಾಗ್ತಾರೆ...


- ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮಹತ್ವದ ವಿಚಾರ ಬಹಿರಂಗ
- ಬಿಜೆಪಿ ರಾಜ್ಯಾಧ್ಯಕ್ಷ, ವಿಪಕ್ಷ ನಾಯಕನ ಆಯ್ಕೆ ವಿಳಂಬದ ಹಿಂದಿದೆ ಮಹಾತಂತ್ರ
- ಜೆಡಿಎಸ್ ಎನ್‌ಡಿಎ ಸೇರ್ಪಡೆ ಖಚಿತವಾದ ಹಿನ್ನೆಲೆಯಲ್ಲಿ ಬಿಜೆಪಿ ವರಿಷ್ಠರ ನಿರ್ಣಯ
- ಜು.17, 18ರಂದು ಬೆಂಗಳೂರಲ್ಲಿ ನಡೆಯುವ ಕಾಂಗ್ರೆಸ್ ನೇತೃತ್ವದ ವಿರೋಧ ಪಕ್ಷಗಳ ಸಭೆಯಲ್ಲಿ ಜೆಡಿಎಸ್ ಪಾಲ್ಗೊಳ್ಳದೇ ಇದ್ದಲ್ಲಿ ಮಾರನೇ ದಿನ ಕುಮಾರಸ್ವಾಮಿಗೆ ಪಟ್ಟ ಘೋಷಣೆ



ಬೆಂಗಳೂರು, ಜು.12(ಕೆಎಂಶಿ)– ವಿಧಾನಸಭೆಯ ಪ್ರತಿಪಕ್ಷದ ನಾಯಕರಾಗಿ ಹೆಚ್.ಡಿ.ಕುಮಾರಸ್ವಾಮಿ ಅವರು ಆಯ್ಕೆಯಾಗಲಿದ್ದಾರೆ ಎಂದು ಬಿಜೆಪಿಯ ಹಿರಿಯ ನಾಯಕ ಹಾಗೂ ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದ್ದಾರೆ.

ಕುಮಾರಸ್ವಾಮಿ ಅವರನ್ನು ಈ ಸ್ಥಾನಕ್ಕೆ ತರುವ ಉದ್ದೇಶ ನಮ್ಮ ವರಿಷ್ಠರಿಗಿದ್ದು, ಆ ಕಾರಣಕ್ಕಾಗಿ ಇದುವರೆಗೆ ಬಿಜೆಪಿ ರಾಜ್ಯಾಧ್ಯಕ್ಷ ಮತ್ತು ಪ್ರತಿಪಕ್ಷದ ನಾಯಕನ ಆಯ್ಕೆ ವಿಚಾರದಲ್ಲಿ ಮೌನವಾಗಿದ್ದಾರೆ. ವರಿಷ್ಠರು ಇದುವರೆಗೂ ಪಕ್ಷದ ಎರಡು ಪ್ರಮುಖ ಹುದ್ದೆಗಳ ಆಯ್ಕೆಗೆ ಸಂಬಂಧಿಸಿದಂತೆ ರಾಜ್ಯ ನಾಯಕರು ಹಾಗೂ ಶಾಸಕರ ಅಭಿಪ್ರಾಯ ಪಡೆದು ಹೋಗಿ ವಾರವೇ ಕಳೆದಿದೆ ಆದರೂ ಮುಂದಿನ ಬೆಳವಣಿಗೆ ಆಗಿಲ್ಲ ಎಂದರು.

ವಿಧಾನಸಭೆಯ ಮೊಗಸಾಲೆಯಲ್ಲಿ ಸುದ್ದಿಗಾರರೊಂದಿಗೆ ಅನೌಪಚಾರಿಕವಾಗಿ ಮಾತನಾಡಿದ ಬೊಮ್ಮಾಯಿ ಪ್ರಸಕ್ತ ನಡೆಯುತ್ತಿರುವ ಅಧಿವೇಶನದಲ್ಲಿ ನಾಯಕನ ಆಯ್ಕೆ ಕಷ್ಟಕರ. ಸೋನಿಯಾಗಾಂಧಿ ಅಧ್ಯಕ್ಷತೆಯಲ್ಲಿ ಬಿಜೆಪಿಯ ವಿರೋಧಿ ಪಕ್ಷಗಳ ಸಭೆ ಜು.17–18ರಂದು ಬೆಂಗಳೂರಿನಲ್ಲಿ ನಡೆಯಲಿದೆ. ಆ ನಂತರ ಪ್ರತಿಪಕ್ಷದ ನಾಯಕನ ಆಯ್ಕೆಯನ್ನು ವರಿಷ್ಠರು ಘೋಷಣೆ ಮಾಡುವ ಸಾಧ್ಯತೆ ಇದೆ. ಕಾಂಗ್ರೆಸ್ ನಾಯಕರು ಕರೆದಿರುವ ಈ ಮಹತ್ವದ ಸಭೆಯಿಂದ ಜೆಡಿಎಸ್ ದೂರ ಉಳಿಯಲಿದೆ. ಆ ನಂತರ ಎನ್‌ಡಿಎ ಮೈತ್ರಿಕೂಟದ ▶ 6ನೇ ಪುಟಕ್ಕೆ



ಚುನಾವಣೆಯಲ್ಲಿ ಜೆಡಿಎಸ್ ಕೈಬಿಟ್ಟ ಯುಪಿಎ ಮಿತ್ರ ಪಕ್ಷಗಳಿಗೆ ತಕ್ಕ ಪಾಠ!

ವಿಧಾನಸಭಾ ಚುನಾವಣಾ ಸಂದರ್ಭದಲ್ಲಿ ಯುಪಿಎ ಅಂಗಪಕ್ಷಗಳು ದೇವೇಗೌಡರಿಗೆ ಚುನಾವಣೆಯಲ್ಲಿ ಸಹಾಯ ಮಾಡುತ್ತೇವೆ ಎಂಬ ಭರವಸೆ ನೀಡಿದ್ದರು. ಚುನಾವಣೆ ಸಮೀಪಿಸುತ್ತಿದ್ದಂತೆ ಇವರ ದೂರವಾಣಿ ಕರೆಯನ್ನು ಪ್ರಾದೇಶಿಕ ಪಕ್ಷಗಳ ಮುಖಂಡರು ಸ್ವೀಕರಿಸಲಿಲ್ಲ. ತಮಿಳುನಾಡು ಮುಖ್ಯಮಂತ್ರಿ ಸ್ಟಾಲಿನ್, ತೆಲಂಗಾಣ ಮುಖ್ಯಮಂತ್ರಿ ಚಂದ್ರಶೇಖರರಾವ್, ಆಂಧ್ರಪ್ರದೇಶ ಮುಖ್ಯಮಂತ್ರಿ ಜಗನ್‌ಮೋಹನ್‌ರೆಡ್ಡಿ, ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ಕೊಟ್ಟ ಮಾತಿನಂತೆ ನಡೆದುಕೊಳ್ಳಲಿಲ್ಲ. ಇದರಿಂದ ಜೆಡಿಎಸ್ 30–40 ಕ್ಷೇತ್ರಗಳಲ್ಲಿ ಎರಡನೇ ಸ್ಥಾನಕ್ಕೆ ಬಂದು ಗೆಲುವಿನ ದಡ ದಾಟಲಿಲ್ಲ. ಅದು ಕಾಂಗ್ರೆಸ್‌ಗೆ ಸಹಕಾರಿಯಾಯಿತು. ಗೌಡರು, ಇದರಿಂದ ಬೇಸತ್ತು ಇವರ ಸಹವಾಸವೇ ಬೇಡವೆಂದು ಎನ್‌ಡಿಎ ಮೈತ್ರಿಕೂಟದತ್ತ ಮುಖ ಮಾಡಿದ್ದಾರೆ. ಇದು ನಮಗೂ ಮುಂದಿನ ದಿನಗಳಲ್ಲಿ ಸಹಕಾರಿಯಾಗಲಿದೆ ಎಂದರು ಬೊಮ್ಮಾಯಿ.

ವಿಪಕ್ಷ ನಾಯಕರಾಗಿ ಕುಮಾರಸ್ವಾಮಿ ಆಯ್ಕೆ ಖಚಿತ

ಗೌಡರೇ, ವಿಪಕ್ಷ ನಾಯಕ ಸ್ಥಾನ ಹುಡುಕಿಕೊಂಡು ನಿಮ್ಮ ಮನೆ ಬಾಗಿಲಿಗೆ ಬರುತ್ತಿದೆ;ಜಿ.ಟಿ.ದೇವೇಗೌಡರಿಗೆ ಕಿವಿಮಾತು



ಬೆಂಗಳೂರು, ಜು.12(ಕೆಎಂಶಿ)–ವಿರೋಧ ಪಕ್ಷದ ನಾಯಕರಾಗಿ ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಆಯ್ಕೆ ಖಚಿತ ಎಂದು ಮಾಜಿ ಉಪ ಮುಖ್ಯಮಂತ್ರಿ ಹಾಗೂ ಕಾಂಗ್ರೆಸ್ ಹಿರಿಯ ಸದಸ್ಯ ಲಕ್ಷ್ಮಣ್ ಸವದಿ ವಿಧಾನಸಭೆಯಲ್ಲಿ ಬಹಿರಂಗಪಡಿಸಿದರು. ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯದ ಮೇಲೆ ಜೆಡಿಎಸ್ ಸದಸ್ಯ ಜಿ.ಟಿ.ದೇವೇಗೌಡ ಮಾತನಾಡುವಾಗ, ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರನ್ನು ಯಾವ ಕಾರಣಕ್ಕೆ ಅಧಿಕಾರದಿಂದ ಕೆಳಗಿಳಿಸಿ, ಹಿಂಬದಿಗೆ ಸರಿಸಿದರು ಎಂಬುದನ್ನು ಬಿಜೆಪಿ ಇದುವರೆಗೂ ಬಹಿರಂಗಪಡಿಸಿಲ್ಲ. ಪ್ರತಿಪಕ್ಷದ ನಾಯಕನನ್ನು ಆಯ್ಕೆ ▶ 6ನೇ ಪುಟಕ್ಕೆ

ರಾಜಕೀಯ ಹೊಂದಾಣಿಕೆ ಸಾಬೀತುಪಡಿಸಿದ್ರೆ ನಿವೃತ್ತಿ ಘೋಷಿಸುವೆ...

- ಸಿಎಂ ಸಿದ್ದರಾಮಯ್ಯ ಸವಾಲು
- ಯಾರಾದರೂ ಈ ಬಗ್ಗೆ ಮಾಹಿತಿ ಇದ್ದರೆ ಹೇಳಿ; ಸದನವನ್ನೇ ಪ್ರಶ್ನಿಸಿದ ಸಿಎಂ
- ಪದೇ ಪದೆ ಈ ವಿಚಾರ ಪ್ರಸ್ತಾಪಿಸಿದ ಯತ್ನಾಳ್‌ಗೆ ಟಾಂಗ್; ನೀವು ಏನೇ ಮಾಡಿದರೂ ವಿರೋಧ ಪಕ್ಷದ ನಾಯಕನಾಗಿ ನಿಮ್ಮನ್ನು ಮಾಡಲ್ಲ!

ಬೆಂಗಳೂರು, ಜು.12(ಕೆಎಂಶಿ)– ವಿರೋಧಿಗಳ ಜತೆ ಒಳ ಒಪ್ಪಂದ ಮಾಡಿಕೊಂಡಿರುವುದನ್ನು ಸಾಬೀತುಪಡಿಸಿದರೆ ರಾಜಕೀಯ ನಿವೃತ್ತಿ ಹೊಂದುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ವಿಧಾನಸಭೆಯಲ್ಲಿ ಸವಾಲು ಹಾಕಿದ್ದಾರೆ.



ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯದ ಮೇಲಿನ ಚರ್ಚೆ ಸಂದರ್ಭದಲ್ಲಿ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ, ಬಸನಗೌಡ ಪಾಟೀಲ್ ಯತ್ನಾಳ್ ಅವರು ಮಾಡಿದ ಪ್ರಸ್ತಾವಕ್ಕೆ ಸಿದ್ದರಾಮಯ್ಯ ಮಧ್ಯೆ ಪ್ರವೇಶಿಸಿ 1983ರಿಂದ ಈ ಸದನದಲ್ಲಿ ಸದಸ್ಯನಾಗಿದ್ದೇನೆ. ಅಂದಿನಿಂದ ಇಂದಿನವರೆಗೂ ನನ್ನ ವಿರೋಧಿಗಳು ಹಾಗೂ ಪಕ್ಷಗಳ ಜತೆ ಒಂದೇ ಒಂದು ಹೊಂದಾಣಿಕೆ ರಾಜಕೀಯ ಮಾಡಿಲ್ಲ. ಈ ಸದನದಲ್ಲೇ ವಿರೋಧ ಪಕ್ಷದಲ್ಲಿ ಹಲವು ಮಾಜಿ ಸಚಿವರಿದ್ದೀರಿ. ಯಾವುದೇ ಕೆಲಸಕ್ಕೋ, ಮಾತುಕತೆಗೋ ನಿಮ್ಮ ಮನೆ ಬಾಗಿಲಿಗೆ ಬಂದಿದ್ದೇನೆಯೇ ಎಂದು ಪ್ರಶ್ನಿಸಿದರು. ಯತ್ನಾಳ್ ಎರಡನೇ ಬಾರಿಗೆ ವಿಧಾನಸಭೆ ಪ್ರವೇಶ ಮಾಡಿದ್ದಾರೆ. ಅವರಿಗೆ ಎಲ್ಲವೂ ತಿಳಿದಿಲ್ಲ. ನಾನು ದೇಶಪಾಂಡೆ, ಬಿಆರ್.ಪಾಟೀಲ್ ಮಾತ್ರ ಅಂದಿನಿಂದ ಇಂದಿನವರೆಗೂ ಇದ್ದೇವೆ. ಯಾವುದೇ ಸಂದರ್ಭ ಮತ್ತು ಎಂತಹ ಪರಿಸ್ಥಿತಿಯಲ್ಲೂ ಹೊಂದಾಣಿಕೆ ರಾಜಕೀಯ ಮಾಡಿಕೊಂಡಿಲ್ಲ. ಒಂದು ವೇಳೆ ಮಾಡಿಕೊಂಡಿದ್ದರೆ ಸಾಬೀತುಪಡಿಸಿ ಎಂದು ಸವಾಲು ಹಾಕಿದರು. ಕುಮಾರಸ್ವಾಮಿ ಮಾತನಾಡುವಾಗ ಮಧ್ಯೆ ಪ್ರವೇಶಿಸಿದ ಯತ್ನಾಳ್, ಸರ್ಕಾರವನ್ನು ಕಿಚಾಯಿಸುತ್ತಿದ್ದರು. ಇದರಿಂದ ಇರಿಸು–ಮುರಿಸುಗೊಂಡ ಮುಖ್ಯಮಂತ್ರಿ, ರೀ ಯತ್ನಾಳ್, ನೀವು ಎಷ್ಟೇ ಕಿರುಚಾಡಿದರೂ ನನಗೆ ತಿಳಿದಿರುವಂತೆ ನಿಮಗೆ ವಿರೋಧ ಪಕ್ಷದ ನಾಯಕನ ಸ್ಥಾನ ದಕ್ಕುವುದಿಲ್ಲ.

ಮುಖ್ಯಮಂತ್ರಿ ಅವರ ಉತ್ತರಕ್ಕೆ ಅದೇ ದಾಟಿಯಲ್ಲಿ ಪ್ರತಿಕ್ರಿಯಿಸಿದ ಯತ್ನಾಳ್, ಇದನ್ನೇ ಅಡ್ಜಸ್ಟ್‌ಮೆಂಟ್ ರಾಜಕೀಯ ಎನ್ನುವುದು. ನೋಡಿ ನಿಮಗೆ ನಮ್ಮೆಲ್ಲ ಮಾಹಿತಿ ತಿಳಿಯುತ್ತದೆ ಎಂದು ತಿರುಗೇಟು ನೀಡಿದರು. ಯತ್ನಾಳ್ ಬೆಂಬಲಕ್ಕೆ ನಿಂತ ಕುಮಾರಸ್ವಾಮಿ, ನಾನಂತೂ ಹೊಂದಾಣಿಕೆ ▶ 6ನೇ ಪುಟಕ್ಕೆ

ಐದು ಗ್ಯಾರಂಟಿಗಳ ಜೊತೆಗೆ ಕಾಂಗ್ರೆಸ್‌ನಿಂದ ಈಗ ಕಾಸಿಗಾಗಿ ಪೋಸ್ಟಿಂಗ್ ಗ್ಯಾರಂಟಿ

ವಿಧಾನಸಭೆಯಲ್ಲಿ ಸರ್ಕಾರದ ವಿವಿಧ ಇಲಾಖೆಗಳ ವರ್ಗಾವಣೆ ದರ ನಿಗದಿ ಪಟ್ಟಿ ಪ್ರದರ್ಶಿಸಿದ ಮಾಜಿ ಸಿಎಂ ಕುಮಾರಸ್ವಾಮಿ

ಬೆಂಗಳೂರು, ಜು.12(ಕೆಎಂಶಿ)– ರಾಜ್ಯದ ಜನತೆಗೆ ಐದು ಅಂಶಗಳ ಗ್ಯಾರಂಟಿ ನೀಡಿದ್ದ ಕಾಂಗ್ರೆಸ್ ಪಕ್ಷವು, ಅಧಿಕಾರಕ್ಕೆ ಬಂದ ಮೇಲೆ ಕಾಸಿಗಾಗಿ ಪೋಸ್ಟಿಂಗ್ ಗ್ಯಾರಂಟಿ ನೀಡಲು ಹೊರಟಿದೆ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಹೆಚ್.ಡಿ. ಕುಮಾರಸ್ವಾಮಿ ಗಂಭೀರ ಆರೋಪ ಮಾಡಿದ್ದಾರೆ.

ವಿಧಾನಸಭೆಯಲ್ಲಿ ರಾಜ್ಯಪಾಲರ ಭಾಷಣದ ಮೇಲಿನ ಚರ್ಚೆಯಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಎಲ್ಲ ಇಲಾಖೆಗಳಲ್ಲಿ ವರ್ಗಾವಣೆಗೆ ದರ ನಿಗದಿ ಆಗಿದೆ. ಅದಕ್ಕೆ ಪೂರಕವಾಗಿ ಕೃಷಿಗಾಗಿ ಕೃಷಿ ಇಲಾಖೆಯಲ್ಲಿ ನಿಗದಿ ಮಾಡಿರುವ ದರಪಟ್ಟಿಯ ಕಾಗದ ಪತ್ರವನ್ನು ಪ್ರದರ್ಶಿಸಿದರು. ಈ ಕಾಗದ ಪತ್ರವನ್ನು ಸಭಾಧ್ಯಕ್ಷರು ಹಾಗೂ ಮುಖ್ಯಮಂತ್ರಿ ಅವರಿಗೆ ಕಳಿಸಿಕೊಡುವುದಾಗಿ ಹೇಳಿದ ಅವರು, ಹಿಂದೆ ಇದೇ ಕಾಂಗ್ರೆಸ್ ಪಕ್ಷ ಹಿಂದಿನ ಬಿಜೆಪಿ ಸರಕಾರದ ವಿರುದ್ಧ ವರ್ಗಾವಣೆಯ ರೇಟ್ ಕಾರ್ಡ್ ಹೊರಡಿಸಿತ್ತು ಎಂದರು. ಇದೇ ವೇಳೆ ಕುಮಾರಸ್ವಾಮಿ ಅವರು ಹಿಂದಿನ ಬಿಜೆಪಿ ಸರಕಾರದ ವಿರುದ್ಧ ಕಾಂಗ್ರೆಸ್ ಪಕ್ಷವು ಮಾಧ್ಯಮಗಳಲ್ಲಿ ನೀಡಿದ್ದ ಹಗರಣಗಳ ರೇಟ್ ಕಾರ್ಡ್ ಜಾಹೀರಾತನ್ನು ಪ್ರದರ್ಶಿಸಿದರು.

ಹಿಂದೆ ನೀವು ಬಿಜೆಪಿ ಸರಕಾರದ ವಿರುದ್ಧ ರೇಟ್ ಕಾರ್ಡ್ ಹಾಕಿದ್ದೀರಿ. ಮುಂದೆ ನಿಮ್ಮ ವಿರುದ್ಧ ರೇಟ್ ಕಾರ್ಡ್ ಹೊರಡಿಸಬೇಕಾಗುತ್ತದೆ. ಆದ್ದರಿಂದ ಈಗಲೇ ಎಚ್ಚೆತ್ತುಕೊಂಡು ಸರಿ ಮಾಡಿಕೊಳ್ಳಿ ಎನ್ನುವ ಸದುದ್ದೇಶದಿಂದ ಹೇಳುತ್ತಿದ್ದೇನೆ ಎಂದು ಕುಮಾರಸ್ವಾಮಿ ಹೇಳಿದರು.

ನಿಮ್ಮ ಗ್ಯಾರಂಟಿಗಳನ್ನು ನಾನು ವಿರೋಧ ಮಾಡುವುದಿಲ್ಲ. ಸ್ವಾಗತ ಮಾಡುತ್ತೇನೆ, ನೀವು ನುಡಿದಂತೆ ನಡೆಯುತ್ತಿಲ್ಲ ಎಂದು ಹೇಳುತ್ತಿಲ್ಲ, ನಡೆಯಲು ಪ್ರಯತ್ನ ಮಾಡುತ್ತಿದ್ದೀರಿ. ಆದರೆ, ಈ ಗ್ಯಾರಂಟಿಗಳ ಸೈಡ್ ಎಫೆಕ್ಟ್‌ಗಳ ಬಗ್ಗೆ ಏನು ಮಾಡಿದ್ದೀರಿ. ಗ್ಯಾರಂಟಿಗಳ ಬಾಧೆಗೆ ತುತ್ತಾದವರಿಗೆ ನೀವು ಏನಾದರೂ ಒಳ್ಳೆಯದು ಮಾಡಬೇಕಲ್ಲವೆ ಎಂದು ಅವರು ಒತ್ತಾಯ ಮಾಡಿದರು.

ಗೃಹಜ್ಯೋತಿ ಅಂತ ಮಾಡಿದ್ದೀರಿ. ಆದರೆ, 200 ಯೂನಿಟ್ ಉಚಿತ ಎಂದವರು ಈಗ ಸರಾಸರಿ ಲೆಕ್ಕ ಹೇಳಿಕೊಂಡು ಜನರಿಗೆ ಹೊರೆ ಹಾಕುತ್ತಿದ್ದೀರಿ. ಅನಿಯಂತ್ರಿತ ದರಕ್ಕೆ ವಿದ್ಯುತ್ ಖರೀದಿ ಮಾಡಿ ಜನರಿಗೆ ಮೋಸ ಮಾಡಲಾಗಿದೆ. ಹಿಂದೆ ವಿದ್ಯುತ್ ಖರೀದಿ ಬಗ್ಗೆ ತನಿಖೆ ಮಾಡಲು ಸದನ ಸಮಿತಿ ರಚನೆ ಮಾಡಿದ್ದೀರಿ. ಆ ಸಮಿತಿ ಹಣೆಬರಹ ಏನಾಯಿತು ಎನ್ನುವುದು ಗೊತ್ತಿದೆ. ಇವತ್ತಿನ ಉಪ ಮುಖ್ಯಮಂತ್ರಿ ಅವರಿಗೆ ಎಲ್ಲವೂ ಚೆನ್ನಾಗಿ ಗೊತ್ತಿದೆ ಎಂದರು. ಒಂದು ಕಡೆ ಮನಸ್ಸೋ ಇಚ್ಛೆ ದುಡ್ಡು ಕೊಟ್ಟು ವಿದ್ಯುತ್ ಖರೀದಿ ಮಾಡಿ ಬೊಕ್ಕಸಕ್ಕೆ ನಷ್ಟ ಉಂಟು ಮಾಡುತ್ತೀರಿ. ಇನ್ನೊಂದು ಕಡೆ ಆ ನಷ್ಟ ತುಂಬಿಕೊಳ್ಳಲು ವಿದ್ಯುತ್ ದರ ಏರಿಕೆ ಮಾಡಿ ಜನರ ಮೇಲೆ ಹೊರೆ ಹೇರುತ್ತೀರಿ. ಇದ್ಯಾವ ನ್ಯಾಯ ಎಂದು ಅವರು ಪ್ರಶ್ನೆ ಮಾಡಿದರು. ಸಿಬಿಐ ತನಿಖೆ ನಡೆದರೆ ಈ ಎಲ್ಲಾ ಅಕ್ರಮಗಳು ಆಚೆಗೆ ಬರುತ್ತವೆ. ಸಿಬಿಐ ತನಿಖೆಗೆ ವಹಿಸಿ ಎಂದು ಅವರು ಹೇಳಿದರು.

ಮುದ್ರಾಂಕ ಶುಲ್ಕ ಹೆಚ್ಚಳ ಇಲ್ಲ, ಜಮೀನು ಮೌಲ್ಯ ಮಾತ್ರ ಪರಿಷ್ಕರಣೆ



ಬೆಂಗಳೂರು: ಸರ್ಕಾರಕ್ಕೆ ಮುದ್ರಾಂಕ ಶುಲ್ಕ ಪರಿಷ್ಕರಿಸುವ ಆಲೋಚನೆ ಇಲ್ಲ. ಆದರೆ ರೈತರಿಗಾಗುತ್ತಿರುವ ಅನ್ಯಾಯವನ್ನು ತಡೆಯುವ ನಿಟ್ಟಿನಲ್ಲಿ ಜಮೀನಿನ ಮೌಲ್ಯ ಪರಿಷ್ಕರಣೆಗೆ ಚಿಂತನೆ ನಡೆಸಲಾಗುತ್ತಿದೆ ಎಂದು ಕಂದಾಯ ಸಚಿವ ಕೃಷ್ಣಬೈರೇಗೌಡ ಹೇಳಿದ್ದಾರೆ.

ವಿಧಾನ ಪರಿಷತ್ ಕಲಾಪದ ಪ್ರಶ್ನೋತ್ತರ ಅವಧಿಯಲ್ಲಿ ಬಿಜೆಪಿಯ ತುಳಸಿ ಮುನಿರಾಜುಗೌಡ ▶ 6ನೇ ಪುಟಕ್ಕೆ

ಎಲ್ಲೆ ಮೀರಿದ ವಾಹನ ಚಾಲಕರು, ಸವಾರರ ವರ್ತನೆ

ಮೈಸೂರಲ್ಲಿ ಮತ್ತೆ ಫೀಲ್ಡ್‌ಗಿಳಿದ ಪೊಲೀಸರು

ಮೈಸೂರು, ಜು.12(ಎಂಕೆ)– ಮೈಸೂರಿನಲ್ಲಿ ಸಂಚಾರ ನಿಯಮ ಉಲ್ಲಂಘನೆ ಹೆಚ್ಚಾಗಿ ಕಂಡು ಬರುತ್ತಿರುವ ಹಿನ್ನೆಲೆಯಲ್ಲಿ ನಗರ ಪೊಲೀಸ್ ವತಿಯಿಂದ ಬುಧವಾರ ವಿಶೇಷ ಕಾರ್ಯಾಚರಣೆ ನಡೆಸಲಾಯಿತು. ತ್ರಿಬಲ್ ರೈಡಿಂಗ್, ಹೆಲ್ಮೆಟ್ ಧರಿಸದೆ ದ್ವಿಚಕ್ರ ವಾಹನ ಸಂಚಾರ, ಡ್ರಂಕ್ ಅಂಡ್ ಡ್ರೈವ್, ಸಿಗ್ನಲ್ ಜಂಪ್ ಸೇರಿದಂತೆ ಇನ್ನಿತರೆ ಸಂಚಾರ ನಿಯಮ ಉಲ್ಲಂಘನೆ ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ಕಳೆದೊಂದು ತಿಂಗಳಿಂದ ಸ್ಥಗಿತಗೊಳಿಸಿದ್ದ ಕಾರ್ಯಾಚರಣೆ ಯನ್ನು ಮತ್ತೆ ಪ್ರಾರಂಭಿಸಲಾಗಿದೆ. ಸಂಜೆ 5 ಗಂಟೆಯಿಂದ ರಾತ್ರಿ 9 ಗಂಟೆಯವರೆಗೆ ನಗರದ ಪ್ರಮುಖ ರಸ್ತೆಗಳು, ವೃತ್ತಗಳಲ್ಲಿ



ಜಂಟಿ (ಸಂಚಾರ ಹಾಗೂ ಕಾನೂನು ಮತ್ತು ಸುವ್ಯವಸ್ಥೆ) ಕಾರ್ಯಾಚರಣೆ ನಡೆಸಿದ ಪೊಲೀಸರು ವಾಹನಗಳನ್ನು ತಡೆದು ಪರಿಶೀಲನೆ ನಡೆಸಿದರಲ್ಲದೆ ನಿಯಮ ಉಲ್ಲಂಘಿಸಿದವರಿಂದ ಸ್ಥಳದಲ್ಲೇ ದಂಡ ವಸೂಲಿ ಮಾಡಲಾಯಿತು. ಮೈಸೂರು ನಗರ ಪೊಲೀಸ್ ಆಯುಕ್ತರಾದ ಬಿ.ರಮೇಶ್, ನಜರ್‌ಬಾದ್ ಪೊಲೀಸ್ ಠಾಣೆ ವೃತ್ತದಲ್ಲಿ ವಾಹನಗಳ ತಪಾಸಣೆ ನಡೆಸುವ ಮೂಲಕ ವಿಶೇಷ ಕಾರ್ಯಾಚರಣೆಗೆ ಚಾಲನೆ ನೀಡಿದರಲ್ಲದೆ ಸಂಚಾರ ನಿಯಮ ಉಲ್ಲಂಘಿಸಿದವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವಂತೆ ಸೂಚನೆ ನೀಡಿದರು. ಹಾಗೆಯೇ ಅಪರಾಧ ಮತ್ತು ಸಂಚಾರ ▶ 6ನೇ ಪುಟಕ್ಕೆ

ಕಾಂಗ್ರೆಸ್ ಸರ್ಕಾರದಲ್ಲಿ ಯಾರಿಗೂ ರಕ್ಷಣೆ ಇಲ್ಲ, ಹಿಂದೂಗಳು ಒಬ್ಬೊಬ್ಬರೇ ಓಡಾಡಬೇಡಿ!



ಮೈಸೂರು, ಜು.12(ಜಿಎ)– ಕಾಂಗ್ರೆಸ್ ಸರ್ಕಾರದಲ್ಲಿ ಯಾರಿಗೂ ರಕ್ಷಣೆ ಇಲ್ಲ. ಆದ್ದರಿಂದ ರಾಜ್ಯದಲ್ಲಿ ಹಿಂದೂ ಕಾರ್ಯಕರ್ತರು ಒಬ್ಬೊಬ್ಬರೇ ಓಡಾಡಬೇಡಿ ಎಂದು ಮಾಜಿ ಸಚಿವ ಶ್ರೀರಾಮುಲು ಕರೆ ನೀಡಿದ್ದಾರೆ. ತಿ.ನರಸೀಪುರದಲ್ಲಿ ಹತ್ಯೆಯಾಗಿರುವ ಯುವ ಬ್ರಿಗೇಡ್ ಕಾರ್ಯಕರ್ತ ವೇಣುಗೋಪಾಲ ನಾಯಕ ಅವರ ನಿವಾಸಕ್ಕೆ ಭೇಟಿ ನೀಡಿ ಕುಟುಂಬಸ್ಥರಿಗೆ ಸಾಂತ್ವನ ಹೇಳಲು ಬಂದಿದ್ದ ಅವರು ಮೈಸೂರಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದರು. ಈ ಸರ್ಕಾರ ಬಂದ ಮೇಲೆ ಹಿಂದೂ ಕಾರ್ಯಕರ್ತರ ಹತ್ಯೆ ಆರಂಭವಾಗಿದೆ. ಧರ್ಮದ ವಿಚಾರವಾಗಿ ನಡೆದಿರುವ ಕೊಲೆ ಇದು. ಧರ್ಮ ಬಂದಾಗ ನಾವೆಲ್ಲ ಒಂದೇ, ಪಕ್ಷ ಅನ್ನೋದು ಇಲ್ಲ ಎಂದು ತಿಳಿಸಿದರು. ಕೊಲೆ ಬಗ್ಗೆ ತನಿಖೆ ನಡೆದರೆ ಯಾರ ಕುಮ್ಮಕ್ಕು ಅಂತಾ ಗೊತ್ತಾಗುತ್ತೆ. ವೇಣುಗೋಪಾಲ ▶ 6ನೇ ಪುಟಕ್ಕೆ

ಜೈನಮುನಿ ಕಾಮಕುಮಾರ ನಂದಿ ಮಹಾರಾಜರ ಹತ್ಯೆ ಖಂಡಿಸಿ

ಮೈಸೂರಲ್ಲಿ ಜೈನ ಸಮುದಾಯ ಮೌನ ಪ್ರತಿಭಟನೆ

ಮೈಸೂರು,ಜು.12(ಪಿಎಂ)–ಬೆಳಗಾವಿ ಜಿಲ್ಲೆ ಚಿಕ್ಕೋಡಿ ತಾಲೂಕು ಹಿರೇಕೋಡಿ ಗ್ರಾಮದ ನಂದಿ ಪರ್ವತ ಆಶ್ರಮದ ಜೈನ ದಿಗಂಬರ ಮುನಿ 108 ಆಚಾರ್ಯ ಶ್ರೀ ಕಾಮಕುಮಾರ ನಂದಿ ಮಹಾರಾಜರ ಹತ್ಯೆ ಖಂಡಿಸಿ ಜೈನ ಸಮುದಾಯ ಬುಧವಾರ ಮೈಸೂರಿನಲ್ಲಿ ಮೌನ ಪ್ರತಿಭಟನೆ ನಡೆಸಿತು. ಭಾರೀ ಸಂಖ್ಯೆಯಲ್ಲಿ ನೆರೆದಿದ್ದ ಜೈನ ಬಾಂಧವರು ಈ ಅಮಾನವೀಯ ಕೃತ್ಯವನ್ನು ತೀವ್ರವಾಗಿ ಖಂಡಿಸಿದರು.

ಗಾಂಧಿಚೌಕದಲ್ಲಿ ನಡೆದ ಪ್ರತಿಭಟನೆಯಲ್ಲಿ ದಿಗಂಬರ, ಶ್ವೇತಾಂಬರ, ತೇರಾಪಂಥ್, ಸ್ಥಾನಿಕ ವಾಸಿ, ಮಂದಿರ ಮಾರ್ಗಿ ಸೇರಿದಂತೆ ಸಮಸ್ತ ಜೈನ ಸಮುದಾಯದವರು ಕಪ್ಪುಪಟ್ಟಿ ಧರಿಸಿ, ನೂರಾರು ಸಂಖ್ಯೆಯಲ್ಲಿ ಪಾಲ್ಗೊಂಡು ಮೌನವಾಗಿಯೇ ತಮ್ಮ ಆಕ್ರೋಶ ವ್ಯಕ್ತಪಡಿಸಿದರು. ಪ್ರತಿಭಟನೆಯಲ್ಲಿ ಸಮುದಾಯದ ಹಿರಿಯರು, ಯುವ ಜನರು ಹಾಗೂ ಮಹಿಳೆಯರು ಪಾಲ್ಗೊಂಡು 'ಶಾಂತಿ, ಅಹಿಂಸೆ ಸಾರಿದವರಿಗೆ ಈ ಶಿಕ್ಷೆ ನ್ಯಾಯವೇ?' ಎಂಬಿತ್ಯಾದಿ ಘೋಷ ವಾಕ್ಯಗಳ ಫಲಕಗಳನ್ನಿಡಿದು, ಆ ಮೂಲಕ ತಮ್ಮಲ್ಲಿನ ಆಕ್ರೋಶ ವ್ಯಕ್ತಪಡಿಸಿದರು. 'ತ್ಯಾಗಿಗಳನ್ನು ರಕ್ಷಿಸಲು ಕಂಕಣಬದ್ಧರಾಗಿ, ಪಂಥವಾದ ದೂರವಿಡಿ', 'ಅಹಿಂಸಾ ತತ್ವವನ್ನು ಬೋಧಿಸುವವರಿಗೆ ▶ 6ನೇ ಪುಟಕ್ಕೆ



ಮೈಸೂರಿನ ಗಾಂಧಿಚೌಕದಲ್ಲಿ ಜೈನ ಸಮುದಾಯದವರು ಜೈನ ಮುನಿ ಶ್ರೀ ಕಾಮಕುಮಾರ ನಂದಿ ಮಹಾರಾಜರ ಹತ್ಯೆ ಖಂಡಿಸಿ ಮೌನ ಪ್ರತಿಭಟನೆ ನಡೆಸಿದರು.

ವಿಧಾನಸೌಧದ ಆವರಣದಲ್ಲಿ ಬಿಜೆಪಿ ಧರಣಿ; ಫ್ರೀಡಂ ಪಾರ್ಕ್‌ನಲ್ಲಿ ಕಾಂಗ್ರೆಸ್ ಮೌನ ಪ್ರತಿಭಟನೆ

● ರಾಜ್ಯದಲ್ಲಿ ಕಾನೂನು–ಸುವ್ಯವಸ್ಥೆ ಸಂಪೂರ್ಣ ಕುಸಿದಿದೆ: ಬಿಜೆಪಿ ● ರಾಹುಲ್ ಗಾಂಧಿ ರಾಜಕೀಯ ಜೀವನ ಮುಗಿಸುವ ಪಿತೂರಿ: ಕಾಂಗ್ರೆಸ್



ಬೆಂಗಳೂರಿನ ವಿಧಾನಸೌಧದ ಆವರಣದಲ್ಲಿ ಬುಧವಾರ ರಾಜ್ಯದ ಹಿರಿಯ ಬಿಜೆಪಿ ನಾಯಕರಿಂದ ಧರಣಿ.


ಫ್ರೀಡಂ ಪಾರ್ಕ್‌ನಲ್ಲಿ ಸಿಎಂ, ಡಿಸಿಎಂ ಹಾಗೂ ಕಾಂಗ್ರೆಸ್ ನಾಯಕರಿಂದ ಬುಧವಾರ ಮೌನ ಪ್ರತಿಭಟನೆ.

ಬೆಂಗಳೂರು, ಜು.12(ಕೆಎಂಶಿ)– ರಾಜ್ಯದಲ್ಲಿ ಕಾನೂನು–ಸುವ್ಯವಸ್ಥೆ ಕುಸಿದಿದೆ ಎಂದು ಬಿಜೆಪಿ ಧರಣಿ ನಡೆಸಿದರೆ, ರಾಹುಲ್ ಗಾಂಧಿ ಅವರ ರಾಜಕೀಯ ಜೀವನ ಮುಗಿಸಲು ಕೇಂದ್ರ ಸರ್ಕಾರ ಪಿತೂರಿ ನಡೆಸುತ್ತಿದೆ ಎಂದು ಆರೋಪಿಸಿ ಆಡಳಿತಾರೂಢ ಕಾಂಗ್ರೆಸ್ ನಾಯಕರು ಪ್ರತಿಭಟನೆ ನಡೆಸಿದರು.

ಆಡಳಿತ ಮತ್ತು ಪ್ರತಿಪಕ್ಷ ಒಂದಲ್ಲ ಒಂದು ಕಾರಣಕ್ಕೆ ಬೀದಿಗಿಳಿದು ಹೋರಾಟ ನಡೆಸಿ, ಸಂಚಾರ ದಟ್ಟಣೆ ಉಂಟು ಮಾಡಿತು. ಧರಣಿ ಸಂದರ್ಭದಲ್ಲಿ ಕೆಪಿಸಿಸಿ ಅಧ್ಯಕ್ಷ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮಾತನಾಡಿ, ಬಿಜೆಪಿಗೆ ಪರ್ಯಾಯವಾಗಿ ಬೆಳೆಯುವ ಪಕ್ಷ ಮತ್ತು ನಾಯಕರನ್ನು ರಾಜಕೀಯವಾಗಿ ಮುಗಿಸಲಾಗುತ್ತಿದೆ ಎಂದು ದೂರಿದರು.

ಕುತಂತ್ರದಿಂದ ಸತ್ಯವನ್ನು ಮುಚ್ಚಿಡಲಾಗದು, ಬಿಜೆಪಿಯ ನೀತಿಗಳಿಗೆ ನಮ್ಮ ಧಿಕ್ಕಾರವಿದೆ. ಅವರು ಏನೇ ಮಾಡಿದರೂ ಮುಂಬರುವ ಲೋಕಸಭೆ ಚುನಾವಣೆಯಲ್ಲಿ ಯುಪಿಎ ಅಧಿಕಾರದ ಗದ್ದುಗೆ ಹಿಡಿಯಲಿದೆ ಎಂದು ಹೇಳಿದರು.

ಮತ್ತೊಂದೆಡೆ ರಾಜ್ಯದಲ್ಲಿ ಕಾನೂನು–ಸುವ್ಯವಸ್ಥೆಗೆ ಸಂಬಂಧಿಸಿದಂತೆ ಧರಣಿ ನಡೆಸಿದ ಸಂದರ್ಭದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಕರ್ನಾಟಕದಲ್ಲಿ ಜಂಗಲ್ ರಾಜ್ಯ ಶುರುವಾಗಿದೆ. ಸಾಮಾನ್ಯರು ಭಯ ಭೀತಿ ಇಲ್ಲದೆ ಓಡಾಡುವಂತಿಲ್ಲ. ಜೈನ ಮುನಿ ಕೊಲೆಯಾಗಿದೆ. ನಮ್ಮ ಕಾರ್ಯಕರ್ತರ ಕೊಲೆಯಾಗಿದೆ. ಜನ ಸಾಮಾನ್ಯರ ಕೊಲೆಯಾಗಿದೆ. ಇಬ್ಬರು ಟೆಕ್ಕಿಗಳ ಕೊಲೆಯಾಗಿದೆ. ಕೊಲೆ ಮಾಡಿ ಆ ವ್ಯಕ್ತಿ ತನ್ನ ಇನ್‌ಸ್ಟಾಗ್ರಾಂನಲ್ಲಿ ಹಾಕುತ್ತಾನೆ.

ಕೊಲೆಗಡುಕರಿಗೆ ಯಾವುದೇ ಭಯ ಇಲ್ಲ. ಪೊಲೀಸರ ಮೇಲೆ ಒತ್ತಡ ಹೇರಲಾಗುತ್ತಿದೆ. ಅವ್ಯವಹಾರ ತಡೆಯಲು ಹೋಗಿದ್ದ ಪೊಲೀಸ್ ಅಧಿಕಾರಿಯನ್ನೆ ಕೊಲೆ ಮಾಡಲಾಗಿದೆ. ಹಿರಿಯ ಅಧಿಕಾರಿಗಳು ಸರ್ಕಾರದ ಮುಂದೆ ತಲೆಬಾಗಿ ಅವರ ಮುಂದೆ ನಿಂತಿದ್ದಾರೆ. ಹೀಗಾಗಿ ಕೊಲೆಗಡುಕರಿಗೆ ಯಾವುದೇ ಭಯವಿಲ್ಲದಂತಾಗಿದೆ. ದಪ್ಪ ಚರ್ಮದ ಸರ್ಕಾರ ನಮ್ಮ ಮನವಿಗೆ ಸ್ಪಂದಿಸುತ್ತಿಲ್ಲ ಎಂದು ಬಸವರಾಜ ಬೊಮ್ಮಾಯಿ ಆರೋಪಿಸಿದರು.

ಕಾನೂನು ಸುವ್ಯವಸ್ಥೆ ಕಲ್ಪಿಸಲು ಡಿಜಿ ಐಜಿಯನ್ನು ಕರೆಸಿಕೊಂಡು ಸೂಚನೆ ನೀಡುವಂತೆ ರಾಜ್ಯಪಾಲರಿಗೆ ಮನವಿ ಮಾಡಿದ್ದೇವೆ. ಹಾಗೂ ಇಲ್ಲಿನ ಪರಿಸ್ಥಿತಿಯನ್ನು ಕೇಂದ್ರ ಸರ್ಕಾರದ ಗಮನಕ್ಕೆ ತರುವಂತೆ ಮನವಿ ಮಾಡಿದ್ದೇವೆ. ಅವರು ಹಿರಿಯ ಅಧಿಕಾರಿಗಳನ್ನು ಕರೆಯಿಸಿಕೊಂಡು ಮಾತನಾಡುವುದಾಗಿ ಹೇಳಿದ್ದಾರೆ. ರಾಜ್ಯಪಾಲರು ಯಾವ ರೀತಿಯ ಸೂಚನೆ ನೀಡುತ್ತಾರೆ ಎಂಬುದನ್ನು ನೋಡಿಕೊಂಡು ಜನರ ಬಳಿ ತೆಗೆದುಕೊಂಡು ಹೋಗುತ್ತೇವೆ ಎಂದು ಅವರು ಹೇಳಿದರು.

ರಾಷ್ಟ್ರೀಯ ಲೋಕ ಅದಾಲತ್‌ನಲ್ಲಿ 13,414 ಪ್ರಕರಣಗಳ 64.2 ಕೋಟಿ ರೂ. ಇತ್ಯರ್ಥ



ಮೈಸೂರು, ಜು.12(ಆರ್‌ಕೆ)– ಜುಲೈ 8ರಂದು ನಡೆದ ರಾಷ್ಟ್ರೀಯ ಲೋಕ ಅದಾಲತ್‌ನಲ್ಲಿ ಮೈಸೂರು ನಗರ ಮತ್ತು ಜಿಲ್ಲೆಯಾದ್ಯಂತ ಒಟ್ಟು 13,414 ಪ್ರಕರಣಗಳನ್ನು ಇತ್ಯರ್ಥಗೊಳಿಸಲಾಗಿದ್ದು, 64,02,79,018 ರೂ.ಗಳಿಗೆ ಸೆಟಲ್‌ಮೆಂಟ್ ಮಾಡಲಾಗಿದೆ ಎಂದು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಬಿ.ಜಿ.ದಿನೇಶ್ ತಿಳಿಸಿದ್ದಾರೆ.

ಜಿಲ್ಲೆಯ ಎಲ್ಲಾ ನ್ಯಾಯಾಲಯಗಳಲ್ಲಿ 1,14,884 ಪ್ರಕರಣಗಳು ಬಾಕಿ ಇದ್ದು, ಆ ಪೈಕಿ 17,446 ಪ್ರಕರಣಗಳನ್ನು ರಾಜಿ ಸಂಧಾನಕ್ಕೆ ತೆಗೆದುಕೊಂಡು 13,414 ಪ್ರಕರಣಗಳನ್ನು ಇತ್ಯರ್ಥಪಡಿಸಲಾಗಿದೆ. ಸಂಚಾರ ಉಲ್ಲಂಘನೆ ಪ್ರಕರಣಗಳಲ್ಲಿ 2,01,078 ಇತ್ಯರ್ಥಗೊಂಡಿದ್ದು, 4,44,80,014 ರೂ.ಗಳ ದಂಡದ ಹಣ ಸ್ವೀಕೃತವಾಗಿದೆ ಎಂದು ತಿಳಿಸಿದ್ದಾರೆ. ರಾಷ್ಟ್ರೀಯ ಲೋಕ ಅದಾಲತ್‌ನಲ್ಲಿ ಕೌಟುಂಬಿಕ ಕಲಹಗಳಿಂದ ದೂರವಾಗಿದ್ದ 42 ದಂಪತಿ ಒಂದಾಗಿ ಮತ್ತೆ ಸಹಬಾಳ್ವೆ ನಡೆಸಲು ಒಪ್ಪಿದ್ದಾರೆ. 678 ಚೆಕ್ ಬೌನ್ಸ್, 238 ಮೋಟಾರು ವಾಹನ, 124 ಕೌಟುಂಬಿಕ ಕಲಹ ಪ್ರಕರಣಗಳು, 396 ಕ್ರಿಮಿನಲ್ ಕಾಂಪೌಂಡಬಲ್ ಹಾಗೂ 125 ವಿಭಾಗ ವ್ಯಾಜ್ಯಗಳು ಇತ್ಯರ್ಥವಾದಂತಾಗಿದೆ ಎಂದು ತಿಳಿಸಿದ್ದಾರೆ.

ಬಿಜೆಪಿಯದ್ದು ಸಾವಿನಲ್ಲೂ ರಾಜಕೀಯ ಮಾಡುವ ಚಾಳಿ

ಮೈಸೂರು,ಜು.12(ಎಂಟಿವೈ)– ಸಾವಿನಲ್ಲೂ ರಾಜಕೀಯ ಮಾಡುವ ಚಾಳಿ ಮುಂದುವರೆಸಿರುವ ಬಿಜೆಪಿ ನಾಯಕರು ತಿ.ನರಸೀಪುರದ ವೇಣುಗೋಪಾಲ ನಾಯಕ ಕೊಲೆ ಪ್ರಕರಣವನ್ನು ಬಳಸಿಕೊಂಡು ಸಂತ್ರಸ್ತ ಕುಟುಂಬದವರನ್ನು ಬೀದಿಗೆ ಳೆಯುತ್ತಿದ್ದಾರೆ ಎಂದು ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಆರೋಪಿಸಿದ್ದಾರೆ.

ಮೈಸೂರಿನ ಕಾಂಗ್ರೆಸ್ ಭವನದಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ವಿಧಾನಸಭಾ ಚುನಾವಣೆಯಲ್ಲಿ ರಾಜ್ಯದ ಜನ ಬಿಜೆಪಿಗೆ ತಕ್ಕ ಪಾಠ ಕಲಿಸಿದ್ದರೂ ಇನ್ನು ಬುದ್ಧಿ ಬಂದಂತೆ ಕಾಣುತ್ತಿಲ್ಲ. ಹಿಂದುತ್ವದ ಹೆಸರಲ್ಲಿ ಬೇಳೆ ಬೇಯಿಸಿಕೊಳ್ಳುವ ಕೆಲಸ ಮಾಡುತ್ತಿದ್ದಾರೆ. ಕೇಂದ್ರದ ಸೂಚನೆ ಮೇರೆಗೆ ರಾಜ್ಯದಲ್ಲಿ ಕಾಂಗ್ರೆಸ್ ವರ್ಚಸ್ಸು ಕುಂದಿಸಲು, ಆ ಮೂಲಕ ಲೋಕಸಭಾ ಚುನಾವಣೆಯಲ್ಲಿ ಲಾಭ ಮಾಡಿಕೊಳ್ಳಲು ಹುನ್ನಾರ ನಡೆಸುತ್ತಿದ್ದಾರೆ. ಆದರೆ ರಾಜ್ಯದ ಜನತೆ ಬಿಜೆಪಿಗೆ ಪಾಠ ಕಲಿಸುತ್ತಾರೆ ಎಂದರು.

ಬಿಜೆಪಿಯವರು ಅಧಿಕಾರದಲ್ಲಿದ್ದಾಗ 1560 ಕೊಲೆಗಳಾಗಿವೆ. ಇವುಗಳಲ್ಲಿ ಶೇ.90 ಹಿಂದೂಗಳು. ಇವರಲ್ಲಿ ಎಷ್ಟು ಜನರಿಗೆ ಪರಿಹಾರ ಕೊಟ್ಟಿದ್ದಾರೆ ಎಂದು ಬಹಿರಂಗಪಡಿಸುವಂತೆ ಆಗ್ರಹಿಸಿದರು.

ತಿ.ನರಸೀಪುರದಲ್ಲಿ ವೇಣುಗೋಪಾಲ ನಾಯಕ ಕೊಲೆಗೆ ದೇವಾಲಯದ ಆವರಣಕ್ಕೆ ಬೈಕ್ ಬಿಡದಿರುವುದು ಮತ್ತು ಪುನೀತ್ ರಾಜ್‌ಕುಮಾರ್ ಫೋಟೋ ತೆಗೆಯುವಂತೆ ಹೇಳಿದ್ದೆ ಕಾರಣವೆಂದು ದೂರುದಾರ, ಜಿಲ್ಲಾ ಯುವ ಬ್ರಿಗೇಡ್ ಅಧ್ಯಕ್ಷ ರಾಮಾನುಜಂ ಹೇಳಿದ್ದಾರೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸರು 6 ಮಂದಿ ಆರೋಪಿಗಳನ್ನು ಬಂಧಿಸಿದ್ದಾರೆ. ಪ್ರಕರಣದ 4ನೇ ಆರೋಪಿ ಶಂಕರ್ ಅಲಿಯಾಸ್ ತುಪ್ಪ ಮೈಸೂರು ಮಹಾನಗರ ಪಾಲಿಕೆ ಬಿಜೆಪಿ ಸದಸ್ಯೆ ಸಹೋದರ. ಇದರ ಬಗ್ಗೆ ಬಿಜೆಪಿ ನಾಯಕರು ಏನು ಹೇಳುತ್ತಾರೆ ಎಂದು ಕಿಡಿಕಾರಿದರು.

ಬಿಜೆಪಿ ಸತ್ಯಶೋಧನಾ ಸಮಿತಿಯಲ್ಲಿ ಇರುವ ಎಲ್ಲರೂ ನಾಟಕ ಮಾಡುತ್ತಿದ್ದಾರೆ. ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರ ಪುತ್ರ ಸುನಿಲ್ ಬೋಸ್ ಮೇಲೆ ಚಕ್ರವರ್ತಿ ಸೂಲಿಬೆಲೆ ಇಲ್ಲಸಲ್ಲದ ಆರೋಪ ಮಾಡುತ್ತಿದ್ದಾರೆ. ಮಂಡ್ಯದಲ್ಲಿ ಫೈಟರ್ ರವಿಗೆ ಪ್ರಧಾನಿ ಮೋದಿ ಕೈ ಮುಗಿದಿದ್ದರು. ಇದನ್ನು ಸೂಲಿಬೆಲೆ ಯಾವ ರೀತಿ ವ್ಯಾಖ್ಯಾನಿಸುತ್ತಾರೆ. ಚಕ್ರವರ್ತಿ ಸೂಲಿಬೆಲೆ ಪ್ರಚೋದನೆ ನೀಡಿದರೆ ದೂರು ನೀಡುವುದಾಗಿ ಎಚ್ಚರಿಸಿದರು. ಸುದ್ದಿಗೋಷ್ಠಿಯಲ್ಲಿ ಜಿ.ಪಂ. ಮಾಜಿ ಅಧ್ಯಕ್ಷ ಬಿ.ಎಂ.ರಾಮು, ಮುಖಂಡರಾದ ಎಂ.ಶಿವಣ್ಣ, ಗಿರೀಶ್, ಮಾಧ್ಯಮ ವಕ್ತಾರ ಎಂ.ಮಹೇಶ್ ಇದ್ದರು.

ನಾಳೆ ಚಲನಚಿತ್ರ ಗಾಯನೋತ್ಸವ



ಮೈಸೂರು, ಜು.12(ಜಿಎ)–ಮೈಸೂರಿನ ರಾಗಮಾಲಿಕಾ ಸ್ನೇಹ ಬಳಗದ ವತಿಯಿಂದ ಜು.14ರಂದು ಚಲನಚಿತ್ರ ಗೀತೆಗಳ ಗಾಯನೋತ್ಸವ ಆಯೋಜಿಸಲಾಗಿದೆ ಎಂದು ಬಳಗದ ಗಾಯಕ ಆರ್.ಕೃಷ್ಣಮೂರ್ತಿ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಸಂಜೆ 5 ಗಂಟೆಗೆ ನಗರದ ನಾದಬ್ರಹ್ಮ ಸಂಗೀತ ಸಭಾದಲ್ಲಿ 70–80ರ ದಶಕದ ಕನ್ನಡ ಮತ್ತು ಹಿಂದಿ ಚಿತ್ರಗೀತೆಗಳ ಗಾಯನ ಕಾರ್ಯಕ್ರಮವನ್ನು ಏರ್ಪಡಿಸಿದ್ದು, ಹೊಸ ಪ್ರತಿಭೆಗಳನ್ನು ಹೊರತರುವ ಉದ್ದೇಶದಿಂದ ಬಳಗವು ಈ ಕಾರ್ಯಕ್ರಮವನ್ನು ಆಯೋಜಿಸಿದೆ ಎಂದು ಹೇಳಿದರು.

ಗಾಯನೋತ್ಸವವು ಎಂ.ಆರ್.ವೆಂಕಟೇಶ್ ಪ್ರೋತ್ಸಾಹದಿಂದ ನಡೆಯುತ್ತಿದ್ದು, ನಿವೃತ್ತ ಇಂಜಿನಿಯರ್‌ಗಳಾದ ಎಂ.ಸುರೇಶ್, ರಾಜಶೇಖರ ಎಂ.ಜವಳಗಿ, ಕೆ.ಎಸ್.ಹರೀಶ್, ಗಾಯಕಿಯರಾದ ಶಿಲ್ಪ, ಅಶ್ವಿನಿ, ಜಯಶ್ರೀ ಮತ್ತು ಗಾಯಕ ಎಸ್.ಕೆ.ಮೋಹನ್ ಡಬಲ್ ವಾಯ್ಸ್ ಮೂಲಕ ಚಿತ್ರಗೀತೆಗಳನ್ನು ಪ್ರಸ್ತುತಪಡಿಸುತ್ತೇವೆಂದು ತಿಳಿಸಿದರು. ಗೋಷ್ಠಿಯಲ್ಲಿ ಎಂ.ಸುರೇಶ್, ರಾಜಶೇಖರ್ ಎಂ.ಜವಳಗಿ, ಮೋಹನ್‌ಕುಮಾರ್ ಉಪಸ್ಥಿತರಿದ್ದರು.

ಜು.14, 15ರಂದು ರೇಕಿ ಸೆಮಿನಾರ್



ಮೈಸೂರು, ಜು.12(ಜಿಎ)–ಮೈಸೂರಿನಲ್ಲಿ ಎರಡು ದಿನಗಳ ರೇಕಿ ಸೆಮಿನಾರ್ ಏರ್ಪಡಿಸಲಾಗಿದೆ ಎಂದು ಸುಪ್ರೀಂ ರೇಹೀಲಿಂಗ್ ಸೆಂಟರ್‌ನ ಮುಖ್ಯಸ್ಥರಾದ ಎನ್.ವಿಜಯಲಕ್ಷ್ಮೀ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೃಷ್ಣಮೂರ್ತಿಪುರಂನಲ್ಲಿರುವ ಶ್ರೀರಾಮಮಂದಿರದಲ್ಲಿ ಜು.14 ಮತ್ತು 15ರಂದು ಬೆಳಗ್ಗೆ 10ರಿಂದ 3 ಗಂಟೆವರೆಗೂ ಉಚಿತ ರೇಕಿ ಸೆಮಿನಾರ್ ಮತ್ತು ಚಿಕಿತ್ಸೆ ಏರ್ಪಡಿಸಲಾಗಿದ್ದು, ಮೈಸೂರಿನ ಜನತೆ ಈ ಸದವಕಾಶವನ್ನು ಉಪಯೋಗಿಸಿಕೊಳ್ಳಿ ಎಂದರು. ಬೆಂಗಳೂರಿನಲ್ಲಿ ಕಳೆದ 23 ವರ್ಷದಿಂದ ರೇಕಿ ಚಿಕಿತ್ಸೆಯ ತರಬೇತಿಗಳನ್ನು ನಡೆಸುತ್ತಿದ್ದು, ಇದರಿಂದ ಅನೇಕ ಜನರು ನಿದ್ರೆ ಸಮಸ್ಯೆ, ಸಕ್ಕರೆ ಕಾಯಿಲೆ, ರಕ್ತದೊತ್ತಡ ಸೇರಿದಂತೆ ಅನೇಕ ಸಮಸ್ಯೆಗಳಿಂದ ಪರಿಹಾರ ಪಡೆದುಕೊಂಡಿದ್ದಾರೆ. ಮೈಸೂರಿಗರು ಈಗ ರೇಕಿ ಬಗ್ಗೆ ಮಾಹಿತಿ ಪಡೆಯಲು ಬಯಸಿದ್ದರು. ಅದರಂತೆ ಎರಡು ದಿನ ಸೆಮಿನಾರ್ ಮತ್ತು ಚಿಕಿತ್ಸೆ ಏರ್ಪಡಿಸಿದ್ದು, ಹೆಚ್ಚಿನ ಮಾಹಿತಿಗಾಗಿ 9481958919 ಸಂಪರ್ಕಿಸಬಹುದು ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ವಿಜಯಕುಮಾರ್ ಉಪಸ್ಥಿತರಿದ್ದರು.

ಲೂಯಿ ಪಾಶ್ಚರ್ ಪ್ರಶಸ್ತಿ ವಿಜೇತ ರೇಷ್ಮೆ ವಿಜ್ಞಾನಿ ಡಾ. ಎಂ.ಎನ್.ನರಸಿಂಹಣ್ಣ ನಿಧನ




ಮೈಸೂರು, ಜು. 12– ರೇಷ್ಮೆ ವಿಜ್ಞಾನಿ, ಸೆಂಟ್ರಲ್ ಸಿಲ್ಕ್ ಬೋರ್ಡಿನ ನಿವೃತ್ತ ನಿರ್ದೇಶಕರೂ ಆದ ಲೂಯಿ ಪಾಶ್ಚರ್ ಪ್ರಶಸ್ತಿ ವಿಜೇತ ಡಾ.ಎಂ.ಎನ್.ನರಸಿಂಹಣ್ಣ ಮಂಗಳವಾರ ಸರಿರಾತ್ರಿ ಜೆಎಸ್‌ಎಸ್ ಆಸ್ಪತ್ರೆಯಲ್ಲಿ ನಿಧನರಾದರು. ಅವರಿಗೆ 93 ವರ್ಷ ವಯಸ್ಸಾಗಿತ್ತು. ಅವರು 1989ರಲ್ಲಿ ನಿವೃತ್ತರಾಗಿದ್ದರು.

ಮೃತರು ಇಬ್ಬರು ಮಕ್ಕಳು, ಸೊಸೆಯಂದಿರು ಹಾಗೂ ಮೊಮ್ಮಕ್ಕಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಬುಧವಾರ ಮಧ್ಯಾಹ್ನ ಚಾಮುಂಡಿಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಡಾ.ನರಸಿಂಹಣ್ಣ ಅವರು ರೇಷ್ಮೆಯಲ್ಲಿ ದ್ವಿತಳಿ (ಬೈವೋಲ್ಟೈನ್)ಯನ್ನು ಕಂಡುಹಿಡಿದ ವಿಜ್ಞಾನಿ. ಇವರ ಸಂಶೋಧನೆಯ ಫಲವಾಗಿ ಕಂಡುಹಿಡಿದ ನೂತನ ರೇಷ್ಮೆ ಸಾಕಾಣಿಕೆ ವಿಧಾನ ಮತ್ತು ಹೊಸ ರೇಷ್ಮೆ ತಳಿಗಳಿಂದ ಭಾರತ ದೇಶದ ರೇಷ್ಮೆ ಉತ್ಪಾದನೆ ದ್ವಿಗುಣಗೊಂಡಿತು. ಅವರು ಮಾಡಿದ ಸಾಧನೆಗೆ ಲೂಯಿ ಪಾಶ್ಚರ್ ಪ್ರಶಸ್ತಿ ದೊರೆತಿದೆ. ಅವರು 'ರೇಷ್ಮೆ ಕೃಷಿ ಕೈಪಿಡಿ' ಎಂಬ ಪುಸ್ತಕವೂ ಸೇರಿದಂತೆ ಅನೇಕ ಕೃತಿಗಳನ್ನು ಕನ್ನಡ ಹಾಗೂ ಇಂಗ್ಲಿಷ್‌ನಲ್ಲಿ ರಚಿಸಿದ್ದಾರೆ.

ಕೊಬ್ಬರಿಗೆ ಕೇಂದ್ರ ನಿಗದಿಪಡಿಸಿದ ಬೆಂಬಲ ಬೆಲೆಗೆ ರಾಜ್ಯದ 1250 ರೂ. ಪ್ರೋತ್ಸಾಹ ಧನ

ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಪಾಟೀಲ್ ವಿಧಾನಸಭೆಗೆ ಮಾಹಿತಿ




ಶಿವಾನಂದ ಪಾಟೀಲ್

ಬೆಂಗಳೂರು,ಜು.12(ಕೆಎಂಶಿ)–ಕೇಂದ್ರ ಸರ್ಕಾರ ನಿಗದಿಪಡಿಸಿರುವ ಬೆಂಬಲ ಬೆಲೆಯಡಿ ಖರೀದಿಸುವ ಪ್ರತೀ ಕ್ವಿಂಟಾಲ್ ಉಂಡೆ ಕೊಬ್ಬರಿಗೆ 1,250 ರೂ. ಪ್ರೋತ್ಸಾಹ ಧನವನ್ನು ರಾಜ್ಯ ಸರ್ಕಾರದಿಂದ ನೀಡಲಾಗುವುದು ಎಂದು ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಪಾಟೀಲ್ ವಿಧಾನಸಭೆಗೆ ತಿಳಿಸಿದರು.

ಸದನ ಸಮಾವೇಶಗೊಂಡಾಗ ಕೊಬ್ಬರಿ ಬೆಲೆ ಕುಸಿತ ಚರ್ಚೆಗೆ ಸಂಬಂಧಿಸಿದಂತೆ ಉತ್ತರ ನೀಡಿದ ಅವರು, ಇಂದಿನಿಂದ ಕೊಬ್ಬರಿ ಖರೀದಿಗೆ 1,250 ರೂ. ಪ್ರೋತ್ಸಾಹ ಧನ ನೀಡಲಾಗುವುದು. ಈ ಹಿಂದೆ ಬೆಂಬಲ ಬೆಲೆ ಯೋಜನೆಯಡಿ ಕೊಬ್ಬರಿ ಮಾರಾಟ ಮಾಡಿದವರಿಗೆ ಇದು ಅನ್ವಯವಾಗುವುದಿಲ್ಲ ಎಂದು ಸ್ಪಷ್ಟಪಡಿಸಿದರು.

ಕೇಂದ್ರ ಸರ್ಕಾರ ಪ್ರತೀ ಕ್ವಿಂಟಾಲ್ ಉಂಡೆ ಕೊಬ್ಬರಿಗೆ 11,750 ರೂ. ಬೆಂಬಲ ಬೆಲೆ ನಿಗದಿಪಡಿಸಿದೆ. ಇದರ ಜೊತೆಗೆ ರಾಜ್ಯ ಸರ್ಕಾರ 1,250 ರೂ. ಪ್ರೋತ್ಸಾಹ ಧನ ನೀಡಲಿದೆ. ಕೇಂದ್ರ ಸರ್ಕಾರದ ಏಜೆನ್ಸಿ ನ್ಯಾಫೆಡ್ ಮೂಲಕ ರಾಜ್ಯ ಏಜೆನ್ಸಿ ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾ ಮಂಡಳದ ಮೂಲಕ 45,038 ಮೆಟ್ರಿಕ್ ಟನ್ ಉಂಡೆ ಕೊಬ್ಬರಿ ಖರೀದಿಸಲಾಗಿದೆ ಎಂದರು.

2022–23ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ ತುಮಕೂರು, ಹಾಸನ, ಚಿಕ್ಕಮಗಳೂರು, ಚಿತ್ರದುರ್ಗ, ಮಂಡ್ಯ, ಮೈಸೂರು, ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ 6.43 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ 26.06 ಲಕ್ಷ ಮೆಟ್ರಿಕ್ ಟನ್ ತೆಂಗು ಹಾಗೂ ಕೊಬ್ಬರಿ ಉತ್ಪಾದನೆಯಾಗಿದೆ. ಎಂಎಸ್ಪಿ ಅಡಿ ಕೊಬ್ಬರಿ ಖರೀದಿಗೆ 37,632 ರೈತರು ನೋಂದಣಿ ಮಾಡಿಕೊಂಡಿದ್ದಾರೆ. ನಿನ್ನೆಯವರೆಗೆ 31,641 ರೈತರು ಪ್ರಯೋಜನ ಪಡೆದಿದ್ದಾರೆ. ಜುಲೈ 26ರವರೆಗೂ ಖರೀದಿ ಪ್ರಕ್ರಿಯೆ ಚಾಲನೆಯಲ್ಲಿರುತ್ತದೆ ಎಂದರು.

ವಿವಿಧ ಮಾರುಕಟ್ಟೆಗಳಲ್ಲಿ ಪ್ರತಿ ಕ್ವಿಂಟಾಲ್ ಕೊಬ್ಬರಿಗೆ 7,700ರಿಂದ 8,020 ರೂ.ವರೆಗೆ ಮಾರಾಟವಾಗುತ್ತಿದೆ. ರಾಜ್ಯಸರ್ಕಾರವು ಕೊಬ್ಬರಿ ಖರೀದಿ ಪ್ರಮಾಣ ಹೆಚ್ಚಳ ಹಾಗೂ ಖರೀದಿ ಅವಧಿ ವಿಸ್ತರಣೆಗೆ ಕೇಂದ್ರ ಸರ್ಕಾರವನ್ನು ಕೋರಿದೆ. ಕೇಂದ್ರ ಸರ್ಕಾರ ಖರೀದಿ ಪ್ರಮಾಣ ಹೆಚ್ಚಳ ಹಾಗೂ ಅವಧಿ ವಿಸ್ತರಣೆಗೆ ಅನುಮತಿ ನೀಡಿದ ಬಳಿಕ ನೋಂದಾಯಿಸುವವರಿಗೂ ಪ್ರೋತ್ಸಾಹ ಧನ ದೊರೆಯಲಿದೆ ಎಂದು ಸ್ಪಷ್ಟಪಡಿಸಿದರು. ರಾಜ್ಯ ಸರ್ಕಾರದಿಂದ ಇದುವರೆಗೆ 1,000 ರೂ. ಮಾತ್ರ ಪ್ರೋತ್ಸಾಹ ಧನ ನೀಡಲಾಗಿತ್ತು. ಇದೇ ಮೊದಲ ಬಾರಿಗೆ 1,250 ರೂ. ಪ್ರೋತ್ಸಾಹ ಧನ ಕೊಡಲಾಗುತ್ತಿದೆ ಎಂದರು. ಕೇಂದ್ರ ಸರ್ಕಾರಕ್ಕೆ ರಾಜ್ಯ ಸರ್ಕಾರವು ಬೆಂಬಲ ಬೆಲೆ ಯೋಜನೆಯಡಿ ಪ್ರತೀ ಕ್ವಿಂಟಾಲ್ ಕೊಬ್ಬರಿಗೆ 16,500 ರೂ.ವರೆಗೆ ಹೆಚ್ಚಿಸಬೇಕು. ಉತ್ಪಾದನೆಯ ಶೇ.25ರಿಂದ ಶೇ.50ರಷ್ಟು ಖರೀದಿಗೆ ಅವಕಾಶ ನೀಡುವಂತೆ ಮನವಿ ಮಾಡಿದ್ದೇವೆ ಎಂದರು.

ಇದಕ್ಕೂ ಮುನ್ನ ಮಾತನಾಡಿದ ಆಡಳಿತ ಪಕ್ಷದ ಕೆ.ಎಂ.ಶಿವಲಿಂಗೇಗೌಡ, ಕೊಬ್ಬರಿ ಖರೀದಿಗೆ ರಾಜ್ಯ ಸರ್ಕಾರ ಪ್ರತೀ ಕ್ವಿಂಟಾಲ್ 1,250 ರೂ. ನೀಡುತ್ತಿರುವುದು ಸ್ವಾಗತಾರ್ಹ. ಆದರೂ ಕೊಬ್ಬರಿ ಬೆಳೆಯುವ ರೈತರ ಸಮಸ್ಯೆ ಬಗೆಹರಿಯುವುದಿಲ್ಲ. ಕೇಂದ್ರ ಸರ್ಕಾರ ಎಂಎಸ್ಪಿ ದರವನ್ನು 15,000 ರೂ.ಗೆ ಪರಿಷ್ಕರಣೆ ಮಾಡಬೇಕೆಂದು ಒತ್ತಾಯಿಸಿದರು.

ಜೆಡಿಎಸ್ ಶಾಸಕ ಸಿ.ಎನ್.ಬಾಲಕೃಷ್ಣ ಮಾತನಾಡಿ, ಈಗಾಗಲೇ ಕೊಬ್ಬರಿಯನ್ನು ಬೆಂಬಲ ಬೆಲೆಯಡಿ ಮಾರಾಟ ಮಾಡಿದವರಿಗೂ ಪ್ರೋತ್ಸಾಹ ಧನ ನೀಡಬೇಕು. ಕೊಬ್ಬರಿ ಬೆಂಬಲ ಬೆಲೆ ಹೆಚ್ಚಳಕ್ಕೆ ಕೇಂದ್ರ ಸರ್ಕಾರದ ಬಳಿ ನಿಯೋಗ ಕೊಂಡೊಯ್ಯಬೇಕು. ಪ್ರೋತ್ಸಾಹ ಧನವನ್ನು ಪ್ರತೀ ಕ್ವಿಂಟಾಲ್‌ಗೆ 2,500 ರೂ.ಗೆ ಹೆಚ್ಚಿಸಬೇಕು ಎಂದು ಆಗ್ರಹಿಸಿದ. ಆಡಳಿತ ಪಕ್ಷದ ಮತ್ತೊಬ್ಬ ಶಾಸಕ ಷಡಕ್ಷರಿ ಮಾತನಾಡಿ, ಕೊಬ್ಬರಿ ಖರೀದಿ ಮಾಡುವ ಅವಧಿ ಹಾಗೂ ಪ್ರಮಾಣವನ್ನು ಹೆಚ್ಚಳ ಮಾಡಲು ಮನವಿ ಮಾಡಬೇಕೆಂದರು.

ಸಾಧಕ ದಂಪತಿಗೆ ಕುದೇರು ಮಠದಿಂದ ಸನ್ಮಾನ




ಮೈಸೂರು,ಜು.12–ಸಾಧಕ ವಿಜ್ಞಾನಿ ದಂಪತಿ ಹಾಗೂ ಮೈಸೂರು ಜೆಎಸ್‌ಎಸ್ ವೈದ್ಯಕೀಯ ಮಹಾವಿದ್ಯಾಲಯದ ಸಹ ಪ್ರಾಧ್ಯಾಪಕ ಹಾಗೂ ಸರ್.ಸಿ.ವಿ. ರಾಮನ್ ಯುವ ವಿಜ್ಞಾನಿ ರಾಜ್ಯ ಪ್ರಶಸ್ತಿ ಪಡೆದಿರುವ ಡಾ.ಪ್ರಸನ್ನ ಸಂತೇಕಡೂರು ಹಾಗೂ ಅವರ ಪತ್ನಿ, ಡಾ.ದಿವ್ಯ ಪ್ರಸನ್ನ ಕುಮಾರ್ ಅವರನ್ನು ಮೈಸೂರಿನ ಶ್ರೀ ಗುರುಮಲ್ಲೇಶ್ವರ ಬಡಾವಣೆಯಲ್ಲಿರುವ ಕುದೇರು ಮಠದ ಬಸವ ಜಯಂತಿ ಕಾರ್ಯಕ್ರಮದಲ್ಲಿ ಇತ್ತೀಚೆಗೆ ಸನ್ಮಾನಿಸಲಾಯಿತು.

ಈ ಸಂದರ್ಭದಲ್ಲಿ ಕುದೇರು ಮಠದ ಶ್ರೀ ಗುರುಶಾಂತ ಸ್ವಾಮೀಜಿ, ಮೈಸೂರು ವಿಶ್ವವಿದ್ಯಾನಿಲಯದ ನಿವೃತ್ತ ಪ್ರಾಧ್ಯಾಪಕ ಶಿವರಾಜಪ್ಪ, ಸಾಮಾಜಿಕ ಕಾರ್ಯಕರ್ತ ಶಿವರಾಜು ಇನ್ನಿತರರು ಉಪಸ್ಥಿತರಿದ್ದರು. ಇದೇ ವೇಳೆ ಇತ್ತೀಚೆಗೆ ಪಿಎಚ್.ಡಿ. ಪದವಿ ಪಡೆದ ಜೆಎಸ್‌ಎಸ್ ಊಟಿ ರಸ್ತೆ ಕಾಲೇಜಿನ ಸಹಾಯಕ ಪ್ರಾಧ್ಯಾಪಕ ಎನ್.ವಿಜೇಂದ್ರ ಕುಮಾರ್ ಅವರನ್ನು ಸನ್ಮಾನಿಸಲಾಯಿತು.

ಇಂದು ವಿವಿಧೆಡೆ ವಿದ್ಯುತ್ ವ್ಯತ್ಯಯ

ಮೈಸೂರು,ಜು.12– ನಾಳೆ (ಗುರುವಾರ) ಬೆಳಗ್ಗೆ 10ರಿಂದ ಸಂಜೆ 6 ಗಂಟೆಯವರೆಗೆ ಗೋಪಾಲಗೌಡ ಆಸ್ಪತ್ರೆಯಿಂದ ನಂದಿನಿ ಹಾಲಿನ ಕೇಂದ್ರದವರೆಗೆ ರಸ್ತೆ ಅಗಲೀಕರಣ ಕಾಮಗಾರಿ ನಿಮಿತ್ತ ಗೋಪಾಲಗೌಡ ಆಸ್ಪತ್ರೆ, ಬ್ರಿಗೇಡ್ ಅಪಾರ್ಟ್‌ಮೆಂಟ್, ವಾಟಿಕ ಅಪಾರ್ಟ್‌ಮೆಂಟ್‌ನಿಂದ ನಂದಿನಿ ಹಾಲಿನ ಕೇಂದ್ರದವರೆಗೆ ಹಾಗೂ ಸುತ್ತ–ಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ನಿಲುಗಡೆಯಾಗಲಿದ್ದು ಸಾರ್ವಜನಿಕರು ಹಾಗೂ ಕೈಗಾರಿಕೋದ್ಯಮಿಗಳು ಸಹಕರಿಸಬೇಕೆಂದು ಸೆಸ್ಕ್ ಪ್ರಕಟಣೆ ತಿಳಿಸಿದೆ.



ಪಂಚಮಸಾಲಿ ಲಿಂಗಾಯತರ ಮೀಸಲಾತಿ ಗೊಂದಲ ನಿವಾರಿಸಿ



ಮೈಸೂರು, ಜು.12(ಜಿಎ)– ಪಂಚಮಸಾಲಿ ಲಿಂಗಾಯತ ಗೌಡ ಸಮುದಾಯದ ಮೀಸಲಾತಿ ವಿಚಾರಕ್ಕೆ ಸಂಬಂಧಿಸಿದಂತೆ ಮುಖ್ಯಮಂತ್ರಿಗಳು ಸಭೆ ಕರೆದು ಕಾನೂನಿನ ಅಡೆತಡೆ ನಿವಾರಿಸಿ ನ್ಯಾಯ ದೊರಕಿಸಿಕೊಡಬೇಕೆಂದು ಶ್ರೀ ಬಸವ ಜಯ ಮೃತ್ಯುಂಜಯ ಸ್ವಾಮೀಜಿ ಒತ್ತಾಯಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಲಿಂಗಾಯತ ಪಂಚಮಸಾಲಿ, ಲಿಂಗಾಯತಗೌಡ, ಮಲೆಗೌಡ ಲಿಂಗಾಯತರ ಮಕ್ಕಳ ಶಿಕ್ಷಣ ಹಾಗೂ ವಿದ್ಯಾರ್ಥಿಗಳ ಉದ್ಯೋಗಕ್ಕಾಗಿ ಅವಶ್ಯಕತೆ ಇರುವ ರಾಜ್ಯ ಸರ್ಕಾರದ 2ಎ ಮೀಸಲಾತಿಗಾಗಿ ಕಳೆದ ಮೂರು ವರ್ಷಗಳಿಂದ ನಿರಂತರವಾಗಿ ಹೋರಾಟ ಮಾಡಿದ ಪರಿಣಾಮ ಸರ್ಕಾರ ಹೋರಾಟಕ್ಕೆ ಮಣಿದು ಚುನಾವಣೆ ಸಂದರ್ಭದಲ್ಲಿ 2ಡಿ ಮೀಸಲಾತಿ ಘೋಷಣೆ ಮಾಡಿತ್ತು. ಆದರೆ, ಅದು ಈಗ ಸುಪ್ರಿಂಕೋರ್ಟ್‌ನಲ್ಲಿದ್ದು, ಇದರಿಂದ ಸಮುದಾಯದ ಮಕ್ಕಳು ಶಿಕ್ಷಣ ಮತ್ತು ಉದ್ಯೋಗದಿಂದ ವಂಚಿತರಾಗುತ್ತಿದ್ದಾರೆ ಎಂದರು.

ಈಗಾಗಲೇ ಸಮುದಾಯದ ಶಾಸಕರ ನಿಯೋಗ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ ಮೀಸಲಾತಿ ವಿಚಾರವಾಗಿ ಮನವಿ ಸಲ್ಲಿಸಿದ್ದಾರೆ. ಅದಕ್ಕೆ ಮುಖ್ಯಮಂತ್ರಿಗಳು ಅಧಿವೇಶನ ಮುಕ್ತಾಯಗೊಂಡ ಕೂಡಲೇ ಕಾನೂನು ಹಾಗೂ ಸಂವಿಧಾನದ ತಜ್ಞರ ಸಭೆ ಕರೆದು ಸರ್ಕಾರದ ನಿಲುವನ್ನು ತಿಳಿಸುವ ಭರವಸೆ ನೀಡಿದ್ದಾರೆ. ಆದ್ದರಿಂದ ಆದಷ್ಟು ಬೇಗ ತಜ್ಞರ ಸಭೆ ಕರೆಯಬೇಕು. 2024ರೊಳಗೆ ಪಂಚಮಸಾಲಿ ಲಿಂಗಾಯತಗೌಡ ಒಳಗೊಂಡಂತೆ ಎಲ್ಲ ಲಿಂಗಾಯತ ಒಳ ಪಂಗಡಗಳನ್ನು ಕೇಂದ್ರದ ಒಬಿಸಿ ಮೀಸಲಾತಿಗೆ ಶಿಫಾರಸು ಮಾಡಬೇಕೆಂದು ಆಗ್ರಹಿಸಿದರು.

ಸರ್ಕಾರದ ಅಭಿಪ್ರಾಯದ ನಂತರ ಚಳವಳಿಗಾರರ ಹಾಗೂ ಸಮಾಜದ ಜನಪ್ರತಿನಿಧಿಗಳ ಸಭೆ ಕರೆದು ಹೋರಾಟದ ರೂಪುರೇಷೆಯನ್ನು ಸಿದ್ಧಪಡಿಸಲಾಗುವುದು ಎಂದು ಶ್ರೀ ಬಸವ ಜಯ ಮೃತ್ಯುಂಜಯ ಸ್ವಾಮೀಜಿ ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಲಿಂಗಾಯತಗೌಡ ಮಹಾಸಭಾ ರಾಜ್ಯಾಧ್ಯಕ್ಷ ಆಲನಹಳ್ಳಿ ಪುಟ್ಟಸ್ವಾಮಿ, ಕಾರ್ಯದರ್ಶಿ ಕೇಬಲ್ ಮಹೇಶ್, ನಗರಾಧ್ಯಕ್ಷ ಬಸವ ರಾಜೇಂದ್ರಸ್ವಾಮಿ, ಮೂಗೂರು ನಂಜುಂಡಸ್ವಾಮಿ ಉಪಸ್ಥಿತರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

13.7.2023 ಗುರುವಾರ, ಮಳೆ ನಕ್ಷತ್ರ: ಭರಣಿ 06.07.2023 ರಿಂದ 19.07.2023
ಶ್ರೀ ಶೋಭಕೃತ್ ನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಆಷಾಢ ಮಾಸ, ಕೃಷ್ಣ ಪಕ್ಷ,
ತಿಥಿ: ಏಕಾದಶಿ, ನಕ್ಷತ್ರ: ಕೃತ್ತಿಕಾ, ರಾಹುಕಾಲ: ಮಧ್ಯಾಹ್ನ 1.30 ರಿಂದ 3 ಗಂಟೆಯವರೆಗೆ

■ **ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್ :** ಅಂತರ ಕಾಲೇಜು ಮೈಸೂರು ವಿಭಾಗದ ಬ್ಯಾಡ್ಮಿಂಟನ್, ಟೇಬಲ್ ಟೆನ್ನಿಸ್ ಪುರುಷ ಮತ್ತು ಮಹಿಳಾ ಚಾಂಪಿಯನ್‌ಶಿಪ್ 2023–24, ಸ್ಥಳ: ಎನ್‌ಐಇ ವಜ್ರ ಮಹೋತ್ಸವ ಒಳಾಂಗಣ ಕ್ರೀಡಾ ಸಂಕೀರ್ಣ, ಬೆಳಗ್ಗೆ 9.30ಕ್ಕೆ

■ **ಮರಿಮಲ್ಲಪ್ಪನವರ ಪ್ರೌಢಶಾಲೆ:** ವಿದ್ಯಾರ್ಥಿ ಸಂಘದ ಉದ್ಘಾಟನಾ ಸಮಾರಂಭ, ಪ್ರತಿಭಾ ಪುರಸ್ಕಾರ, ಅಧ್ಯಕ್ಷತೆ: ಸಂಸ್ಥೆ ಗೌರವ ಕಾರ್ಯದರ್ಶಿ ಪ್ರೊ.ಪಂಚಾಕ್ಷರಸ್ವಾಮಿ, ಮುಖ್ಯ ಅತಿಥಿಗಳು: ಸಂಸ್ಕೃತಿ ಚಿಂತಕ ಪ್ರೊ.ಕೃಷ್ಣೇಗೌಡ, ಉಪಸ್ಥಿತರು: ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕ ಹೆಚ್.ಕೆ.ಪಾಂಡು, ಕ್ಷೇತ್ರ ಶಿಕ್ಷಣಾಧಿಕಾರಿ ಸಿ.ಎನ್.ರಾಜು, ಶೈಕ್ಷಣಿಕ ಅಧಿಕಾರಿ ಮಂಗಳ ಮುದ್ದುಮಾದಪ್ಪ, ಸ್ಥಳ: ಕಲಾಮಂದಿರ, ಬೆಳಗ್ಗೆ 9.30ಕ್ಕೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಮೂತ್ರ ವಿಕಾರಗಳ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 10 ರಿಂದ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ–ಡಾ.ಹೆಚ್.ವಿ.ನಾಗರಾಜರಾವ್, 6.15 ಗೀತಾರಾಧನ, 6.35 ಹಾಗೂ ಸಂಜೆ 6.10ಕ್ಕೆ "ಒಂದೇ ಕಥೆ" ವಿವಿಧ ಮುಖ–ಬಾನುಲಿ ಸರಣಿ, ಪ್ರಸ್ತುತಿ–ಪ್ರಭುಸ್ವಾಮಿ ಮಳಿಮಠ, 6.40 ಪದಸಂಸ್ಕೃತಿ, ಪ್ರಸ್ತುತಿ–ಡಾ.ಹೆಚ್.ವಿ.ನಾಗರಾಜರಾವ್, 7.15 ಭಾವಗೀತೆ–ಮೈಸೂರು ಅನಂತಸ್ವಾಮಿ, ವೃಂದಗಾನ, 8.30 ಹಾಡು ಹೇಳಿದ ಕಥೆ, ಪ್ರಸ್ತುತಿ–ಮೈಸೂರು ಉಮೇಶ್, 8.40 ಪಂಪನ ಪೆಂಪು–ಪಂಪ ಭಾರತದ ನಾಟಕೀಯ ಸನ್ನಿವೇಶಗಳನ್ನಾಧರಿಸಿದ ಕಾರ್ಯಕ್ರಮ, ಪ್ರಸ್ತುತಿ–ಜಿ.ಶಾಂತಕುಮಾರ್, 9.05 ವಸುಧೈವ ಕುಟುಂಬಕಂ–ಭಾರತ ಜಿ20 ಶೃಂಗಸಭೆಯ ಅಧ್ಯಕ್ಷತೆ ವಹಿಸಿದ ಸಂದರ್ಭದಲ್ಲಿ ವಿಶೇಷ ಸರಣಿ ಕಾರ್ಯಕ್ರಮ, 10.00 ಆರ್.ಮೋಹನ್ –ಕ್ಲಾರಿಯೋನೆಟ್ ವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ **ಮಧ್ಯಾಹ್ನ:** 12.30 ದೇವರನಾಮ–ಕೆ.ಎಲ್.ಯತಿರಾಜ್, 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ಅಭಿವೃದ್ಧಿ ಯೋಜನೆಗಳನ್ನು ಕುರಿತ ಕಾರ್ಯಕ್ರಮ, 1.20 ಭಾವಗೀತೆ–ಕೆ.ಬಿ.ಸುನೀತಾ ಆಚಾರ್ಯ, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 4.00 ಜನಪದ ಸಂಗೀತ –ಲಕ್ಷ್ಮೀ ಸಾಗರದ ಕೆಂಚಮ್ಮ ಮತ್ತು ಸಂಗಡಿಗರು, 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.55 ಕೃಷಿರಂಗ–ಕಿಸಾನ್‌ವಾಣಿ– ಭತ್ತದ ಬೇಸಾಯ ಕುರಿತು ನೇರ ಫೋನ್ ಇನ್ ಕಾರ್ಯಕ್ರಮದಲ್ಲಿ ಭಾಗವಹಿಸುವವರು ಡಾ. ಎನ್.ಶಿವಕುಮಾರ್, ಪ್ರಸ್ತುತಿ–ಎನ್. ಕೇಶವಮೂರ್ತಿ, 8.00 ಯುವವಾಣಿ–ಯುವಪ್ರತಿಭೆ–ಬಹುಮುಖ ಪ್ರತಿಭೆಯ ಜೆಎಸ್‌ಎಸ್ ಕಾಲೇಜು ವಿದ್ಯಾರ್ಥಿನಿ ತನುಶ್ರೀ ಅವರೊಂದಿಗೆ ಮಾತುಕತೆ, 9.30 ಕನ್ನಡ ಭಾರತಿ, 10.00 ನಾಟಕ "ಅಮೋಘ ವರ್ಷ ನೃಪತುಂಗ", ರಚನೆ– ಬಿ.ಎಸ್.ಕೇಶವರಾವ್, ನಿರ್ದೇಶನ–ಬಿ.ಎನ್.ಕೃಷ್ಣಮೂರ್ತಿ, 10.30 ಸವಿನೆನಪು

■ **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ಜ್ಞಾನಯೋಗಾನಂದ ಅವರಿಂದ ಭಗವದ್ಗೀತಾ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ಚಿನ್ಮಯ ಮಿಷನ್:** ವಿದ್ವಾನ್ ಕೃಷ್ಣರಾವ್ ಪ್ರಕಾಶ್ ಅವರಿಂದ ಪತಂಜಲಿ ಯೋಗ ಸೂತ್ರಗಳು–ಸಮಾಧಿ ಪಾದ ಕುರಿತು ಉಪನ್ಯಾಸ, ಸ್ಥಳ: ಶ್ರೀ ಚಿನ್ಮಯ ಮಿಷನ್, ಯಜ್ಞಶಾಲೆ, ಗೋಕುಲಂ, ಸಂಜೆ 6ಕ್ಕೆ

ಉರ್ದು ಭಾಷೆ ಬೆಳವಣಿಗೆಗೆ ಪ್ರೊ.ಷೇಕ್ ಅಲಿ ಕೊಡುಗೆ ಅಪಾರ

ರಾಜ್ಯೋತ್ಸವ ಪ್ರಶಸ್ತಿ ವಿಜೇತ ಡಾ.ಮಹಿರ್ ಮಾನ್ಸೂರು ಅಭಿಮತ



ಕರ್ನಾಟಕ ರಾಜ್ಯ ಮುಕ್ತ ವಿವಿಯ ಕಾವೇರಿ ಸಭಾಂಗಣದಲ್ಲಿ ನಡೆದ 'ಪ್ರೊ ಬಿ.ಷೇಕ್ ಅಲಿ ಹಯಾತ್ ಔರ್ ಕಿದಾ ಮಾತ್ ಅವರ ಬದುಕು ಮತ್ತು ದೃಷ್ಟಿಕೋನ' ವಿಷಯ ಕುರಿತ ಒಂದು ದಿನದ ರಾಷ್ಟ್ರೀಯ ವಿಚಾರ ಸಂಕಿರಣವನ್ನು ಡಾ.ಮಹಿರ್ ಮಾನ್ಸೂರು ಉದ್ಘಾಟಿಸಿದರು.

ಮೈಸೂರು,ಜು.12(ಎಂಟಿವೈ)– ಅಪರೂಪದ ಬಹುಮುಖ ಪ್ರತಿಭೆ ಹಾಗೂ ಉತ್ತಮ ಇತಿಹಾಸ ತಜ್ಞರೂ ಆಗಿರುವ ಪ್ರೊ.ಬಿ.ಷೇಕ್ ಅಲಿ ಹಯಾತ್ ಔರ್ ಕಿದಾಮಾತ್ ಸ್ವಾತಂತ್ರ್ಯ ಸಂದರ್ಭದಲ್ಲಿ ದೇಶ ವಿಭಜನೆಯನ್ನು ತೀವ್ರವಾಗಿ ವಿರೋಧಿಸಿದ್ದರು ಎಂದು ರಾಜ್ಯೋತ್ಸವ ಪ್ರಶಸ್ತಿ ವಿಜೇತ ಡಾ.ಮಹಿರ್ ಮಾನ್ಸೂರು ತಿಳಿಸಿದ್ದಾರೆ.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕಾವೇರಿ ಸಭಾಂಗಣದಲ್ಲಿ ಬುಧವಾರ ನಡೆದ 'ಪ್ರೊ ಬಿ.ಷೇಕ್ ಅಲಿ ಹಯಾತ್ ಔರ್ ಕಿದಾಮಾತ್ ಅವರ ಬದುಕು ಮತ್ತು ದೃಷ್ಟಿಕೋನ' ವಿಷಯ ಕುರಿತ ಒಂದು ದಿನದ ರಾಷ್ಟ್ರೀಯ ವಿಚಾರ ಸಂಕಿರಣ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಷೇಕ್ ಅಲಿ ಇತಿಹಾಸ ನಿರ್ಮಾತೃ. ಭಾರತದಲ್ಲಿ ಬ್ರಿಟಿಷರ ಆಳ್ವಿಕೆ ಅಂತ್ಯಗೊಂಡ ಬಳಿಕ ದೇಶ ವಿಭಜನೆ ಮಾಡುವುದಕ್ಕೆ ಅನುಮತಿ ನೀಡಬಾರದು ಎಂದು ಒತ್ತಾಯಿಸಿದ್ದರು ಎಂದರು.

ಅಪರೂಪದ ಮಾಹಿತಿಯುಳ್ಳ 55 ಕೃತಿಗಳನ್ನು ರಚಿಸಿರುವ ಅವರು, ಉರ್ದು, ಕನ್ನಡ, ಹಿಂದಿ, ಇಂಗ್ಲಿಷ್ ಭಾಷೆಗಳಲ್ಲಿ ಪರಿಣತಿ ಹೊಂದಿದ್ದರು. ಷೇಕ್ ಅಲಿ ಅವರ 'ಮೈಸೂರು ಸಂಸ್ಥಾನದಲ್ಲಿ ಬ್ರಿಟಿಷರ ಆಡಳಿತ ಕೃತಿ' ಅಂದಿನ ಮೈಸೂರು ಸಂಸ್ಥಾನದಲ್ಲಿ ಆದ ಹಲವಾರು ಮಹತ್ತರ ಬದಲಾವಣೆಗಳ ಬಗ್ಗೆ ದಾಖಲೆಯಾಗಿದೆ. ಮಹಾರಾಜರು ಕೂಡ ಇವರ ಜ್ಞಾನ ಮತ್ತು ಸರಳತೆಯನ್ನು ಶ್ಲಾಘಿಸಿದ್ದರು. ಲಂಡನ್ ವಿಶ್ವವಿದ್ಯಾನಿಲಯದಲ್ಲಿ ಡಾಕ್ಟರೇಟ್ ಪಡೆದು ನಂತರ ಮೈಸೂರು ವಿಶ್ವವಿದ್ಯಾನಿಲಯದಲ್ಲಿಯೂ ಪಿಹೆಚ್.ಡಿ ಪದವಿ ಪಡೆದರು. ಉರ್ದು ಭಾಷೆಯಲ್ಲಿ 12 ಕೃತಿಗಳನ್ನು ರಚಿಸಿ ಭಾಷೆಯ ಬೆಳವಣಿಗೆಗೂ ಕೊಡುಗೆ ನೀಡಿದ್ದಾರೆ ಎಂದು ವಿವರಿಸಿದರು.

ವಿಶ್ವವಿದ್ಯಾನಿಲಯದ ಹಣಕಾಸು ವಿಭಾಗದ ಖಾದರ್ ಪಾಷ ಮಾತನಾಡಿ, ಷೇಕ್ ಅಲಿ ಅವರು ಬಡ ಮುಸ್ಲಿಂ ಮಕ್ಕಳ ಶಿಕ್ಷಣದ ಬಗ್ಗೆ ಕಾಳಜಿ ಹೊಂದಿದ್ದರು. ಮೈಸೂರಿನ ಗೌಸಿಯನಗರ ಹಾಗೂ ಇತರೆ 8 ಭಾಗದಲ್ಲಿ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿದ್ದಾರೆ. ಮೈಸೂರು ವಿಶ್ವವಿದ್ಯಾನಿಲಯದ ಉರ್ದು ವಿಭಾಗದಲ್ಲಿ ಅಪಾರ ಸೇವೆ ಸಲ್ಲಿಸಿದ್ದಾರೆ ಎಂದರು.

ವಿಶ್ವವಿದ್ಯಾನಿಲಯದ ಡೀನ್ ಪ್ರೊ.ಎನ್.ಲಕ್ಷ್ಮಿ ಮಾತನಾಡಿ, ಷೇಕ್ ಅಲಿ ಅವರು ದೇಶದ ಒಬ್ಬ ಅತ್ಯುತ್ತಮ ಶಿಕ್ಷಣ ತಜ್ಞ, ಎಲ್ಲರನ್ನೂ ಒಳಗೊಳ್ಳುವ ಜಾತ್ಯತೀತ ವ್ಯಕ್ತಿತ್ವ ಅವರ ವಿಚಾರಗಳ ಕುರಿತು ಒಂದು ದಿನ ವಿಶ್ಲೇಷಿಸಲು ಅಸಾಧ್ಯ ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಓದಿ, ಇಂಗ್ಲೆಂಡ್‌ನಲ್ಲಿ ಪಿಹೆಚ್.ಡಿ ಪಡೆದಿದ್ದಾರೆ. ಅವರು ಸರಳ ಸಜ್ಜನಿಕೆ ವ್ಯಕ್ತಿ ಎಂದು ಬಣ್ಣಿಸಿದರು.

ಕಾರ್ಯಕ್ರಮದಲ್ಲಿ ಮುಕ್ತ ವಿಶ್ವವಿದ್ಯಾಲಯದ ಕುಲಪತಿ ಡಾ.ಶರಣಪ್ಪ ವಿ.ಹಲಸೆ, ಕುಲಸಚಿವ ಪ್ರೊ.ಕೆ.ಎನ್.ಮೂರ್ತಿ, ಉರ್ದು ವಿಭಾಗದ ಡೀನ್ ಪ್ರೊ.ಎಂ.ರಮಾನಾಥ ನಾಯ್ಡು, ವಿಶ್ವವಿದ್ಯಾನಿಲಯದ ಪರೀಕ್ಷಾಂಗ ವಿಭಾಗದ ಪ್ರೊ.ಕೆ.ಬಿ.ಪ್ರವೀಣ್, ವಿಚಾರ ಸಂಕಿರಣ ಕಾರ್ಯಕ್ರಮದ ಸಂಚಾಲಕರಾದ ಡಾ.ಎಂ.ಡಿ.ನರಸುಲ್ಲಾಖಾನ್, ಡಾ.ಸೈಯದ್ ಈಸ್ ರತ್ ಫಾತಿಮಾ ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಸಂಚಾರ ನಿಯಮ ಉಲ್ಲಂಘನೆ ಹೀರೋಯಿಸಂ ಅಲ್ಲ

ಅಪಘಾತದಲ್ಲಿ ಸಾವನ್ನಪ್ಪಿದವರ ಮೃತದೇಹ ಸಾಗಿಸುವಾಗ ನಮಗೂ ನೋವಾಗುತ್ತದೆ: ಡಿಸಿಪಿ ಜಾಹ್ನವಿ



ಮೈಸೂರು,ಜು.12(ಆರ್‌ಕೆ)– ಸಂಚಾರ ನಿಯಮ ಉಲ್ಲಂಘಿಸಿ, ಸಿಗ್ನಲ್ ಜಂಪ್ ಮಾಡಿ ಪೊಲೀಸರ ಕಣ್ತಪ್ಪಿಸಿ ಪರಾರಿಯಾಗುವುದು ಹೀರೋಯಿಸಂ ಅಲ್ಲ ಎಂದು ಮೈಸೂರು ನಗರ ಅಪರಾಧ ಮತ್ತು ಸಂಚಾರ ಡಿಸಿಪಿ ಎಸ್.ಜಾಹ್ನವಿ ತಿಳಿಸಿದ್ದಾರೆ.

ಸಂಚಾರ ಪೊಲೀಸ್ ವತಿಯಿಂದ ಮೈಸೂರಿನ ವಿದ್ಯಾರಣ್ಯಪುರಂನಲ್ಲಿರುವ ಹಿಂದೂಸ್ತಾನ ಕಾಲೇಜಿನಲ್ಲಿ ಇಂದು ಏರ್ಪಡಿಸಿದ್ದ 'ಸಂಚಾರ ಅರಿವು' ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಸಿಗ್ನಲ್ ಜಂಪ್ ಮಾಡುವುದು ಹೀರೋಯಿಸಂ ಅಲ್ಲ. ಅದು ದೊಡ್ಡ ಸಾಧನೆ ಎಂದುಕೊಂಡಿದ್ದರೆ ಅಪಘಾತಕ್ಕೆ ತುತ್ತಾಗುವುದು ಖಚಿತ ಎಂದರು.

ಅಪಘಾತ ಎಂಬುದು ಲಘುವಾಗಿ ತೆಗೆದುಕೊಳ್ಳುವ ವಿಷಯವಲ್ಲ. ರಸ್ತೆಯಲ್ಲಿ ರಕ್ತಸಿಕ್ತವಾದ ದೇಹಗಳನ್ನು ಸಾಗಿಸುವಾಗ ನಮಗೂ ದುಃಖವಾಗುತ್ತದೆ. ಸಾವು ಯಾರನ್ನೂ ಬಿಡುವುದಿಲ್ಲ. ಒಂದೆರಡು ದಿನ ಕಣ್ಣು ತಪ್ಪಿಸಿ ಓಡಾಡಬಹುದು. ಆದರೆ ಎಲ್ಲಾ ದಿನವೂ ಒಂದೇ ರೀತಿಯಾಗಿರುವುದಿಲ್ಲ ಎಂಬುದನ್ನು ಪ್ರತಿಯೊಬ್ಬರೂ ಅರ್ಥ ಮಾಡಿಕೊಳ್ಳಬೇಕು ಎಂದು ಅವರು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಹೊರಗೆ ಬಂದಾಗ ನಮಗಾಗಿ ಮನೆಯವರು ಕಾಯುತ್ತಿರುತ್ತಾರೆ. ನಮ್ಮ ತಂದೆ–ತಾಯಂದಿರು ಕಷ್ಟಪಟ್ಟು ಸಂಪಾದಿಸಿದ ಹಣವನ್ನು ದಂಡದ ರೂಪದಲ್ಲಿ ಕಟ್ಟುವುದೇಕೆ? ಅದರ ಬದಲು ಸಂಚಾರ ನಿಯಮ ಪಾಲಿಸಿ. ನಿಮ್ಮ ಮತ್ತು ಇತರರ ಅಮೂಲ್ಯ ಪ್ರಾಣ ರಕ್ಷಿಸಿಕೊಳ್ಳಬೇಕು. ಶಿಸ್ತಿನಿಂದ ಇದ್ದರಷ್ಟೇ ಜೀವನದಲ್ಲಿ ಏನನ್ನಾದರೂ ಸಾಧಿಸಲು ಸಾಧ್ಯ ಎಂದರು.

ಸಂಚಾರ ಎಸಿಪಿ ಹೆಚ್.ಪರಶುರಾಮಪ್ಪ ಮಾತನಾಡಿ, ಸಂಚಾರ ನಿಯಮ ರೂಪಿಸಿರುವುದು ಅಪಘಾತ ತಪ್ಪಿಸಿ ಜನರ ಪ್ರಾಣ ಉಳಿಸುವ ಸಲುವಾಗಿಯೇ ಹೊರತು, ದಂಡ ವಸೂಲಿ ಮಾಡುವ ಉದ್ದೇಶದಿಂದಲ್ಲ. ಕಳೆದ ವರ್ಷ ರಿಂಗ್ ರಸ್ತೆ ಒಳಗೆ ಸಂಭವಿಸಿದ ಅಪಘಾತಗಳಲ್ಲಿ 170 ಮಂದಿ ಸಾವನ್ನಪ್ಪಿದ್ದು, 669 ಮಂದಿ ಗಾಯಗೊಂಡಿದ್ದಾರೆ. ಆ ಪೈಕಿ ಬಹುತೇಕ ಯುವಕರಾಗಿದ್ದಾರೆ ಎಂದರು. ದೇವರಾಜ ಸಂಚಾರ ಠಾಣೆ ಇನ್ಸ್‌ಪೆಕ್ಟರ್ ಎನ್.ಮುನಿಯಪ್ಪ, ಹಿಂದೂಸ್ತಾನ ಕಾಲೇಜಿನ ಪ್ರಾಂಶುಪಾಲೆ ಡಾ.ಸಿ.ಜೆ.ಪ್ರಿಯಾ, ಗಂಧದಗುಡಿ ಫೌಂಡೇಷನ್‌ನ ಆರ್ಯನ್, ಸುಷ್ಮಾ, ರಘುನಂದನ ಹಾಗೂ ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಜು.15, 16, ಸರ್ಪ ಸಂಸ್ಕಾರ, ಆಶ್ಲೇಷಾ ಬಲಿ

ಮೈಸೂರು,ಜು.12–ಮೈಸೂರಿನ ದೇವರಾಜ ಮೊಹಲ್ಲಾದಲ್ಲಿರುವ ಶ್ರೀ ಅಮೃತೇಶ್ವರ ದೇವಸ್ಥಾನದಲ್ಲಿ ಜು.15ರ ಶನಿವಾರ ಬೆಳಗ್ಗೆ 7.30ಕ್ಕೆ ಸರ್ಪ ಸಂಸ್ಕಾರ, ಜು.16ರ ಭಾನುವಾರ ಬೆಳಗ್ಗೆ 7.30ಕ್ಕೆ ಸರ್ಪ ಸಂಸ್ಕಾರಾಂಗ ಹೋಮ, ಆಶ್ಲೇಷಾ ಬಲಿ ಮತ್ತು ಕಾಲಸರ್ಪ ಶಾಂತಿ ಏರ್ಪಡಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಮೈ ಕುಮಾರ್, ಜಾತಕ ವಿಮರ್ಶಕರನ್ನು ಮೊ.ನಂ. 9342183392 9845183392 ಮೂಲಕ ಸಂಪರ್ಕಿಸಬಹುದು.



ಮೈಸೂರು ತಾಲೂಕು ಜಯಪುರ ಹೋಬಳಿಯ ದಾರಿಪುರ ಗ್ರಾಮದ ನಾಗವೇಣಿ ಅವರ 2 ವರ್ಷದ ಮಗುವಿನ ಹೃದಯ ಸಂಬಂಧಿ ಕಾಯಿಲೆ ಚಿಕಿತ್ಸೆಗೆ ಸಮಾಜ ಸೇವಕ, ಉದ್ಯಮಿ ಎಸ್.ಶ್ರೀಕಾಂತ್ ವೈಯಕ್ತಿಕ ಧನ ಸಹಾಯ ಮಾಡಿದರು.



ರಾಜ್ಯ ಒಕ್ಕಲಿಗರ ಸಂಘ ಹಾಗೂ ಅಖಿಲ ಕರ್ನಾಟಕ ಒಕ್ಕಲಿಗರ ಸಂಘದ ಸಹಯೋಗದೊಂದಿಗೆ ರಾಜ್ಯ ಒಕ್ಕಲಿಗರ ಸಂಘದ ಸಂಸ್ಥಾಪಕರಾದ ಕೆ.ಹೆಚ್.ರಾಮಯ್ಯ ಅವರ ಹುಟ್ಟುಹಬ್ಬದ ಪ್ರಯುಕ್ತ ಅಖಿಲ ಕರ್ನಾಟಕ ಒಕ್ಕಲಿಗರ ಸಂಘದ ರಾಜ್ಯಾಧ್ಯಕ್ಷ ಸಿ.ಜಿ.ಗಂಗಾಧರ್ ನೇತೃತ್ವದಲ್ಲಿ ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ಕೆ.ಹೆಚ್.ರಾಮಯ್ಯನವರ ಸಮಾಧಿಗೆ ಪುಷ್ಪಾರ್ಚನೆ ಮಾಡಿ, ಸಿಹಿ ವಿತರಣೆ ಮಾಡಲಾಯಿತು. ಕಾರ್ಯಕ್ರಮದಲ್ಲಿ ಅಖಿಲ ಕರ್ನಾಟಕ ಒಕ್ಕಲಿಗರ ಸಂಘದ ಜಿಲ್ಲಾಧ್ಯಕ್ಷ ತೇಜೇಶ್ ಲೋಕೇಶ್‌ಗೌಡ, ಶಿವಶಂಕರ್, ಲತಾ ರಂಗನಾಥ, ಜಗದೀಶ್‌ಗೌಡ, ಹನುಮಂತಯ್ಯ ವಿಜಯೇಂದ್ರ, ಬಸವರಾಜು, ಪ್ರಭಾಕರ, ವೆಂಕಟೇಶ್, ಕೃಷ್ಣಮೂರ್ತಿ ದರ್ಶನ್‌ಗೌಡ ಇನ್ನಿತರರಿದ್ದರು.



ಮೈಸೂರು ಪುರಭವನದಲ್ಲಿ ಅರ್ಧನಾರೀಶ್ವರ ಕಲಾಭಿವೃದ್ಧಿ ಟ್ರಸ್ಟ್ ವತಿಯಿಂದ ಏರ್ಪಡಿಸಿದ್ದ 'ಕುರುಕ್ಷೇತ್ರ' ಅಥವಾ 'ಧರ್ಮ ರಾಜ್ಯ ಸ್ಥಾಪನೆ' ಪೌರಾಣಿಕ ನಾಟಕ ಕಾರ್ಯಕ್ರಮವನ್ನು ಶ್ರೀ ಮನೆ ಮಂಚಮ್ಮ ದೇವಸ್ಥಾನ ಸೇವಾ ಟ್ರಸ್ಟ್ ಅಧ್ಯಕ್ಷ ಹುಯಿಲಾಳು ರಾಮಸ್ವಾಮಿ ಉದ್ಘಾಟಿಸಿದರು. ಈ ವೇಳೆ ಕೆ.ಬಿ.ಬೋರೇಗೌಡ, ನಾಗೇಂದ್ರಪ್ರಸಾದ್, ಪಂಡಿತ್ ರಾಜಶೇಖರ್, ಹಾರ್ಮೋನಿಯಂ ಮಾಸ್ಟರ್ ಸವಿತಾ ಕುಮಾರ್, ಅರ್ಧನಾರೀಶ್ವರ ಕಲಾಭಿವೃದ್ಧಿ ಟ್ರಸ್ಟ್ ಅಧ್ಯಕ್ಷೆ ಸ್ವಪ್ನ ನಾಗರಾಜ್ ಇನ್ನಿತರರು ಉಪಸ್ಥಿತರಿದ್ದರು.

ಆರನೇ ಗ್ಯಾರಂಟಿಯಾಗಿ ಅನ್ನದಾತನ ಪಂಪ್‌ಸೆಟ್‌ಗೆ ಅನಿಯಮಿತ ವಿದ್ಯುತ್ ಕಲ್ಪಿಸಿ

- ಸರ್ಕಾರಕ್ಕೆ ಶಾಸಕ ಜಿ.ಟಿ.ದೇವೇಗೌಡ ಒತ್ತಾಯ
- ಐದು ಗ್ಯಾರಂಟಿಗಳಿಂದ ಬಡ ಜನತೆ ಬದುಕಿಗೆ ಅನುಕೂಲ
- ಹಾಗೆಯೇ ರೈತಾಪಿ ವರ್ಗಕ್ಕೂ ಅನುಕೂಲ ಮಾಡಿಕೊಡಿ





ಬೆಂಗಳೂರು, ಜು.12–ರಾಜ್ಯ ಸರ್ಕಾರದ 5 ಗ್ಯಾರಂಟಿಗಳನ್ನು ಸ್ವಾಗತಿಸಿದ ಜೆಡಿಎಸ್ ಶಾಸಕ ಜಿ.ಟಿ.ದೇವೇಗೌಡ, ಅನ್ನದಾತನ ಪಂಪ್‌ಸೆಟ್‌ಗಳಿಗೆ ಅನಿಯಮಿತ ವಿದ್ಯುತ್ ನೀಡುವ ಮೂಲಕ 6ನೇ ಗ್ಯಾರಂಟಿ ನೀಡುವಂತೆ ಸರ್ಕಾರವನ್ನು ಒತ್ತಾಯಿಸಿದ್ದಾರೆ.

ವಿಧಾನಸಭೆಯಲ್ಲಿ ರಾಜ್ಯಪಾಲರ ಭಾಷಣದ ಮೇಲಿನ ಚರ್ಚೆಯಲ್ಲಿ ಭಾಗವಹಿಸಿ ಮಾತನಾಡಿದ ಅವರು, ಮಹಿಳೆಯರಿಗೆ ಉಚಿತವಾಗಿ ಬಸ್‌ನಲ್ಲಿ ಪ್ರಯಾಣ ಮಾಡಲು ಅವಕಾಶ ಕಲ್ಪಿಸಿಕೊಟ್ಟಿರುವುದರಿಂದ ಎಲ್ಲಾ ದೇವಾಲಯಗಳು ತುಂಬಿ ತುಳುಕುತ್ತಿವೆ. ಪುರಾತನ ದೇವಾಲಯಗಳಿಗೆ ಭೇಟಿ ನೀಡಲು ಆರ್ಥಿಕ ಸಮಸ್ಯೆಯಿಂದ ಸಾಧ್ಯವಾಗದಿದ್ದ ಕೂಲಿ ಕಾರ್ಮಿಕರು ಹಾಗೂ ಬಡವರು ಉಚಿತ ಪ್ರಯಾಣದ ಸೌಲಭ್ಯದಿಂದ ಅಂತಹ ದೇವಾಲಯಗಳಿಗೆ ತೆರಳಿ, ದೇವರ ದರ್ಶನ ಮಾಡಿ ಧನ್ಯರಾಗುತ್ತಿದ್ದಾರೆ ಎಂದರು.

ಕೇಂದ್ರ ಸರ್ಕಾರ ಕೊಡುತ್ತಿರುವ 5 ಕೆ.ಜಿ. ಅಕ್ಕಿ ಜೊತೆಗೆ ರಾಜ್ಯ ಸರ್ಕಾರ 5 ಕೆ.ಜಿ. ಅಕ್ಕಿ ಸೇರಿಸಿ ಒಟ್ಟು 10 ಕೆ.ಜಿ. ಕೊಡಲು ತೀರ್ಮಾನಿಸಿರುವುದು ಸಂತೋಷದ ವಿಚಾರ. ಆದರೆ ಕೆ.ಜಿ.ಗೆ 34 ರೂ.ಗಳಂತೆ ರಾಜ್ಯಕ್ಕೆ ಕೇಂದ್ರ ಸರ್ಕಾರ ಅಕ್ಕಿ ಕೊಡಬಹುದಿತ್ತು. ರಾಜ್ಯ ಸರ್ಕಾರದ ಅನುದಾನಗಳಾದ ಜಿಎಸ್‌ಟಿ ಇನ್ನಿತರ ತೆರಿಗೆಗಳಿಂದಲೇ ನಡೆಯುತ್ತಿರುವ ಕೇಂದ್ರ ಸರ್ಕಾರ ಅಕ್ಕಿ ಕೊಡದೇ ಇರುವುದು ಖಂಡನೀಯ ಎಂದ ಅವರು, ಇಂದೇ ಗ್ಯಾರಂಟಿಗಳನ್ನು ಜಾರಿಗೆ ತನ್ನಿ ಎಂದು ಹೋರಾಟ ಮಾಡುವ ಅಧಿಕಾರ ಬಿಜೆಪಿಗಿಲ್ಲ. ಸರ್ಕಾರ ಅವಕಾಶ ಹೊಂದಾಣಿಕೆ ಮಾಡಿಕೊಂಡು ತಿಂಗಳಿಗೊಂದರಂತೆ ಐದು ಗ್ಯಾರಂಟಿಗಳನ್ನು ಜಾರಿಗೆ ತರಲಿ ಎಂದು ಹೇಳಿದರು.

200 ಯೂನಿಟ್ ವಿದ್ಯುತ್ ಅನ್ನು ಪ್ರತೀ ಮನೆಗೆ ಕೊಡುವ ಕಾರ್ಯಕ್ರಮ ಉತ್ತಮ ಕಾರ್ಯಕ್ರಮವಾಗಿದ್ದು, ಕತ್ತಲಿನಲ್ಲಿದ್ದ ಬಡ ಕುಟುಂಬಗಳಿಗೂ ಬೆಳಕು ಕೊಡುವ ಕಾರ್ಯಕ್ರಮ ಇದಾಗಿದೆ. ಮನೆಯ ಜವಾಬ್ದಾರಿ ಹೊತ್ತಿರುವ ಯಜಮಾನಿಗೆ ತಿಂಗಳಿಗೆ 2000 ರೂ. ಕೊಡುವುದು ಇಡೀ ಕುಟುಂಬಕ್ಕೆ ನೆರವಾಗುತ್ತದೆ ಬಡ ಕುಟುಂಬದವರು ಈ ಹಣದಿಂದ ಇತರೆ ಅಡುಗೆ ಪದಾರ್ಥಗಳನ್ನು ಖರೀದಿಸಲು ಅನುಕೂಲವಾಗಿದೆ ಎಂದರು.

ಪದವಿ ಪಡೆದ ವಿದ್ಯಾರ್ಥಿಗಳಿಗೆ 3,000 ರೂ. ಹಾಗೂ ಡಿಪ್ಲೊಮಾ ಪಾಸಾದವರಿಗೆ 1500 ರೂ. ಕೊಡುತ್ತಿರುವುದು, ವಿದ್ಯಾರ್ಥಿಗಳಿಗೆ ತಾವು ಪದವೀಧರರಾಗಬೇಕು ಎಂಬ ವಿಶ್ವಾಸ ಮೂಡಿಸಿದಂತಾಗುತ್ತದೆ. ಅಲ್ಲದೇ ನಿರುದ್ಯೋಗಿಗಳಾಗಿ ವಿದ್ಯಾರ್ಥಿಗಳು ಆತಂಕಕ್ಕೊಳಗಾಗುವುದನ್ನು ತಡೆದಂತಾಗುತ್ತದೆ ಎಂದು ಜಿ.ಟಿ.ದೇವೇಗೌಡರು ಹೇಳಿದರು.

ರೈತಾಪಿ ಜನರ ಬದುಕನ್ನು ಸುಧಾರಿಸಲು ಅಗತ್ಯ ಕ್ರಮ ಕೈಗೊಳ್ಳುವುದಾಗಿ ರಾಜ್ಯಪಾಲರ ಭಾಷಣದಿಂದ ತಿಳಿಸಲಾಗಿದೆ ಎಂದ ಜಿ.ಟಿ.ದೇವೇಗೌಡರು, ರೈತರಿಗೆ ರಾತ್ರಿ ವೇಳೆ ಮಾತ್ರ ವಿದ್ಯುತ್ ನೀಡಲಾಗುತ್ತಿದೆ. ಇದಕ್ಕೆ ಬದಲಾಗಿ ಸೋಲಾರ್ ಮೂಲಕ ವಿದ್ಯುತ್ ಉತ್ಪಾದಿಸಿ ರೈತರಿಗೆ ಹಗಲಿನಲ್ಲೇ 9 ಗಂಟೆ ಕಾಲವಾದರೂ ಉಚಿತವಾಗಿ ವಿದ್ಯುತ್ ನೀಡಿದರೆ ರೈತರು ಭತ್ತ ಬೆಳೆಯಲು ಅನುಕೂಲವಾಗುತ್ತದೆ. ಹೀಗೆ ನಮ್ಮ ರೈತರೇ ಭತ್ತ ಬೆಳೆಯಲು ಅನುಕೂಲ ಕಲ್ಪಿಸಿಕೊಟ್ಟರೆ ಬೇರೆ ರಾಜ್ಯಗಳಿಂದ ಅಕ್ಕಿ ತರುವುದನ್ನು ತಡೆಯಬಹುದಾಗಿದೆ. ಈ ಹಿಂದೆ 'ಬೆಳಕು' ಯೋಜನೆಯಡಿ ಕಡುಬಡವರಿಗೆ ಮೀಟರ್, ವಯರ್ ಸೇರಿದಂತೆ ಎಲ್ಲವನ್ನೂ ಸೇರಿ ಸರ್ಕಾರದಿಂದಲೇ ಕೊಡಲಾಗುತ್ತಿತ್ತು. ಈ ಯೋಜನೆಯನ್ನು ಮತ್ತೆ ಮುಂದುವರೆಸಬೇಕು. ಟೆಂಪೋ, ಆಟೋ, ಕೂಲಿಕಾರ್ಮಿಕರು ದ್ವಿಚಕ್ರ ವಾಹನಗಳಿಗೆ ಡೀಸೆಲ್ ಹಾಗೂ ಪೆಟ್ರೋಲ್ ಮೇಲಿನ ತೆರಿಗೆ ರಿಯಾಯಿತಿ ನೀಡುವುದರ ಜೊತೆಗೆ ರೈತರು ಬಳಸುವ ಟ್ರ್ಯಾಕ್ಟರ್, ಟಿಲ್ಲರ್‌ಗಳಿಗೂ ರಿಯಾಯಿತಿ ದರದಲ್ಲಿ ಪೆಟ್ರೋಲ್ ಹಾಗೂ ಡೀಸೆಲ್ ಪೂರೈಸುವಂತೆ ಜಿ.ಟಿ.ದೇವೇಗೌಡರು ಮನವಿ ಮಾಡಿದರು.

ಸಿದ್ದರಾಮಯ್ಯರ ಕಷ್ಟದ ದಿನಗಳ ಫಲವೇ ಅನ್ನಭಾಗ್ಯ

ಬೆಂಗಳೂರು: ಸಿದ್ದರಾಮಯ್ಯನವರು 2013ರಲ್ಲಿ ಮೊದಲ ಬಾರಿಗೆ ಮುಖ್ಯಮಂತ್ರಿಗಳಾದಾಗ ಯಾವ ಕಾರಣಕ್ಕಾಗಿ ಅನ್ನಭಾಗ್ಯ ಯೋಜನೆಯನ್ನು ಜಾರಿಗೆ ತಂದರು ಎಂಬುದರ ಬಗ್ಗೆ ನನಗೆ ಗೊತ್ತಿದೆ. ಅನ್ನಕ್ಕಾಗಿ ಗ್ರಾಮೀಣ ಪ್ರದೇಶದಲ್ಲಿ ಬಡವರು ಪಡುತ್ತಿದ್ದ ಬವಣೆಯ ಅನುಭವವೂ ಇದೆ ಎಂದು ಹೇಳಿದ ಜೆಡಿಎಸ್ ಶಾಸಕ ಜಿ.ಟಿ.ದೇವೇಗೌಡ ತಮ್ಮ ಅನುಭವವನ್ನು ವಿಧಾನಸಭೆಯಲ್ಲಿ ಎಳೆ ಎಳೆಯಾಗಿ ಬಿಚ್ಚಿಟ್ಟರು.

ರಾಜ್ಯಪಾಲರ ಭಾಷಣದ ಮೇಲಿನ ಚರ್ಚೆಯಲ್ಲಿ ಭಾಗವಹಿಸಿ ಮಾತನಾಡಿದ ಅವರು, ಸಿದ್ದರಾಮಯ್ಯ ಮತ್ತು ನಾನು ಒಂದೇ ತಾಲೂಕಿನವರು. ನನ್ನದು ಇಲವಾಲ ಹೋಬಳಿ ಗುಂಗ್ರಾಲ್ ಛತ್ರ, ಸಿದ್ದರಾಮಯ್ಯನವರದು ವರುಣಾ ಹೋಬಳಿ ಸಿದ್ದರಾಮನಹುಂಡಿ ಗ್ರಾಮ. 1983 ರಿಂದ 2006ರವರೆಗೆ ನಾವಿಬ್ಬರೂ ರಾಜಕೀಯವಾಗಿ ಜೊತೆಯಲ್ಲೇ ಇದ್ದೆವು ಎಂದರು.

ಅವರದು ಹಾಗೂ ನನ್ನದು ಕೃಷಿಕರ ಕುಟುಂಬಗಳು. ಅವರ ಊರಿಗೆ ವರುಣಾ ನಾಲೆ ಬಂದಿದ್ದರಿಂದ ಅದು ನೀರಾವರಿ ಪ್ರದೇಶವಾಗಿದ್ದು, ಅಲ್ಲಿ ಭತ್ತ, ಕಬ್ಬು ಬೆಳೆಯುತ್ತಾರೆ. ಸಿದ್ದರಾಮಯ್ಯನವರೂ ಕೂಡ ಉಳುಮೆ ಮಾಡಿದ್ದಾರೆ. ನಾನೂ ಚಿಕ್ಕ ವಯಸ್ಸಿನಲ್ಲಿ ಉಳುಮೆ ಮಾಡುತ್ತಿದ್ದೆ. ದನ ಮೇಯಿಸುವುದು ನನ್ನ ಪೂರ್ಣ ಬದುಕಾಗಿತ್ತು. ಆಗ ನಮ್ಮ ಮನೆ ಸೇರಿದಂತೆ ಹಳ್ಳಿಯಲ್ಲಿ ಶನಿವಾರ ಮಾತ್ರ ಅನ್ನ ಮಾಡುತ್ತಿದ್ದರು ಎಂದ ಅವರು, ಆಗ ಮಳೆಗಾಲ ಚೆನ್ನಾಗಿತ್ತು. ಕೆರೆ–ಕಟ್ಟೆಗಳು ತುಂಬುತ್ತಿದ್ದವು. ಅದರಲ್ಲೇ ಭತ್ತ ಬೆಳೆಯುತ್ತಿದ್ದೆವು ಎಂದರು.



1966ರಲ್ಲಿ ಭೀಕರ ಬರಗಾಲ ಬಂದು ಕೆರೆ–ಕಟ್ಟೆಗಳು ಒಣಗಿದ್ದವು. ದನ–ಕರುಗಳು ಸಾಯುತ್ತಿದ್ದವು. ನಮ್ಮದು ದೊಡ್ಡ ಕುಟುಂಬ. 5 ಜನ ಅಕ್ಕ–ತಂಗಿಯರು. ಅವರಿಗೆ ಬಾಣಂತನ ಮಾಡಲು ಅಕ್ಕಿ ಇಲ್ಲದೇ ನಾನು ಬೆಳೆದ ಅವರೆಯನ್ನು ತಲೆಯ ಮೇಲೆ ಹೊತ್ತುಕೊಂಡು ಹೋಗಿ ಅದನ್ನು ಮಾರಿ ಭತ್ತ ತರುತ್ತಿದ್ದೆ. ನಾನು ಸಾಯಿಲ್ ಕನ್ಸರ್ವೇಷನ್ ಬಂಡ್ ಹಾಕುತ್ತಿದ್ದೆ. ಆಗ ನನಗೆ ದಿನಕ್ಕೆ 10.50 ರೂ. ಕೂಲಿ ಕೊಡುತ್ತಿದ್ದರು. ಇದೇ ರೀತಿಯ ಕಷ್ಟವನ್ನು ತಾವೂ ಅನುಭವಿಸಿ, ಅನ್ನದ ಮಹತ್ವ ಅರಿತಿದ್ದ ಸಿದ್ದರಾಮಯ್ಯನವರು ಮುಖ್ಯಮಂತ್ರಿ ಆದಾಗ ಅನ್ನಭಾಗ್ಯ ಯೋಜನೆ ಜಾರಿಗೆ ತಂದು, ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳಿಗೆ ನೆರವಾದರೆಂದು ಜಿ.ಟಿ.ದೇವೇಗೌಡರು ಸಿದ್ದರಾಮಯ್ಯರನ್ನು ಕೊಂಡಾಡಿದರು.

ಗ್ಯಾರಂಟಿಗಳಿಂದ ಅಭಿವೃದ್ಧಿ ಕಾರ್ಯಗಳು ನಿಲ್ಲಬಾರದು

ಬೆಂಗಳೂರು: ಸರ್ಕಾರದ ಗ್ಯಾರಂಟಿ ಯೋಜನೆಗಳಿಂದ ಅಭಿವೃದ್ಧಿ ಕೆಲಸಗಳು ಕುಂಠಿತವಾಗಿವೆ ಎಂದು ವಿಷಾದ ವ್ಯಕ್ತಪಡಿಸಿದ ಜೆಡಿಎಸ್ ಶಾಸಕ ಜಿ.ಟಿ.ದೇವೇಗೌಡ, ಈ ಹಿಂದಿನ ಎಲ್ಲಾ ಕಾಮಗಾರಿಗಳನ್ನು ಮುಂದುವರೆಸುವಂತೆ ಮನವಿ ಮಾಡಿದರು.

ಐದಾರು ತಿಂಗಳ ಹಿಂದೆ ಮಂಜೂರಾಗಿರುವ ಕಾಮಗಾರಿಗಳನ್ನು ಸ್ಥಗಿತಗೊಳಿಸಲಾಗಿದೆ. ಕುಡಿಯುವ ನೀರು, ರಸ್ತೆ, ಸರ್ಕಾರಿ ಕಟ್ಟಡಗಳು, ಕಾಮಗಾರಿಗಳು ನಡೆಯುವುದನ್ನು ತಡೆ ಹಿಡಿಯಲಾಗಿದೆ. ಹೀಗಾಗಿ ಹಿಂದಿನ ಎಲ್ಲಾ ಕಾಮಗಾರಿಗಳನ್ನು ಮುಂದುವರೆಸಬೇಕು ಹಾಗೂ ಶಾಸಕರ ಅನುದಾನ 2 ಕೋಟಿ ರೂ.ಗಳನ್ನು ಕೊಟ್ಟರೆ, ಅದರಲ್ಲಿ ಅಲ್ಪಸ್ವಲ್ಪ ಅಭಿವೃದ್ಧಿ ಕೆಲಸಗಳನ್ನು ಮುಂದುವರೆಸುತ್ತೇವೆ ಇಲ್ಲದಿದ್ದರೆ ಜನ ನಿಮ್ಮ ಸರ್ಕಾರಕ್ಕೆ ಹಿಡಿಶಾಪ ಹಾಕುತ್ತಾರೆ. ಆದ್ದರಿಂದ ಶಾಸಕರ ಅನುದಾನವನ್ನಾದರೂ ಕೊಟ್ಟು ಅಭಿವೃದ್ಧಿ ಕಾಮಗಾರಿಗಳು ನಡೆಯುವಂತೆ ಮಾಡಬೇಕು. ಇಲ್ಲದಿದ್ದರೆ ಸರ್ಕಾರಕ್ಕೆ ಕೆಟ್ಟ ಹೆಸರು ಬರುತ್ತದೆ ಎಂದು ಎಚ್ಚರಿಸಿದರು.

ಕುಮಾರಸ್ವಾಮಿ ಮುಖ್ಯಮಂತ್ರಿಗಳಾಗಿದ್ದಾಗ ಪಕ್ಷಭೇದವಿಲ್ಲದೇ ಸರ್ಕಾರಿ ಕಾಲೇಜುಗಳಲ್ಲಿ ಶೌಚಾಲಯ, ಕೊಠಡಿಗಳು, ಸಭಾಂಗಣ ನಿರ್ಮಾಣಕ್ಕಾಗಿ 1 ಸಾವಿರ ಕೋಟಿ ರೂ. ಅನುದಾನ ನೀಡಿದ್ದು, ಈಗಲೂ ಕೂಡ ಆ ಅನುದಾನದಲ್ಲೇ ಕಾಲೇಜುಗಳಲ್ಲಿ ಕಾಮಗಾರಿಗಳು ನಡೆಯುತ್ತಿವೆ ಎಂದರು.

ಪ್ರಥಮ ದರ್ಜೆ ಕಾಲೇಜುಗಳಲ್ಲಿ ಹಲವಾರು ವರ್ಷಗಳಿಂದ ಖಾಲಿ ಇದ್ದ ಪ್ರಾಂಶುಪಾಲರ ಹುದ್ದೆಗಳನ್ನು ಭರ್ತಿ ಮಾಡಿರಲಿಲ್ಲ. ಸಮ್ಮಿಶ್ರ ಸರ್ಕಾರದಲ್ಲಿ ನಾನು ಉನ್ನತ ಶಿಕ್ಷಣ ಸಚಿವನಾಗಿದ್ದಾಗ ಆರ್ಥಿಕ ಇಲಾಖೆಯಿಂದ ಅನುಮತಿ ಪಡೆದು ಕೆಇಎ ಮೂಲಕ ಪ್ರಾಂಶುಪಾಲರ ನೇಮಕಾತಿ ಮಾಡಲು ಅನುಮತಿ ಪಡೆದಿದ್ದರೂ ಈವರೆಗೆ ಪ್ರಾಂಶುಪಾಲರ ನೇಮಕವಾಗಿಲ್ಲ. ಅದಕ್ಕೆ ಕ್ರಮ ಕೈಗೊಳ್ಳಬೇಕೆಂದು ಮನವಿ ಮಾಡಿದರು.



ಮೈಸೂರು ಮಹಾನಗರಪಾಲಿಕೆ ಸದಸ್ಯರು ಹಾಗೂ ಕರ್ನಾಟಕ ಕುರುಬರ ಸಂಘದ ನಿರ್ದೇಶಕರೂ ಆದ ಜೆ.ಗೋಪಿ ಅವರ ಹುಟ್ಟುಹಬ್ಬವನ್ನು ಅವರ ಅಭಿಮಾನಿಗಳು ಬುಧವಾರ ತೊಣಚಿಕೊಪ್ಪಲಲ್ಲಿ ಅದ್ದೂರಿಯಾಗಿ ಆಚರಿಸಿದರು. ಈ ವೇಳೆ ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಮುಡಾ ಮಾಜಿ ಅಧ್ಯಕ್ಷ ಡಿ.ಧ್ರುವಕುಮಾರ್, ಮಾಜಿ ಮೇಯರ್, ಟಿ.ಬಿ.ಚಿಕ್ಕಣ್ಣ, ಹಿರಿಯ ಪತ್ರಕರ್ತ ಟಿ.ಗುರುರಾಜ್, ಗ್ರಾಮದ ಮುಖಂಡರು, ಗೋಪಿ ಅವರ ಅಭಿಮಾನಿಗಳು, ಹಿತೈಷಿಗಳು ಭಾರೀ ಸಂಖ್ಯೆಯಲ್ಲಿ ಹಾಜರಾಗಿ ಆತ್ಮೀಯವಾಗಿ ಅಭಿನಂದಿಸಿ, ಶುಭಾಶಯ ಕೋರಿದರು.

15 ಕೆಎಎಸ್ ಅಧಿಕಾರಿಗಳ ವರ್ಗಾವಣೆ

ಮೈಸೂರು, ಜು.12(ಎಸ್‌ಪಿಎನ್)– ಸಾರ್ವಜನಿಕ ಆಡಳಿತ ದೃಷ್ಟಿಯಿಂದ ರಾಜ್ಯ ಸರ್ಕಾರ 15 ಕೆಎಎಸ್ ಅಧಿಕಾರಿಗಳನ್ನು ಬುಧವಾರ ವರ್ಗಾವಣೆ ಮಾಡಿ ಆದೇಶ ಹೊರಡಿಸಿದೆ.

ಮೈಸೂರು ಮಹಾನಗರ ಪಾಲಿಕೆಯಲ್ಲಿ ಖಾಲಿಯಿದ್ದ ಉಪ ಆಯುಕ್ತರ ಹುದ್ದೆಗೆ (ಆಡಳಿತ) ಕೆಎಎಸ್ ಕಿರಿಯ ಶ್ರೇಣಿ ಅಧಿಕಾರಿ ಕೆ.ಕೃಷ್ಣ ಹಾಗೂ ಹಾಸನದ ಎಲ್‌ಪಿಜಿ ಪೈಪ್‌ಲೈನ್ ಯೋಜನೆಯ ಸಕ್ಷಮ ಪ್ರಾಧಿಕಾರಿ ಹಾಗೂ ವಿಶೇಷ ಭೂಸ್ವಾಧೀನಾಧಿಕಾರಿಯಾಗಿ ಹೆಚ್.ಎಸ್.ಸತೀಶ್‌ಬಾಬು ಅವರನ್ನು ನೇಮಿಸಿ ಸರ್ಕಾರ ಆದೇಶ ಹೊರಡಿಸಲಾಗಿದೆ.

ಯದುವೀರ್ ಅಜ್ಜಿ ನಿಧನ



ಮೈಸೂರು, ಜು.12– ಮೈಸೂರು ರಾಜವಂಶಸ್ಥ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರ ಅಜ್ಜಿ ಶ್ರೀಮತಿ ಉಮಾ ಗೋಪಾಲರಾಜ್ ಅರಸ್(83) ಬುಧವಾರ ಸಂಜೆ ಲಕ್ಷ್ಮಿಪುರಂನಲ್ಲಿರುವ ತಮ್ಮ ನಿವಾಸದಲ್ಲಿ ನಿಧನರಾಗಿದ್ದಾರೆ. ಮೃತರು ಮಕ್ಕಳು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು–ವರ್ಗ ಅಗಲಿದ್ದು, ಅಂತ್ಯಕ್ರಿಯೆ ನಾಳೆ(ಜು.13) ಬೆಳಗ್ಗೆ ನಡೆಯಲಿದ್ದು, ಸ್ಥಳ ಎಲ್ಲಿ ಎಂಬುದು ನಿರ್ಧಾರವಾಗಿಲ್ಲ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಸಂತಾಪ: ಅಜ್ಜಿ ನಿಧನದ ಮಾಹಿತಿಯನ್ನು ಟ್ವಿಟರ್‌ನಲ್ಲಿ ಹಂಚಿಕೊಂಡಿರುವ ರಾಜವಂಶಸ್ಥ ಯದುವೀರ್, ಅಜ್ಜಿ ಅವರು ಯಾವಾಗಲೂ ಸರಳ, ಕರುಣಾಳು ಮತ್ತು ಎಲ್ಲರ ಪ್ರೀತಿಗೆ ಪಾತ್ರರಾಗಿದ್ದರು. ತಮ್ಮ ಮಕ್ಕಳು, ಮೊಮ್ಮಕ್ಕಳ ವ್ಯಕ್ತಿತ್ವ, ನಡವಳಿಕೆ ರೂಪಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಅವರ ಅಗಲಿಕೆ ನಮ್ಮ ಜೀವನದಲ್ಲಿ ಶೂನ್ಯ ಸೃಷ್ಟಿಸಿದೆ ಎಂದು ಸಂತಾಪ ವ್ಯಕ್ತಪಡಿಸಿದ್ದಾರೆ.

ಹೊಸ ಪಿಎಸ್‌ಐ ನೇಮಕಾತಿ ಇಲ್ಲ

ಬೆಂಗಳೂರು: ಕರ್ನಾಟಕದಲ್ಲಿ ಪೊಲೀಸ್ ಸಬ್‌ಇನ್ಸ್‌ಪೆಕ್ಟರ್ ಪರೀಕ್ಷೆ ಬರೆಯಲು ಆಕಾಂಕ್ಷಿಗಳು ಇನ್ನೂ ಸ್ವಲ್ಪ ಸಮಯ ಕಾಯಬೇಕು. ಹಿಂದಿನ ವರ್ಷದ ಪ್ರಕರಣ ಹೈಕೋರ್ಟ್‌ನಲ್ಲಿ ಬಾಕಿ ಇರುವ ಕಾರಣ ಪಿಎಸ್‌ಐ ಪರೀಕ್ಷೆ ಬರೆಯಲು ಅಭ್ಯರ್ಥಿಗಳಿಂದ ಸರ್ಕಾರ ಅರ್ಜಿ ಕರೆಯುವಂತಿಲ್ಲ ಎಂದು ಗೃಹ ಸಚಿವ ಡಾ.ಜಿ.ಪರಮೇಶ್ವರ ಹೇಳಿದ್ದಾರೆ. ಸರ್ಕಾರ 400 ಹುದ್ದೆಗಳನ್ನು ಭರ್ತಿ ಮಾಡಲು ಅರ್ಜಿ ಕರೆಯಲು ಬಯಸುತ್ತದೆ. 545 ಅಭ್ಯರ್ಥಿಗಳಿಗೆ ಸಂಬಂಧಿಸಿದ ಪ್ರಕರಣವು ಇನ್ನೂ ನ್ಯಾಯಾಲಯದಲ್ಲಿ ವಿಚಾರಣೆಯಲ್ಲಿದೆ. ಹೊಸ ಪರೀಕ್ಷೆಗಳಿಗೆ ಕರೆಯಲು ಸಾಧ್ಯವಿಲ್ಲ.

ಲೋನ್ ಆ್ಯಪ್ ಚಿತ್ರಹಿಂಸೆ: ಎಂಜಿನಿಯರಿಂಗ್ ವಿದ್ಯಾರ್ಥಿ ಆತ್ಮಹತ್ಯೆ

ಬೆಂಗಳೂರು,ಜು.12– ತ್ವರಿತವಾಗಿ ಮತ್ತು ಯಾವುದೇ ದಾಖಲೆ ಇಲ್ಲದೆ ಲೋನ್ ಕೊಡುತ್ತೇವೆ ಎಂದು ನಂಬಿಸಿ ಬಳಿಕ ಚಿತ್ರಹಿಂಸೆ ನೀಡುವ ಲೋನ್ ಆಪ್‌ಗಳು ಮತ್ತೊಮ್ಮೆ ಸೌಂಡ್ ಮಾಡಿವೆ.

ಇವುಗಳಿಂದ ಲೋನ್ ಪಡೆದು, ಚಿತ್ರ ಹಿಂಸೆಯನ್ನು ಸಹಿಸಲಾರದೆ ಪ್ರತಿಭಾನ್ವಿತ ವಿದ್ಯಾರ್ಥಿಯೊಬ್ಬ ತನ್ನ ಪ್ರಾಣವನ್ನೇ ಕಳೆದುಕೊಂಡಿದ್ದಾನೆ.

ಯಲಹಂಕದ ನಿಟ್ಟೆ ಮೀನಾಕ್ಷಿ ಕಾಲೇಜಿನಲ್ಲಿ ಮೆಕ್ಯಾನಿಕಲ್ ಎಂಜಿನಿಯರಿಂಗ್ ವಿಭಾಗದಲ್ಲಿ ಆರನೇ ಸೆಮಿಸ್ಟರ್ ಓದುತ್ತಿದ್ದ ತೇಜಸ್ ಸಾವಿಗೆ ಶರಣಾದ ವಿದ್ಯಾರ್ಥಿ. ಅವನು ಪಡೆದ ಸಾಲವೇ ಅವನ ಪಾಲಿಗೆ ಶೂಲವಾಗಿದೆ. ಸ್ಲೈಸ್ ಪೇ (Sli cepay), ಕಿಷ್ಟ್ (kissht) ಆ್ಯಪ್‌ಗಳ ಮೂಲಕ ಲೋನ್ ಪಡೆದಿದ್ದ. ಜತೆಗೆ ಕೋಟಕ್ ಮಹೀಂದ್ರಾ ಬ್ಯಾಂಕ್‌ನಲ್ಲೂ ಸಾಲ ಮಾಡಿದ್ದ. ಸ್ಲೈಸ್ ಪೇ ಮತ್ತು ಕಿಷ್ಟ್ ಆ್ಯಪ್‌ಗಳು ಕಳೆದ ಕೆಲವು ಸಮಯದಿಂದ ಹಣ ಮರುಪಾವತಿಗೆ ಬೆನ್ನು ಬಿದ್ದಿದ್ದವು. ಆದರೆ, ಹಣ ಪಾವತಿಸಲು ಸಾಧ್ಯವಾಗಿರಲಿಲ್ಲ. ಹಣ ಪಡೆದ ಬಳಿಕ ಸಾಕಷ್ಟು ಬಾರಿ ಮರುಪಾವತಿ ಮಾಡಿದ್ದರೂ ಲೋನ್ ಮುಗಿಯುತ್ತಲೇ ಇರಲಿಲ್ಲ. ಹೀಗಾಗಿ ಕೆಲವು ತಿಂಗಳಿಂದ ಕಟ್ಟಲಾಗಿರಲಿಲ್ಲ. ಇದರಿಂದ ಈ ಎರಡೂ ಆ್ಯಪ್‌ಗಳ ಕಡೆಯಿಂದ ಚಿತ್ರಹಿಂಸೆ ಆರಂಭವಾಗಿತ್ತು.



ಸಾಲ ಪಡೆದ್ದು ಅವನಿಗಾಗಿ ಅಲ್ಲ: ಆತ ತನಗಾಗಿ ಸಾಲ ಮಾಡಿರಲಿಲ್ಲ. ತನ್ನ ಜತೆಗೆ ಕಲಿಯುವ, ಗೆಳೆಯ ಹಣ ಕಾಸಿನ ಮುಗ್ಗಟ್ಟಿನಲ್ಲಿದ್ದಾಗ, ಅವನ ಕೋರಿಕೆಯ ಮೇರೆಗೆ ಅವನಿಗೆ ಸಹಾಯ ಮಾಡಲು ಮುಂದಾಗಿದ್ದೇ ಅವನನ್ನು ಚಿತ್ರಹಿಂಸೆಯ ಕೂಪಕ್ಕೆ ತಳ್ಳಿತ್ತು. ತೇಜಸ್‌ನ ಸ್ನೇಹಿತ ಮಹೇಶ್ ಕಳೆದ ಒಂದು ವರ್ಷದಿಂದ ಲೋನ್ ಕಟ್ಟದೆ ಇದ್ದುದರಿಂದ ಆಪ್‌ಗಳ ಸಿಬ್ಬಂದಿ ಬೆನ್ನು ಬಿದ್ದಿದ್ದರು. ಆತನಿಗೆ ಬಗೆ ಬಗೆಯಾಗಿ ಹೆದರಿ ಸುವುದು, ಬೆದರಿಸುವುದು, ಅಶ್ಲೀಲ ಚಿತ್ರಗಳನ್ನು ಮಾಡಿ ಮನೆಯವರಿಗೆ ಕಳುಹಿಸುವುದಾಗಿ ಎಚ್ಚರಿಸುವುದು, ಸ್ನೇಹಿತರಿಗೆ ಕರೆ ಮಾಡುವುದು ಹೀಗೆ ಚಿತ್ರ ವಿಚಿತ್ರ ರೀತಿಯಲ್ಲಿ ಮಾನಸಿಕ ಹಿಂಸೆ ನೀಡುತ್ತಿದ್ದವು.

ಕಳೆದ ಕೆಲವು ಸಮಯದಿಂದ ಎದುರಿಸುತ್ತಿರುವ ಈ ಮಾನಸಿಕ ಹಿಂಸೆಯಿಂದ ತೇಜಸ್‌ಗೆ ಪಾಠದ ಮೇಲೆ ಏಕಾಗ್ರತೆ ಸಾಧಿಸಲೂ ಸಾಧ್ಯವಾಗುತ್ತಿರಲಿಲ್ಲ. ಹೀಗಾಗಿ ಅವನು ಇದರಿಂದ ಬಚಾವಾಗಲು ಇರುವುದು ಒಂದೇ ದಾರಿ, ಅದು ಸಾವು ಎಂಬ ತೀರ್ಮಾನಕ್ಕೆ ಬಂದಿದ್ದಾನೆ.

ಮಂಗಳವಾರ ಸಂಜೆ ಆರು ಗಂಟೆಯ ಸುಮಾರಿಗೆ ಮನೆಯಲ್ಲಿ ತನ್ನ ತಾಯಿಯ ವೇಲ್‌ನ್ನೇ ನೇಣಾಗಿಸಿ ಕೊರಳಿಗೆ ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಪೋಷಕರು ಜಾಲಹಳ್ಳಿ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದು, ಪ್ರಕರಣದ ಸಮಗ್ರ ತನಿಖೆ ನಡೆಸಬೇಕು ಎಂದು ಮನವಿ ಮಾಡಿದ್ದಾರೆ.

ಡೆತ್ ನೋಟ್ ಬರೆದಿಟ್ಟಿದ್ದ ತೇಜಸ್: ಈ ನಡುವೆ, ತೇಜಸ್ ಆತ್ಮಹತ್ಯೆ ಮಾಡಿಕೊಳ್ಳುವ ಮುನ್ನ ಡೆತ್ ನೋಟ್ ಬರೆದಿಟ್ಟಿದ್ದಾನೆ. ಅದರಲ್ಲಿ "ಅಮ್ಮ, ಅಪ್ಪ ನನ್ನನ್ನು ಕ್ಷಮಿಸಿ... ನಾನು ಮಾಡಿರುವ ತಪ್ಪಿಗೆ ಬೇರೆ ದಾರಿಯಿಲ್ಲ... ನಾನು ಮಾಡಿರುವ ಸಾಲ ತೀರಿಸಲು ಆಗೋದಿಲ್ಲ. ಅದಕ್ಕಾಗಿ ಇದು ನನ್ನ ಕೊನೆಯ ತೀರ್ಮಾನ... ಥ್ಯಾಂಕ್ಯು ಗುಡ್ ಬೈ" ಎಂದಿದ್ದಾನೆ.

ಲೋನ್ ಆ್ಯಪ್‌ಗಳ ಬಗ್ಗೆ ಎಚ್ಚರವಿರಲಿ...

ಸುಲಭದಲ್ಲಿ ಲೋನ್ ಕೊಡುತ್ತೇವೆ ಎಂದು ನಂಬಿಸಿ ನಂತರ ಸಾಲದ ಸುಳಿಗೆ ತಳ್ಳುವ ಆ್ಯಪ್‌ಗಳು ಬಹಳಷ್ಟು ಸಂಖ್ಯೆಯಲ್ಲಿವೆ. ಕೇಂದ್ರ ಸರಕಾರ ಈ ಹಿಂದೆ Lazyapp, Kissht, Meity, Easyloan, Slicepay ಮೊದಲಾದ `Buy Now Pay Later' (BNPL) appಗಳನ್ನು ನಿಷೇಧ ಮಾಡಿತ್ತು. ಇವುಗಳಲ್ಲಿ ಕೆಲವು ವಿದೇಶದಿಂದ ಕಾರ್ಯಾಚರಿಸುತ್ತಿದ್ದರೆ, ಇನ್ನು ಕೆಲವು ನಾನಾ ರಾಜ್ಯಗಳಿಂದ ಕಾರ್ಯಾಚರಿಸುತ್ತಿವೆ. ಇವುಗಳು ಸುಲಭದಲ್ಲಿ, ಒಂದೇ ಕ್ಲಿಕ್‌ನಲ್ಲಿ ಸಾಲ ನೀಡಿ ನಂತರ ಚಿತ್ರಹಿಂಸೆ ನೀಡಿ ಹತ್ತಾರು ಪಟ್ಟು ವಸೂಲು ಮಾಡುವುದು ಇವುಗಳ ಕಾರ್ಯತಂತ್ರ ಇವುಗಳಿಗೆ ಬಲಿಯಾಗಿ ಅದೆಷ್ಟೋ ಮಂದಿ ಪ್ರಾಣ ಕಳೆದುಕೊಂಡಿದ್ದಾರೆ. ಇದರ ಬಗ್ಗೆ ಎಚ್ಚರಿಕೆಯಿಂದ ವ್ಯವಹರಿಸಬೇಕು. ಎಷ್ಟೇ ಕಷ್ಟವಾದರೂ ರಾಷ್ಟ್ರೀಕೃತ ಬ್ಯಾಂಕ್ ಇಲ್ಲವೇ ನಂಬಲರ್ಹ ಸಹಕಾರ ಮತ್ತಿತರ ಸ್ಥಳೀಯ ಬ್ಯಾಂಕ್‌ಗಳಿಂದ ಲೋನ್ ಪಡೆಯುವುದು ಉತ್ತಮ ಎನ್ನುವುದು ತಜ್ಞರು ನೀಡುವ ಸಲಹೆ.

ನಕ್ಕರೆ ಅದೇ ಸ್ವರ್ಗ

ಗುಂಡ : ಅಕಸ್ಮಾತ್ ನ್ಯೂಸ್ ಚಾನೆಲ್ ಏನಾದ್ರು ಇದ್ದಿಲ್ಲಾ ಅಂದಿದ್ರೆ ಏನಾಗ್ತಿತ್ತು?

ತಿಮ್ಮ : ಕೊರೊನಾ ಚೀನಾ ಬಾರ್ಡರ್ ದಾಟಿ ಬರ್ತಾನೇ ಇರ್ಲಿಲ್ಲ.

ಮೈಸೂರು ಮಿತ್ರ

ಗುರುವಾರ, 13 ಜುಲೈ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ..........

ತನ್ನ ಗಂಡನ ಕೀರ್ತಿಗೆ ಕಳಂಕ ಬಾರದಂತೆ ಕಾಪಾಡುವುದು ಹೆಂಡತಿಯ ಧರ್ಮ. ಅದಕ್ಕಾಗಿ ಅವಳು ಸುಳ್ಳು ಹೇಳುವುದರಲ್ಲಿ ತಪ್ಪಿಲ್ಲ. –ನುಡಿಮುತ್ತು

ವೇದ ಸುಳ್ಳಾದರೂ { ಜನಕ್ಕಂಜದಿದ್ದರೂ
ಗಾದೆ ಸುಳ್ಳಾಗದು { ಮನಕ್ಕಂಜು

ನಿಮ್ಮ ಪತ್ರಗಳು

ಆಶಾ ಕಾರ್ಯಕರ್ತೆಯರ ಆಸೆಗೆ ತಣ್ಣೀರು ಎರಚಿದ ಸರ್ಕಾರ

ಮಾನ್ಯರೆ,

2023 ವಿಧಾನಸಭೆ ಚುನಾವಣಾ ಪ್ರಚಾರ ವೇಳೆಯಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದರೆ ಆಶಾ ಕಾರ್ಯಕರ್ತೆಯರಿಗೆ ಐದು ಸಾವಿರ ಗೌರವಧನದಿಂದ ರೂ. ಹದಿನೈದು ಸಾವಿರಕ್ಕೆ ಏರಿಸುತ್ತೇವೆ ಎಂಬ ಆರನೆಯ ಗ್ಯಾರಂಟಿಯನ್ನು ಕಾಂಗ್ರೆಸ್ ನಾಯಕಿ ಪ್ರಿಯಾಂಕ ಗಾಂಧಿ ಘೋಷಣೆ ಮಾಡಿದ್ದರು.

ಏಪ್ರಿಲ್ 30 ರಂದು ಖಾನಾಪುರದಲ್ಲಿ ಚುನಾವಣಾ ಪ್ರಚಾರದ ಸಭೆಯಲ್ಲಿ ಘೋಷಣೆ ಮಾಡಿದ್ದರು. ಅವರ ಮಾತನ್ನು ನಂಬಿ ಎಲ್ಲಾ ಆಶಾ ಕಾರ್ಯಕರ್ತೆಯರಿಗೆ ಕಾಂಗ್ರೆಸ್ ಅಧಿಕಾರಕ್ಕೆ ಬರಲಿ ಎಂಬ ಕನಸು ಅಂದೇ ಚಿಗುರೊಡೆದಿತ್ತು. ಹಾಗೆಯೇ ಮತ ಚಲಾಯಿಸಿ ಕಾಂಗ್ರೆಸ್ ಅಧಿಕಾರಕ್ಕೆ ಬಂದಿದ್ದರಿಂದ ತಮ್ಮ ಕನಸು ನನಸಾದ ಸಂಭ್ರಮದಲ್ಲಿದ್ದ ಆಶಾ ಕಾರ್ಯಕರ್ತರಿಗೆ ಈಗ ವಿಧಾನಸಭೆಯಲ್ಲಿ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಆ ಪ್ರಸ್ತಾವನೆ ಸದ್ಯಕ್ಕೆ ಸರ್ಕಾರದ ಮುಂದಿಲ್ಲ ಎನ್ನುವ ಮೂಲಕ ಅವರ ಆಸೆಗೆ ತಣ್ಣೀರೆರಚಿದ್ದಾರೆ.

ಜೆಡಿಎಸ್ ಶಾಸಕ ತಿಪ್ಪೇಸ್ವಾಮಿಯವರ ಪ್ರಶ್ನೆಗೆ ಈ ರೀತಿ ಉತ್ತರಿಸಿದ ದಿನೇಶ್ ಗುಂಡೂರಾವ್ ಸ್ವತಃ ತಮ್ಮ ಅಧಿನಾಯಕಿರೊಬ್ಬರ ಆಶ್ವಾಸನೆ ಜನರಿಗೆ ಮಂಕುಬೂದಿ ಎರಚುವುದಾಗಿತ್ತು ಎಂದು ಸಾಬೀತುಪಡಿಸಿದ್ದಾರೆ.

ಇನ್ನೂ ಇಂತಹ ಎಷ್ಟು ಸುಳ್ಳಿನ ಕಂತೆ ಸರ್ಕಾರದಿಂದ ಬರಬೇಕಾಗಿದೆಯೋ. ಬಡ ಆಶಾ ಕಾರ್ಯಕರ್ತೆಯರ ಕೂಗು ವಿರೋಧ ಪಕ್ಷಕ್ಕೂ ಕೇಳದಿರುವುದು ವಿಪರ್ಯಾಸವೇ ಸರಿ. ಬಿಜೆಪಿ ಹಾಗೂ ಜೆಡಿಎಸ್ ಈ ಬಗ್ಗೆ ಪ್ರಶ್ನೆ ಮಾಡದಿರುವುದು ರಾಜ್ಯದಲ್ಲಿ ವಿರೋಧ ಪಕ್ಷದ ಅಸ್ತಿತ್ವದ ಬಗ್ಗೆ ಅನುಮಾನ ಮೂಡುತ್ತಿದೆ.

–ಶಿವಮೊಗ್ಗ ನಾ. ದಿನೇಶ್ ಅಡಿಗ, ಮೈಸೂರು

ವಿದ್ಯುತ್ ಕಂಬದಿಂದಾಗುವ ಅಪಘಾತ ತಪ್ಪಿಸಿ?

ಮಾನ್ಯರೆ,

ಮಾನಸಗಂಗೋತ್ರಿಯ ಒಳಾಂಗಣದಲ್ಲಿರುವ ಗಡಿಯಾರದ ಮುಂದಿನ ಹಾಗೂ



ವಿಜ್ಞಾನ ಮತ್ತು ಮಾಹಿತಿ ತಂತ್ರಜ್ಞಾನದ ಸೌಧದ ಬಲ ಬದಿಯಲ್ಲಿರುವ ಒಂದು ವಿದ್ಯುತ್ ಕಂಬಕ್ಕೆ ಮರವೊಂದು ಚಾಚಿಕೊಂಡಿದೆ. ಕಂಬದ ಪಕ್ಕದಲ್ಲಿರುವ ಮರದ ರೆಂಬೆ ಕೊಂಬೆಗಳು ಹಾಗೂ ಎಲೆಗಳು ತಗಲಿಕೊಂಡಿವೆ. ಅದರ ಪಕ್ಕದಲ್ಲಿ ನಡೆಯುವಾಗ ಜೂಂ ಎಂದು ಶಬ್ದ ಕೇಳಿ ಬರುತ್ತದೆ. ಇದರಿಂದ ಆ ಕಂಬದ ಸುತ್ತಮುತ್ತ ಅಪಾಯಕಾರಿಯಾದ ವಾತಾವರಣ ಸೃಷ್ಟಿಯಾಗುತ್ತಿದೆ. ಪ್ರತಿದಿನ ಮಾನಸಗಂಗೋತ್ರಿಯ ಒಳಾಂಗಣದಲ್ಲಿ ಓಡಾಡುವ ವಿದ್ಯಾರ್ಥಿಗಳು ಹಾಗೂ ವಾಯುವಿಹಾರಿಗಳು ಅದರ ಪಕ್ಕದಲ್ಲಿ ತೆರಳುವಾಗ ಭಯದ ವಾತಾವರಣದಲ್ಲಿ ಓಡಾಡುವಂತಾಗಿದೆ. ಕೂಡಲೇ ಸಂಬಂಧಪಟ್ಟ ಅಧಿಕಾರಿಗಳು ಇದರ ಬಗ್ಗೆ ನಿರ್ಲಕ್ಷ್ಯ ವಹಿಸದೆ ಮುಂದಾಗುವ ಅಪಘಾತವನ್ನು ತಪ್ಪಿಸಬೇಕಾಗಿ ಈ ಮೂಲಕ ಮನವಿ.

–ಅನಿಲ್ ರಾಜ, ಕುಕ್ಕರಹಳ್ಳಿ ಮೈಸೂರು

ಪಾಲಿಕೆ ಸಮೀಪವೇ ಅವ್ಯವಸ್ಥೆ ಸರಿಯೇ?

ಮಾನ್ಯರೆ,

ಮೈಸೂರಿನ ಹೃದಯ ಭಾಗವಾದ ಮೈಸೂರು ನಗರ ಬಸ್ ನಿಲ್ದಾಣದ ಹಾಪ್‌ಕಾಮ್ಸ್ ಪಕ್ಕದ ಪ್ರವೇಶ ದ್ವಾರದಲ್ಲಿ ಒಳಚರಂಡಿ ಪೈಪ್ ಒಡೆದು ಸುಮಾರು 6 ತಿಂಗಳುಗಳೇ ಆಗಿದೆ. ಕಲುಷಿತ ನೀರು ರಸ್ತೆ ಮೇಲೆ ಹರಿಯುವುದರಿಂದ ಬಸ್‌ಗಳು ನಿಲ್ದಾಣದ ಒಳಗೆ ಪ್ರವೇಶಿಸುವಾಗ ಪಾದಚಾರಿಗಳು, ಪ್ರಯಾಣಿಕರು, ಪ್ರವಾಸಿಗರ ಮೇಲೆ ಎರಚುತ್ತದೆ. ಜನ ಶಪಿಸುತ್ತಲೇ ಸಂಚರಿಸುತ್ತಾರೆ. ಮೈಸೂರು ಮಹಾನಗರ ಪಾಲಿಕೆಗೆ ಅತ್ಯಧಿಕ ತೆರಿಗೆ ಪಾವತಿಸುವ ಕಟ್ಟಡ ಇದಾಗಿದೆ. ಪೂಜ್ಯ ಮಹಾಪೌರರು ಇಂದೋರ್ ಮಾದರಿ ಮೈಸೂರನ್ನು ಸ್ವಚ್ಛ ನಗರಿ ಮಾಡುತ್ತೇವೆ ಎನ್ನುತ್ತಾರೆ. ಇದೇನಾ ಸ್ವಚ್ಛ ನಗರಿ.

–ನೊಂದ ಪ್ರಯಾಣಿಕರು, ಮೈಸೂರು.

ಶೀಘ್ರವಾಗಿ ರೈಲ್ವೆ ನಿಲ್ದಾಣದ ಪ್ಲಾಟ್ ಫಾರಂ ಅನ್ನು ಅಭಿವೃದ್ಧಿಗೊಳಿಸಿ



ಮಾನ್ಯರೆ,

ಬೆಂಗಳೂರಿನ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಮೆಜೆಸ್ಟಿಕ್ ರೈಲ್ವೆ ನಿಲ್ದಾಣದಲ್ಲಿರುವ ಫ್ಲಾಟ್ ಫಾರಂ 6 ರಲ್ಲಿ ಕಾಮಗಾರಿ ನಡೆಯುತ್ತಿದ್ದು, ಸುಮಾರು 350 ಮೀ. ನಷ್ಟು ಅಗೆದಿದ್ದಾರೆ. ಇದರಿಂದ ಪ್ರತಿನಿತ್ಯ ಈ ಫ್ಲಾಟ್ ಫಾರಂನಿಂದ ರಾಜ್ಯ ಮತ್ತು ಅಂತರರಾಜ್ಯಗಳು ಸೇರಿದಂತೆ ಇತರೆಡೆಗೆ ತೆರಳಲು ಪ್ರಯಾಣಿಕರಿಗೆ ತುಂಬಾ ತೊಂದರೆಯಾಗಿದೆ. ಅಲ್ಲದೆ ಮಳೆ ಬಂದರೆ ನೀರು ತುಂಬಿಕೊಂಡು ಕೆಸರು ಗದ್ದೆಯಂತಾಗುತ್ತದೆ. ಶನಿವಾರ ಮತ್ತು ಭಾನುವಾರಗಳಂದು ಪ್ರಯಾಣಿಕರ ಸಂಖ್ಯೆ ಹೆಚ್ಚಾಗುವುದರಿಂದ ಚಿಕ್ಕಮಟ್ಟ ಮಕ್ಕಳು, ವಯೋವೃದ್ಧರು ಲಗೇಜುಗಳನ್ನು ಹಿಡಿದು ರೈಲು ಹತ್ತಲು ತುಂಬಾ ಕಷ್ಟವಾಗುತ್ತದೆ. ಮೈಸೂರಿಗೆ ತೆರಳಲು ರೈಲನ್ನು ಹತ್ತುವಾಗ ಅಗೆದಿರುವ ಹಳ್ಳಕ್ಕೆ ಕಾಲು ಜಾರಿ ಬಿದ್ದ ಪರಿಣಾಮ ತೊಂದರೆಯಾಗಿ ರೈಲು ಸಿಗದಂತಾಗಿರುವುದುಂಟು. ಸಾರ್ವಜನಿಕ ಹಿತದೃಷ್ಟಿಯಿಂದ ಸಂಬಂಧಪಟ್ಟ ಅಧಿಕಾರಿಗಳು ಶೀಘ್ರವಾಗಿ ಈ ಫ್ಲಾಟ್‌ಫಾರಂ ಅನ್ನು ಅಭಿವೃದ್ಧಿಗೊಳಿಸಿ ಪ್ರಯಾಣಿಕರಿಗೆ ಅನುಕೂಲ ಮಾಡಿಕೊಡಬೇಕೆಂದು ಈ ಮೂಲಕ ಮನವಿ.

–ನಾಗೇಶ್, ಮಾನಸಗಂಗೋತ್ರಿ, ಮೈಸೂರು.

ಸಮಾಜಮುಖಿ



ಪ್ರೊ. ಆರ್. ಇಂದಿರಾ
ಸಮಾಜಶಾಸ್ತ್ರಜ್ಞೆ
ramaraoindira@gmail.com

ಶಕ್ತಿಯುಕ್ತ ಮಹಿಳೆಗೆ ಗೃಹಲಕ್ಷ್ಮಿ ಒಲಿದರೆ ಸಂತೃಪ್ತೆ !





> “ ಉಚಿತವಾಗಿ ಹಣ ನೀಡಿದರೆ ಸರ್ಕಾರಿ ಬೊಕ್ಕಸ ಬರಿದಾಗುತ್ತದೆ; ಯಾರಿಗೋ ಧನ ಸಹಾಯ ಒದಗಿಸಲು ಆದಾಯ ತೆರಿಗೆ ನೀಡುತ್ತಿರುವವರಿಗೇಕೆ ಶಿಕ್ಷೆ; ದುಡಿಯದೆ ಹಣ ಪಡೆಯುವುದು ಯಾವ ನ್ಯಾಯ ಮುಂತಾದ ಟೀಕೆಗಳು ಈ ಯೋಜನೆಯ ವಿರುದ್ಧ ಹರಿದು ಬರುತ್ತಿವೆ. ಆದರೆ ಮಹಿಳೆಯರ ಜೀವನಾನುಭವವನ್ನು ಅಧ್ಯಯನ ಮಾಡಿದಾಗ ಅವರ ಕೈ ಸೇರುವ ಹಣ ಸಾಮಾನ್ಯವಾಗಿ ಕುಟುಂಬದ ಅಗತ್ಯಗಳ ಪೂರೈಕೆಗಾಗಿ ಬಳಸಲ್ಪಡುತ್ತದೆ ಅಥವಾ ಯಾವುದಾದರೂ ಸಣ್ಣ ಆದಾಯ ತರುವಂಥ ಚಟುವಟಿಕೆಗಳಲ್ಲಿ ತೊಡಗಿ ಸಲ್ಪಡುತ್ತದೆ ಎಂಬುದು ತಿಳಿದು ಬರುತ್ತದೆ. ಮಹಿಳೆಯರ ಬಳಿ ಹಣ ಬಂದಾಗ ಅದು ಎಷ್ಟೇ ಸಣ್ಣ ಮೊತ್ತವಾಗಲೀ ಅದನ್ನು ಉಳಿಸುವ ಪರಿಪಾಠ ಕಂಡು ಬರುತ್ತದೆ.

ಕಳೆದ ವಾರವಷ್ಟೇ ಮಂಡನೆಯಾದ ಕರ್ನಾಟಕದ 2023–24ನೇ ಸಾಲಿನ ಬಜೆಟ್, ಮಹಿಳಾ ಅಭಿವೃದ್ಧಿಗೆ ಪೂರಕವಾದ ಕೆಲ ಯೋಜನೆಗಳನ್ನು ಸೂಚಿಸಿದೆ. ಇವುಗಳಲ್ಲಿ ಪ್ರಮುಖವಾದುವೆಂದರೆ ಮನೆಯ ಯಜಮಾನಿಯ ಖಾತೆಗೆ ನೇರವಾಗಿ ಪ್ರತಿ ತಿಂಗಳೂ 2000 ರೂಪಾಯಿಗಳನ್ನು ಜಮಾ ಮಾಡಲಿರುವ ಗೃಹಲಕ್ಷ್ಮಿ ಯೋಜನೆ, ಮಹಿಳಾ ಉದ್ಯಮಿಗಳಿಗೆ ಲಭ್ಯವಿರುವ ಸಾಲದ ಮಿತಿಯಲ್ಲಿ ಏರಿಕೆ, ಆಸಿಡ್ ದಾಳಿಗೆ ಒಳಗಾದವರಿಗೆ ನೀಡುವ ಬೆಂಬಲ ಹಣದಲ್ಲಿ ಏರಿಕೆ ಮತ್ತು ಮಹಿಳಾ ಅಭಿವೃದ್ಧಿ ನಿಗಮದ ಮೂಲಕ ನೀಡಲಿರುವ 5 ಲಕ್ಷ ರೂಪಾಯಿಗಳ ಬಡ್ಡಿ ರಹಿತ ಸಾಲ ಸೌಲಭ್ಯ. ಆದರೆ ಈ ಯೋಜನೆಗಳ ಸಾಧಕ ಬಾಧಕಗಳನ್ನು ವಸ್ತುಸ್ಥಿತಿಗಳ ಹಿನ್ನೆಲೆಯಲ್ಲಿ ವಿಶ್ಲೇಷಣೆಗೆ ಒಳ ಪಡಿಸಬೇಕಾಗುತ್ತದೆ.

ಬಜೆಟ್ ಮಂಡನೆಯಾದ ದಿನದಿಂದ ಹಿಡಿದು ಇಂದಿನವರೆಗೂ ಅತ್ಯಂತ ಹೆಚ್ಚು ಚರ್ಚೆಗೆ ಒಳ ಪಡುತ್ತಿರುವ ಯೋಜನೆಗಳೆಂದರೆ ಮಹಿಳೆಯರಿಗೆ' ಶಕ್ತಿ' ಯೋಜನೆ ನೀಡಿರುವ ಉಚಿತ ಬಸ್ ಪ್ರಯಾಣದ ಸೌಕರ್ಯ ಮತ್ತು ಅವರಿಗೆ ಆರ್ಥಿಕ ಭದ್ರತೆಯನ್ನು ನೀಡುತ್ತದೆ ಎಂದು ಬಿಂಬಿಸಿರುವ 'ಗೃಹಲಕ್ಷ್ಮಿ'. ಉಚಿತ ಬಸ್ ಪ್ರಯಾಣ ಮಹಿಳೆಯರ ಬದುಕಲ್ಲಿ ತರಬಹುದಾದ ಬದಲಾವಣೆಗಳನ್ನು ಈಗಾಗಲೇ ಚರ್ಚೆಗೆ ಒಳಪಡಿಸಲಾಗಿರುವುದರಿಂದ ನೇರವಾಗಿ ಗೃಹಲಕ್ಷ್ಮಿ ಯೋಜನೆಯತ್ತ ಲಕ್ಷ್ಯ ಹರಿಸೋಣ.

ಗೃಹಲಕ್ಷ್ಮಿ ಯೋಜನೆಯ ಪ್ರಯೋಜನವನ್ನು ಪಡೆಯಲು ಅರ್ಜಿ ಸಲ್ಲಿಸುವ ಮಹಿಳೆಯರು ಅಂತ್ಯೋದಯ, ಬಡತನದ ರೇಖೆಯ ಕೆಳಗೆ ಅಥವಾ ಬಡತನದ ರೇಖೆಯ ಮೇಲೆ ಇರುವ ಕುಟುಂಬಗಳಿಗೆ ಸೇರಿದವರಾಗಿರಬಹುದು; ಒಂದು ಕುಟುಂಬದಲ್ಲಿ ಒಬ್ಬ ಮಹಿಳೆ ಮಾತ್ರ ಈ ಯೋಜನೆಯ ಪ್ರಯೋಜನವನ್ನು ಪಡೆಯಬಹುದು; ಸರ್ಕಾರಿ ಸೇವೆಯಲ್ಲಿರುವ ಮತ್ತು ತೆರಿಗೆ ಪಾವತಿಸುವ ಮಹಿಳೆಯರು ಯೋಜನೆಯಲ್ಲಿ ಭಾಗಿದಾರರಾಗಿರಲು ಸಾಧ್ಯವಿಲ್ಲ ಹಾಗೂ ಮನೆ ಯಜಮಾನಿಯ ಪತಿ ಆದಾಯ ತೆರಿಗೆ ಅಥವಾ ಜಿಎಸ್‌ಟಿ ರಿಟರ್ನ್ಸ್ ಸಲ್ಲಿಸುವವರಾಗಿದ್ದರೆ ಅವರು ಈ ಯೋಜನೆಯ ಪರಿಧಿಯೊಳಗೆ ಬರಲಾಗುವುದಿಲ್ಲ.

ಯೋಜನೆಯ ಆಶೋತ್ತರಗಳೇನೋ ಬಹು ಆದರ್ಶಮಯವಾಗಿವೆ. ಅವುಗಳಲ್ಲಿ ಪ್ರಮುಖವಾದುವು ಇದರಿಂದ ಮಹಿಳೆಯರ ಜೀವನದ ಗುಣಮಟ್ಟ ಏರುತ್ತದೆ; ಅವರ ಜೀವನಾವಶ್ಯಕತೆಗಳ ಪೂರೈಕೆಯಾಗುತ್ತದೆ; ಬಡತನ ನಿವಾರಣೆಯಾಗುತ್ತದೆ; ಮಹಿಳೆಯರು ಸ್ವಾವಲಂಬಿಗಳಾಗಿ ಬದುಕಲು ಅವಕಾಶಗಳು ಸೃಷ್ಟಿಯಾಗುತ್ತವೆ, ಕುಟುಂಬ ನಿರ್ವಹಣೆಯಲ್ಲಿ ಮಹಿಳೆಯರ ಪಾತ್ರಕ್ಕೆ ಮಾನ್ಯತೆ ದೊರೆಯುತ್ತದೆ ಇತ್ಯಾದಿ. ಸುಮಾರು 30,000 ಕೋಟಿ ವೆಚ್ಚದಲ್ಲಿ ಜಾರಿಗೆ ಬರಲಿರುವ ಗೃಹಲಕ್ಷ್ಮಿ ಯೋಜನೆಯ ನಿಯಮಗಳ ಅನ್ವಯ ಪ್ರತಿ ತಿಂಗಳೂ ಮನೆಯ ಯಜಮಾನಿಯ ಖಾತೆಗೆ ನೇರವಾಗಿ 2000 ರೂಪಾಯಿಗಳು ಜಮಾ ಆಗಲಿದ್ದು ಇದು ಇಡೀ ದೇಶದಲ್ಲೇ ಅತಿ ದೊಡ್ಡ ಆರ್ಥಿಕ ಭದ್ರತಾ ಯೋಜನೆಯಾಗಿ ರೂಪುಗೊಳ್ಳಲಿದೆ ಎಂಬುದು ಸರ್ಕಾರದ ಅಂಬೋಣ. ಮಹಿಳೆಯ ಖಾತೆಗೆ ನೇರವಾಗಿ ಹಣ ಮಂಜೂರಾಗುವುದು ಸರಿಯೇ, ಆದರೆ ಈ ಹಣವನ್ನು ಬಳಕೆ ಮಾಡಿಕೊಂಡು ಅವರು ತಮ್ಮ ಬದುಕಿನ ಅವ ಕಾಶಗಳನ್ನು ಹೆಚ್ಚಿಸಿಕೊಳ್ಳುವುದು ಹೇಗೆ, ಈ ಹಣದಿಂದ ಅವರ ಅಥವಾ ಕುಟುಂಬ ಜೀವನದ ಗುಣಮಟ್ಟ ಏರುವುದೇ, ಎಲ್ಲಕಿಂತ ಮಿಗಿಲಾಗಿ ಆ ಹಣವನ್ನು ಖರ್ಚು ಮಾಡಲು ಆ ಮಹಿಳೆಗಿರುವ ಸ್ವಾತಂತ್ರ್ಯವೆಷ್ಟು ಮುಂತಾದ ಪ್ರಶ್ನೆಗಳ ಹಿನ್ನೆಲೆಯಲ್ಲಿ ಗೃಹಲಕ್ಷ್ಮಿ ಯೋಜನೆಯ ವಿಮರ್ಶೆ ಮಾಡಬೇಕಾಗುತ್ತದೆ.

ಈ ಯೋಜನೆಯ ಪ್ರಯೋಜನವನ್ನು ಪಡೆಯಲಿರುವ ಮಹಿಳೆಯ ಬ್ಯಾಂಕ್ ಖಾತೆಗೆ ನೇರವಾಗಿ ಹಣ ಸಂದಾಯವಾಗುವ ವ್ಯವಸ್ಥೆ ನಿಜಕ್ಕೂ ಸ್ವಾಗತಾರ್ಹ. ಏಕೆಂದರೆ ಅನೇಕ ಕುಟುಂಬಗಳಲ್ಲಿ ಮಹಿಳೆಯರಿಗೆ ತಾವು ಗಳಿಸಿದ ಆದಾಯವನ್ನು ಹೇಗೆ ಬಳಸಬೇಕೆಂದು ನಿರ್ಧಾರ ತೆಗೆದುಕೊಳ್ಳುವ ಸ್ವಾತಂತ್ರ್ಯ ಇರುವುದಿಲ್ಲ. 'ಗೃಹಲಕ್ಷ್ಮಿ' ಎಂಬ ಪದ ಮಹಿಳೆಯರನ್ನು ವೈಭವೀಕರಿಸಲು ಪುರುಷಪ್ರಧಾನ ವ್ಯವಸ್ಥೆ ಬಳಸುವ ಲಿಂಗಸ್ಥಿರ ಮಾದರಿಯೇ ಆದರೂ 'ಮನೆಯ ಯಜಮಾನಿ' ಎಂಬ ಪರಿಕಲ್ಪನೆ ಸಾಮಾನ್ಯವಾಗಿ ಪತಿಯನ್ನು, ಒಟ್ಟಾರೆ ಪುರುಷನನ್ನು ಕುಟುಂಬದ ಯಜಮಾನ ಎಂದು ಬಿಂಬಿಸುವ ಸ್ಥಾಪಿತ ಪರಿಪಾಠಕ್ಕಿಂತ ಭಿನ್ನವಾಗಿದೆ ಎನ್ನುವುದು ಗಮನಾರ್ಹವಾದ ಅಂಶ. ಆದರೂ ಮನೆಯ ಯಜಮಾನಿ ಯಾರು ಎಂಬುದನ್ನು ನಿರ್ಧರಿಸುವ ಪರಿಮಾಪಕಗಳು ಯಾವುವು? ಆಕೆಯ ವಯಸ್ಸೇ, ಆ ಕುಟುಂಬದ ಸಂಬಂಧ ವಲಯದಲ್ಲಿ ಆಕೆಯ ಸ್ಥಾನವೇ ಅಥವಾ ಆಕೆ ಕುಟುಂಬದಲ್ಲಿ ಹೊಂದಿರುವ ಅಧಿಕಾರವೇ? ಈ ಪ್ರಶ್ನೆಗಳು ಏಳುತ್ತವೆ. ಯಜಮಾನಿ ಯಾರು ಎಂಬ ಚರ್ಚೆ ನಡೆಯುತ್ತಿರುವ ಸಂದರ್ಭದಲ್ಲಿ ಅತ್ತೆ ಒಪ್ಪಿದರೆ ಸೊಸೆಯನ್ನು ಮನೆಯ ಯಜಮಾನಿ ಎಂದು ಪರಿಗಣಿಸು ವುದು ಎಂಬ ಮಾತುಗಳು ಕೇಳಿ ಬಂದವು. ಅತ್ತೆಯೂ ಮಹಿಳೆಯೇ, ಸೊಸೆಯೂ ಮಹಿಳೆಯೇ, ಆದರೆ ಅವರವರ ಪಾತ್ರ ಮತ್ತು ಅಧಿಕಾರ ನಿರ್ಧಾರಕಗಳು ಮಾತ್ರ ಪುರುಷ ಪ್ರಾಧಾನ್ಯತೆಯ ಸೂಚಕಗಳೇ. ಈ ಎಲ್ಲ ಅಂಶಗಳನ್ನು ಪರಿಗಣಿಸಿ 'ಮನೆಯ ಯಜಮಾನಿ' ಯಾರು ಎಂಬುದನ್ನು ನಿರ್ಧರಿಸುವುದು ಮೊದಲು ಆಗಬೇಕಾದ ಕೆಲಸ.

ಮಹಿಳೆಯರಿಗೆ ನೀಡುವ ಹಣ ನೇರವಾಗಿ ಬ್ಯಾಂಕ್ ಖಾತೆಗೆ ಜಮಾ ಆಗುವುದರಿಂದ ಮತ್ತೊಂದು ಧನಾತ್ಮಕ ಪರಿಣಾಮ ಉಂಟಾಗುವ ಸಾಧ್ಯತೆ ಇದೆ. ವಿಶೇಷವಾಗಿ ಗ್ರಾಮೀಣ ಭಾಗಗಳಲ್ಲಿ ಇಂದಿಗೂ ಮಹಿಳಾ ಅಭಿವೃದ್ಧಿಗೆ ಸವಾಲನ್ನೆಸೆದಿರುವುದು ಅನೇಕ ಪುರುಷರಲ್ಲಿರುವ ಕುಡಿತದ ಚಟ. ಮಹಿಳೆಯರ ಕೈಗೆ ಹಣ ಬಂತೆಂದರೆ ಅವರ ಮೇಲೆ ದೌರ್ಜನ್ಯ ನಡೆಸಿ ಹಣವನ್ನು ಕಿತ್ತುಕೊಂಡು, ಮದ್ಯದ ಅಂಗಡಿಗಳತ್ತ ಧಾವಿಸುವುದು ಸಾಮಾನ್ಯವಾಗಿ ಕಂಡು ಬರುವಂಥ ಪ್ರವೃತ್ತಿ. ಆದರೆ ಹಣ ಬ್ಯಾಂಕಿಗೆ ಬಂದಾಗ ಮಹಿಳೆಯರು ಒಪ್ಪುವವರೆಗೂ ಆ ಹಣವನ್ನು ಕಿತ್ತುಕೊಳ್ಳಲು ಯಾರಿಗೂ ಸಾಧ್ಯವಾಗುವುದಿಲ್ಲ. ಮೇಲಾಗಿ ಇದೇ ಬಜೆಟ್‌ನಲ್ಲಿ ಮದ್ಯದ ಬೆಲೆ ಏರಿಸಿರು ವುದರಿಂದ ಪ್ರಾಯಶಃ ಮದ್ಯ ಸೇವನೆ ಚಟ ಕಡಿಮೆಯಾಗ ಬಹುದೇನೋ ಎನ್ನುವುದು ಒಂದು ಆಶಯ. ಆದರೆ ಮದ್ಯದ ಬೆಲೆ ಹೆಚ್ಚಿರುವುದು ಮತ್ತು ಹಣ ನೇರವಾಗಿ ಬ್ಯಾಂಕ್ ಖಾತೆಗೆ ವರ್ಗಾವಣೆಯಾಗುವುದು– ಇವೆರಡರ ನಡುವೆ ಸಂಬಂಧ ಇದೆಯೇ ಇಲ್ಲವೇ ಎಂಬುದನ್ನು ಅಧ್ಯಯನ ಆಧಾರಿತ ಮಾಹಿತಿಗೆ ಒರೆ ಹಚ್ಚಿ ನೋಡಬೇಕು.

ಉಚಿತವಾಗಿ ಹಣ ನೀಡಿದರೆ ಸರ್ಕಾರಿ ಬೊಕ್ಕಸ ಬರಿದಾಗುತ್ತದೆ; ಯಾರಿಗೋ ಧನ ಸಹಾಯ ಒದಗಿಸಲು ಆದಾಯ ತೆರಿಗೆ ನೀಡುತ್ತಿರುವವರಿಗೇಕೆ ಶಿಕ್ಷೆ; ದುಡಿಯದೆ ಹಣ ಪಡೆಯುವುದು ಯಾವ ನ್ಯಾಯ ಮುಂತಾದ ಟೀಕೆಗಳು ಈ ಯೋಜನೆಯ ವಿರುದ್ಧ ಹರಿದು ಬರುತ್ತಿವೆ. ಆದರೆ ಮಹಿಳೆಯರ ಜೀವನಾನುಭವವನ್ನು ಅಧ್ಯಯನ ಮಾಡಿದಾಗ ಅವರ ಕೈ ಸೇರುವ ಹಣ ಸಾಮಾನ್ಯವಾಗಿ ಕುಟುಂಬದ ಅಗತ್ಯಗಳ ಪೂರೈಕೆಗಾಗಿ ಬಳಸಲ್ಪಡುತ್ತದೆ ಅಥವಾ ಯಾವುದಾದರೂ ಸಣ್ಣ ಆದಾಯ ತರುವಂಥ ಚಟುವಟಿಕೆಗಳಲ್ಲಿ ತೊಡಗಿಸಲ್ಪಡುತ್ತದೆ ಎಂಬುದು ತಿಳಿದು ಬರುತ್ತದೆ. ಮಹಿಳೆಯರ ಬಳಿ ಹಣ ಬಂದಾಗ ಅದು ಎಷ್ಟೇ ಸಣ್ಣ ಮೊತ್ತವಾಗಲೀ ಅದನ್ನು ಉಳಿಸುವ ಪರಿಪಾಠ ಕಂಡು ಬರುತ್ತದೆ. ಇದಕ್ಕೆ ಮುಖ್ಯ ಕಾರಣವೆಂದರೆ ಅವರು ಭವಿಷ್ಯದ ಬಗ್ಗೆ ಚಿಂತಿಸುವುದು ಹೆಚ್ಚು. ಆದ್ದರಿಂದಲೇ ಅವರು ತಮಗೆ ಸಂದಾಯವಾಗುವ ಹಣದಲ್ಲಿ(ಅದು ಅವರಿಗೆ ಯಾವುದೇ ಸರ್ಕಾರಿ ಯೋಜನೆಯ ಮೂಲಕ ದೊರೆಯಲಿ ಅಥವಾ ಅವರ ದುಡಿಮೆಗೆ ಸಂದಾಯವಾಗುವ ವೇತನವಾಗಲಿ) ಒಂದು ಭಾಗವನ್ನಾದರೂ ಉಳಿತಾಯ ಮಾಡುತ್ತಾರೆ ಎನ್ನುವುದಕ್ಕೆ ಅನೇಕ ನಿದರ್ಶನಗಳಿವೆ. ಈ ಹಿನ್ನೆಲೆಯಲ್ಲಿ ಗೃಹಲಕ್ಷ್ಮಿ ಯೋಜನೆಯ ಪರಿಣಾಮಗಳನ್ನು ವಿಶ್ಲೇಷಣೆಗೆ ಒಳಪಡಿಸ ಬೇಕಾಗುತ್ತದೆ.

ಮಹಿಳೆಯರಿಗೆ ಉಚಿತ ಧನ ಸಹಾಯ ನೀಡುವುದರ ಬಗ್ಗೆ ಮತ್ತೊಂದು ಟೀಕೆ ಕೆಲ ಅರ್ಥಶಾಸ್ತ್ರಜ್ಞರು ಮತ್ತು ಕಾನೂನು ತಜ್ಞರಿಂದ ಕೇಳಿ ಬರುತ್ತಿದೆ. ಅದೇನೆಂದರೆ ಇಂಥ ಯೋಜನೆಗಳು ಮಹಿಳೆಯರನ್ನು ಗೃಹಬಂಧಿಗಳನ್ನಾಗಿ ಮಾಡಿ ಅವರನ್ನು ದೇಶದ ದುಡಿಯುವ ವರ್ಗದಿಂದ ಮತ್ತಷ್ಟು ದೂರವಿಡುತ್ತವೆ ಎಂಬುದು. ಅವರು ಮನೆಯಲ್ಲಿ ಮಾಡುವ ಕೆಲಸಕ್ಕೆ ಆರ್ಥಿಕ ಮನ್ನಣೆಯೂ ಇಲ್ಲ, ಸಾಮಾಜಿಕ ಮೌಲ್ಯವೂ ಇಲ್ಲ. ಮಹಿಳೆಯರು ಮನೆಯಲ್ಲಿ ಮಾಡುವ ಎಲ್ಲ ಕೆಲಸಗಳನ್ನೂ ಹಣ ಕೊಟ್ಟು ಮಾಡಿಸಿದರೆ ಅದಕ್ಕೆ ಎಷ್ಟು ಹಣ ಖರ್ಚಾಗುತ್ತದೆ ಎಂಬುದನ್ನು ಮನಗಂಡು, ಸರ್ಕಾರಗಳೇ ಮನೆಗೆಲಸಕ್ಕೆ ನೀಡುವ ವೇತನವನ್ನು ನೀಡುವಂಥ ಯೋಜನೆಗಳನ್ನು ರೂಪಿಸಬೇಕೇ ಹೊರತು ಉಚಿತವಾಗಿ ಹಣ ನೀಡಿ ಏನೂ ಕೆಲಸ ಮಾಡದೆ ಸಾರ್ವಜನಿಕ ಹಣವನ್ನು ಪಡೆಯುತ್ತಿದ್ದಾರೆ ಎಂಬ ವಿಷವರ್ತುಲದಲ್ಲಿ ಅವರನ್ನು ಸಿಲುಕಿಸಬಾರದು ಎಂಬ ಅವರ ವಾದವನ್ನೂ ಗಂಭೀರವಾಗಿ ಪರಿಗಣಿಸಬೇಕು. ಮಹಿಳೆಯರಿಗೆ ಗೃಹಲಕ್ಷ್ಮಿ ಯೋಜನೆಯ ಮೂಲಕ ನೀಡುವ ಹಣವನ್ನು ಅವರ ಸಾಮರ್ಥ್ಯ ಅಭಿವೃದ್ಧಿಗಾಗಿ ಬಳಸಲು ಅನುವು ಮಾಡಿಕೊಡುವಂಥ ವ್ಯವಸ್ಥೆಯಾಗಬೇಕು. ಉದಾಹರಣೆಗೆ ಈ ಬಜೆಟ್‌ನಲ್ಲೇ ನವೋದ್ಯಮಗಳನ್ನು ಉತ್ತೇಜಿಸಲು ನಿಗದಿಯಾಗಿರುವಂಥ ಮೊತ್ತದಲ್ಲಿ ಒಂದು ಭಾಗವನ್ನು, ಸ್ವಂತ ಉದ್ಯಮಗಳನ್ನು ಸ್ಥಾಪಿಸುವ ಅಥವಾ ಈಗಾಗಲೇ ಅವರು ತೊಡಗಿಸಿಕೊಂಡಿರುವ ಸಣ್ಣ ಉದ್ಯಮಗಳ ಗುಣಮಟ್ಟವನ್ನು ಹೆಚ್ಚಿಸಿ ವೃತ್ತಿಪರತೆಯನ್ನು ಬೆಳೆಸಿಕೊಳ್ಳುವುದಕ್ಕೆಂದೇ ಮಹಿಳೆಯರಿಗೆ ಮೀಸಲಿಡುವಂಥ ನಿಯಮಗಳನ್ನು ಜಾರಿಗೆ ತರುವುದರ ಬಗ್ಗೆ ಸರ್ಕಾರ ಆಲೋಚಿಸಬೇಕಾಗಿದೆ.

ಈ ಯೋಜನೆಯ ಪ್ರಯೋಜನಗಳ ಮೌಲ್ಯಮಾಪನ ಮಾಡಲು ಇನ್ನು ಸ್ವಲ್ಪ ಸಮಯ ಬೇಕು. ಅದು ಜಾರಿಗೆ ಬಂದು ಕನಿಷ್ಠ ಒಂದು ವರ್ಷವಾದರೂ ಆದ ಮೇಲೆ ಇಡೀ ರಾಜ್ಯದಲ್ಲಿ ಅದರ ಬಳಕೆಯ ಪರಿಯನ್ನು ಕ್ಷೇತ್ರಾಧಾರಿತ ಅಧ್ಯಯನಗಳಿಗೆ ಒಳಪಡಿಸಿದಾಗ ಮಾತ್ರ ಅದರ ಬಗ್ಗೆ ವಿಮರ್ಶೆ ಮಾಡಲು ಸಾಧ್ಯವಾಗಬಹುದೇನೋ.

ಮೈಸೂರು–ಕೊಡಗು ಲೋಕಸಭಾ ಕ್ಷೇತ್ರ ವ್ಯಾಪ್ತಿಯ ರಾಷ್ಟ್ರೀಯ ಹೆದ್ದಾರಿಯಲ್ಲಿ ಅಭಿವೃದ್ಧಿ ಕಾಮಗಾರಿಗೆ ಅನುಮೋದನೆ ಕೋರಿದ ಸಂಸದರು

ಕೇಂದ್ರದ ಹೆದ್ದಾರಿ ಸಚಿವಾಲಯದ ಕಾರ್ಯದರ್ಶಿಗೆ ಪ್ರತಾಪ ಸಿಂಹ ಮನವಿ ಸಲ್ಲಿಕೆ

ಮೈಸೂರು,ಜು.12(ಪಿಎಂ)– ಮೈಸೂರು–ಕೊಡಗು ಲೋಕಸಭಾ ಕ್ಷೇತ್ರ ವ್ಯಾಪ್ತಿಯ ರಾಷ್ಟ್ರೀಯ ಹೆದ್ದಾರಿಯಲ್ಲಿ ಹಲವು ಅಭಿವೃದ್ಧಿ ಕಾಮಗಾರಿಗಳಿಗೆ 2023–24ನೇ ಸಾಲಿನ ಕ್ರಿಯಾ ಯೋಜನೆಯಡಿ ಸೇರಿಸಿ ಅನುಮೋದನೆ ನೀಡುವಂತೆ ಕೇಂದ್ರ ಸರ್ಕಾರಕ್ಕೆ ಕ್ಷೇತ್ರದ ಸಂಸದ ಪ್ರತಾಪ್ ಸಿಂಹ ಬುಧವಾರ ಮನವಿ ಸಲ್ಲಿಸಿದ್ದಾರೆ.

ಕೇಂದ್ರ ಭೂ ಸಾರಿಗೆ, ಹೆದ್ದಾರಿ ಹಾಗೂ ಸಾರಿಗೆ ಸಚಿವಾಲಯದ ಕಾರ್ಯದರ್ಶಿ ಅನುರಾಗ್ ಜೈನ್ ಅವರನ್ನು ದೆಹಲಿಯಲ್ಲಿ ಭೇಟಿ ಮಾಡಿ ಮನವಿ ಸಲ್ಲಿಸಿದ್ದು, ಇದಕ್ಕೆ ಕಾರ್ಯದರ್ಶಿಗಳು ಸಕರಾತ್ಮಕವಾಗಿ ಸ್ಪಂದಿಸಿದ್ದಾರೆ ಎಂದು ಸಂಸದರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮನವಿ ವಿವರ: ಕರ್ನಾಟಕ ರಾಜ್ಯದ ಪಾರಂಪರಿಕ ನಗರಗಳಲ್ಲಿ ಮೈಸೂರು ಒಂದಾಗಿದೆ. ಮೈಸೂರು ಮತ್ತು ಕೊಡಗು ಜಿಲ್ಲೆಗಳಲ್ಲಿ ಪ್ರವಾಸೋದ್ಯಮ ಕ್ಷೇತ್ರವು ವೇಗವಾಗಿ ಪ್ರಗತಿ ಕಾಣುತ್ತಿದೆ. ಅಲ್ಲದೆ, ಮೈಸೂರು ಅರಮನೆ ನಗರ ಎಂದೇ ಖ್ಯಾತನಾಮಗೊಂಡಿದೆ. ಇಲ್ಲಿಗೆ ವರ್ಷವಿಡಿ ಪ್ರವಾಸಿಗರು ಭೇಟಿ ನೀಡುತ್ತಾರೆ.

ಈ ಎರಡು ಜಿಲ್ಲೆಗಳ ಹೆದ್ದಾರಿಯಲ್ಲಿ ಹುಣಸೂರು, ಬೃಂದಾವನ ಗಾರ್ಡನ್, ಮಂಗಳೂರು ಬಂದರುಗಳು ಇದ್ದು, ಕೊಡಗು ಮತ್ತು ಮೈಸೂರು ಮೂಲಕ ರಾಜಧಾನಿ ಬೆಂಗಳೂರಿಗೆ ಮತ್ತು ಕೇರಳ ರಾಜ್ಯದ ಕಣ್ಣೂರು ವಿಮಾನ ನಿಲ್ದಾಣ, ಮಾನಂದವಾಡಿಗೆ ಸಂಪರ್ಕ ಕಲ್ಪಿಸುತ್ತದೆ. ಇದಲ್ಲದೆ, ವಿಶ್ವವಿಖ್ಯಾತ ಮೈಸೂರು ದಸರಾ ಮಹೋತ್ಸವ, ಮಡಿಕೇರಿ ಮತ್ತು ಮಂಗಳೂರು ದಸರಾ ಪ್ರತಿ ವರ್ಷವೂ ನಡೆಯುತ್ತವೆ. ಈ ಹಿನ್ನೆಲೆಯಲ್ಲಿ ಹೆದ್ದಾರಿಯ ಉದ್ದಕ್ಕೂ ಹೆಚ್ಚಿನ ವಾಹನ ದಟ್ಟಣೆ ಇರುತ್ತದೆ. ಹಾಗಾಗಿ ಅಭಿವೃದ್ಧಿ ಕಾಮಗಾರಿಗಳಿಗೆ ಅನುಮೋದನೆ ನೀಡಬೇಕೆಂದು ಸಂಸದರು ಮನವಿಯಲ್ಲಿ ಕೋರಿದ್ದಾರೆ.




ಕೋರಿರುವ ಕಾಮಗಾರಿಗಳ ವಿವರ: ಮೈಸೂರು ಜಿಲ್ಲೆಯ ಹುಣಸೂರು ತಾಲೂಕಿನಲ್ಲಿ ಲಕ್ಷ್ಮಣ ತೀರ್ಥ ನದಿ ಸೇತುವೆ ಪುನರ್ ನಿರ್ಮಾಣ/ವಿಸ್ತರಣೆ (ಎನ್‌ಹೆಚ್–275, ಅಂದಾಜು ಮೊತ್ತ 95 ಕೋಟಿ ರೂ.), ಮೈಸೂರು ರಿಂಗ್ ರಸ್ತೆಯ (ಎನ್‌ಹೆಚ್–275ಕೆ) ಹೆಚ್.ಡಿ.ದೇವೇಗೌಡ ವೃತ್ತ, ನಂಜನಗೂಡು ಜಂಕ್ಷನ್, ಶ್ರೀರಾಂಪುರ ಜಂಕ್ಷನ್, ಬೋಗಾದಿ ಜಂಕ್ಷನ್ ಮತ್ತು ವಿಜಯನಗರ 4ನೇ ಹಂತದ ಜಂಕ್ಷನ್‌ನಲ್ಲಿ ಗ್ರೇಡ್ ಸಪರೇಟರ್ ನಿರ್ಮಾಣ (ಅಂದಾಜು ಮೊತ್ತ 300 ಕೋಟಿ ರೂ.), 'ಎನ್‌ಹೆಚ್–150ಎ'ನಲ್ಲಿ 594.00 ಕಿ.ಮೀ.ನಿಂದ 606.670 ಕಿ.ಮೀ.ವರೆಗೆ ನಾಲ್ಕು ಪಥವಾಗಿ ವಿಸ್ತರಣೆಗೆ (ಅಂದಾಜು ಮೊತ್ತ 250 ಕೋಟಿ ರೂ.) ಸಂಸದರು ಅನುಮೋದನೆ ಕೋರಿದ್ದಾರೆ.

ಇದಲ್ಲದೆ, 'ಎನ್‌ಹೆಚ್–150ಎ'ನಲ್ಲಿ ರೋಡ್ ಓವರ್ ಬ್ರಿಡ್ಜ್ ನಿರ್ಮಾಣ (ಚಿನ್ನಗುಡಿಹುಂಡಿ ಬಳಿ, ಅಂದಾಜು ಮೊತ್ತ 80 ಕೋಟಿ ರೂ.), ಎನ್‌ಹೆಚ್–275ರಲ್ಲಿ 77 ಕಿ.ಮೀ.ನಿಂದ 125 ಕಿ.ಮೀ.ವರೆಗೆ ತಡೆಗೋಡೆ ನಿರ್ಮಾಣ (ಅಂದಾಜು ಮೊತ್ತ 165 ಕೋಟಿ ರೂ.), ಎನ್‌ಹೆಚ್–275ರಲ್ಲಿ 71.600 ಕಿ.ಮೀ.ನಿಂದ 93.200 ಕಿ.ಮೀ.ವರೆಗೆ ರಸ್ತೆ ನವೀಕರಣ ಕಾಮಗಾರಿ (ಅಂದಾಜು ಮೊತ್ತ 19.40 ಕೋಟಿ ರೂ.), ಎನ್‌ಹೆಚ್–275ರ ಕಿ.ಮೀ. 128.150ರಿಂದ ಕಿ.ಮೀ.130ರಿಂದ 150ರವರೆಗೆ ತಗ್ಗಿರುವ ರಸ್ತೆಯನ್ನು ಎತ್ತರಿಸುವ ಕಾಮಗಾರಿಗೆ (ಅಂದಾಜು ಮೊತ್ತ 7 ಕೋಟಿ ರೂ.) ಅನುಮೋದನೆ ನೀಡುವಂತೆ ಮನವಿ ಮಾಡಿದ್ದಾರೆ.

ಜೊತೆಗೆ ಎನ್‌ಹೆಚ್–275ರ 106.670 ಕಿ.ಮೀ.ನಿಂದ 108 ಕಿ.ಮೀ.ವರೆಗೆ ಬ್ಲ್ಯಾಕ್ ಸ್ಪಾಟ್‌ಗಳ ನಿವಾರಣೆಗೆ ಶಾಶ್ವತ ಪರಿಹಾರ ಕ್ರಮ (ಅಂದಾಜು ಮೊತ್ತ 4 ಕೋಟಿ) ಹಾಗೂ ಎನ್‌ಹೆಚ್–275ರಲ್ಲಿ ಕಿ.ಮೀ.121.906ರಿಂದ ಕಿ.ಮೀ.123.245ವರೆಗೆ ಬ್ಲ್ಯಾಕ್ ಸ್ಪಾಟ್‌ಗಳ ನಿವಾರಣೆಗೆ ಶಾಶ್ವತ ಪರಿಹಾರ ಕ್ರಮ ಕೈಗೊಳ್ಳಲು (ಅಂದಾಜು ಮೊತ್ತ 1 ಕೋಟಿ) ಕ್ರಮ ವಹಿಸಬೇಕೆಂದು ಸಂಸದರು ವಿನಂತಿಸಿದ್ದಾರೆ.

ಪ್ರಧಾನಿ ಮೋದಿ ಇಂದಿನಿಂದ ಫ್ರಾನ್ಸ್, ಯುಎಇ ಪ್ರವಾಸ

ನವದೆಹಲಿ: ಪ್ರಧಾನಿ ನರೇಂದ್ರ ಮೋದಿ ನಾಳೆಯಿಂದ(ಜು.13) ಜು.15ರವರೆಗೆ ಫ್ರಾನ್ಸ್ ಮತ್ತು ಯುನೈಟೆಡ್ ಅರಬ್ ಎಮಿರೇಟ್ಸ್ (UAE) ದೇಶಗಳ ಪ್ರವಾಸ ಕೈಗೊಂಡಿದ್ದಾರೆ.



ಜು.14ರಂದು ಫ್ರಾನ್ಸ್‌ನ ಬಾಸ್ಟಿಲ್ ಡೇ ಪರೇಡ್‌ನಲ್ಲಿ ಮೋದಿ ಗೌರವ ಅತಿಥಿಯಾಗಲಿದ್ದಾರೆ. ಅದರಲ್ಲಿ ಭಾರತೀಯ ಸಶಸ್ತ್ರ ಪಡೆಗಳ 3 ಸೇವೆಗಳು ಭಾಗವಹಿಸಲಿವೆ. ಇದಲ್ಲದೆ, 3 ರಫೇಲ್‌ಗಳು ಭಾಗವಹಿಸುತ್ತಿವೆ. ಜುಲೈ 13–14ರವರೆಗಿನ ಫ್ರಾನ್ಸ್ ಪ್ರವಾಸದ ಸಮಯದಲ್ಲಿ, ಪ್ರಧಾನಿ ಅಧ್ಯಕ್ಷ ಇಮ್ಯಾನುಯೆಲ್ ಮ್ಯಾಕ್ರನ್ ಅವರೊಂದಿಗೆ ಔಪಚಾರಿಕ ಮಾತುಕತೆ ನಡೆಸಲಿದ್ದಾರೆ. ಅಧ್ಯಕ್ಷ ಮ್ಯಾಕ್ರನ್ ಅವರು ಪ್ರಧಾನ ಮಂತ್ರಿಯ ಗೌರವಾರ್ಥವಾಗಿ ರಾಜ್ಯ ಔತಣಕೂಟ ಮತ್ತು ಖಾಸಗಿ ಭೋಜನವನ್ನು ಆಯೋಜಿಸುತ್ತಿದ್ದಾರೆ.

ಪ್ರಧಾನಿ ಮೋದಿ ಅವರು ಫ್ರಾನ್ಸ್ ಪ್ರಧಾನಿ, ಸೆನೆಟ್ ಅಧ್ಯಕ್ಷರನ್ನು ಭೇಟಿಯಾಗಲಿದ್ದಾರೆ. ಅವರು ಫ್ರಾನ್ಸ್‌ನಲ್ಲಿರುವ ಭಾರತೀಯ ವಲಸೆಗಾರರು, ಭಾರತೀಯ ಮತ್ತು ಫ್ರೆಂಚ್ ಕಂಪನಿಗಳ ಸಿಇಒಗಳು ಮತ್ತು ಫ್ರೆಂಚ್ ಪ್ರಮುಖ ವ್ಯಕ್ತಿಗಳೊಂದಿಗೆ ಪ್ರತ್ಯೇಕವಾಗಿ ಸಂವಾದ ನಡೆಸಲಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ

ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

RENT
2 BHK House available for RENT Near Vivekananda Circle
9008905624

ತಕ್ಷಣ ಬೇಕಾಗಿದ್ದಾರೆ
Experienced PHARMA AIDE
(ಔಷಧಿಗಳ ಬಗ್ಗೆ ಅನುಭವವುಳ್ಳ ಸಹಾಯಕರು)
For Medical Shop
Location : Bogadi
9880587586

ಬೇಕಾಗಿದ್ದಾರೆ
ಸೆರಾಮಿಕ್ ಷೋರೂಂನಲ್ಲಿ Accounts ಕೆಲಸಕ್ಕೆ ಅಭ್ಯರ್ಥಿ ಬೇಕಾಗಿದ್ದಾರೆ. Tally ಗೊತ್ತಿರಬೇಕು
ಶೃತಿ ಸೆರಾಮಿಕ್ಸ್
ಸೂರ್ಯ ಬೇಕರಿ ಹತ್ತಿರ, ಹೆಬ್ಬಾಳು, ಮೈಸೂರು–16
9986140030
7022262114

WANTED
- Architects (B.Arch/D.Arch)
- Civil (BE./Dip.)
- Interior Designer

With Min. 1 year experience
Good Experience in Auto CADD & 3D Design
GANESH CONSTRUCTIONS
Hebbal, Mysore
Mob: +91 99162 50327

WANTED
SCIENCE AND ENGLISH TEACHING STAFF for reputed institution
Send your resume through WhatsApp / Message
8971577685
9980631121

CAUVERY ENCLAVE
MUDA APPROVED
SITES FOR SALE
Between Manipal Hospital & Narayana Hrudayalaya Hospital. Measuring 20x30, 30x40 & 40x60.
Loan available from all major Banks.
Call : 89711 19292 / 96112 23444

ಶ್ರೀ ಗೌರಿಶಂಕರ ಟ್ರಾವೆಲ್ಸ್
30–7–2023 (1 ದಿನ): ಘಾಟಿ ಸುಬ್ರಮಣ್ಯ, ಇಶಾ ಫೌಂಡೇಶನ್, ಕೋಟಿಲಿಂಗ.
28–8–2023 (7 ದಿನ): ಅಯೋಧ್ಯೆ, ಪ್ರಯಾಗ್ ರಾಜ್, ಕಾಶಿ, ಗಯಾ, ಬಾಬಾಬೈದ್ಯನಾಥ್ ಇತ್ಯಾದಿ.
21–9–2023 (13 ದಿನ): ಹರಿದ್ವಾರ, ಗಂಗೋತ್ರಿ, ಯಮುನೋತ್ರಿ, ಕೇದಾರ್‌ನಾಥ್, ಬದರಿನಾಥ್, ದೆಹಲಿ ಇತ್ಯಾದಿ.
ವಿಮಾನ / ಬಸ್ / ಊಟ / ರೂಂ.
Mob: 9620002114

ಬೇಕಾಗಿದ್ದಾರೆ
ತೋಟದ ಕೆಲಸಕ್ಕೆ ಫ್ಯಾಮಿಲಿ ಬೇಕಾಗಿದ್ದಾರೆ
ಸ್ಥಳ: ಮಜ್ಜಿಗೆಪುರ, ಶ್ರೀರಂಗಪಟ್ಟಣ
9945322215
9535674047

ಮನೆ ಮಾರಾಟಕ್ಕಿದೆ
ಮೈಸೂರಿನ ವಿದ್ಯಾರಣ್ಯಪುರಂನಲ್ಲಿ ಉತ್ತರ ದಿಕ್ಕಿಗೆ 37x57 ಅಡಿ ಅಳತೆಯ ನಿವೇಶನದಲ್ಲಿ ಕಟ್ಟಿರುವ 2BHK G/7 ಮನೆ ಹಾಗೂ 3BHK ಮಹಡಿ ಮನೆ ಮಾರಾಟಕ್ಕೆ ಇದೆ ಆಸಕ್ತರು ಮಾತ್ರ ಸಂಪರ್ಕಿಸಬಹುದು.
(ಮಧ್ಯವರ್ತಿಗಳಿಗೆ ಅವಕಾಶವಿಲ್ಲ)
9663453314,9066862367

WANTED
MARKETING EXECUTIVE
for the Bodha Digital Academy
Kuvepunagar, Mysore
Call: 99647 23355

ಮಂಟಪ ಮನೆ
ನಿತ್ಯ ಪೂಜೆ ಮಾಡಲು ನಿಮಗೊಂದು ದೇವರ ಮಂಟಪ
ಬೇಕೇ ಬೀಟೆ ಮತ್ತು ಹಲಸು ಮರದಿಂದ ತಯಾರಿಸುತ್ತೇವೆ
ಸಂಪರ್ಕಿಸಿ: ಶ್ರೀನಗರ ಮೈಸೂರು

9448207634
9036742526

WANTED IMMEDIATELY
1. Sales In-Charge
2. Purchase In-Charge
3. Quality Inspector
4. Accounts Executive

REQUIRED CANDIDATES WITH COMPUTER KNOWLEDGE.
Fresher's also apply. mail your CV's to
scm@eshwarfoodandpackaging.com

REQUIRED
HINDI TEACHER
BA, B.Ed
COMPUTER TEACHER
B.Sc, B.Ed / B.Sc
Contact:
9535333467 / 8150964055
Email:
kalabharathiinstitution@gmail.com

WANTED
FRONT DESK / OFFICE ADMIN
Female candidate only
Freshers Preferred
Good Communication skills
98808 28999

WANTED
a) Faculty Part Time / Full Time to teach Java, C++, Python etc,
b) Counsellor female graduate,
c) Civil/Arch/Mech Engineer to teach Auto CAD, Other design Software.
9880908444

ಟೆರೆಸ್ ವಾಟರ್‌ಪ್ರೂಫಿಂಗ್
4 ಲೇಯರ್‌ಗಳ ಕೋಟಿಂಗ್
7 ವರ್ಷಗಳ WARRANTY
HARD & SHINE CHEMICALS
JUST ₹30 /sqft
88174 08204
88174 08203

ಹೋಲ್‌ಸೇಲ್ ದರದಲ್ಲಿ
ಜೀವಂತ ನಾಟಿ ಕೋಳಿ ಕೆ.ಜಿ. ರೂ. 260, ರೂ. 350, ರೂ. 580

ಗೌಡ್ರು ನಾಟಿಕೋಳಿ ಅಂಗಡಿ
ನಂ. 198/1, ಓಟಿಟಿ ಕ್ವಾಟ್ರಸ್ ಮೇನ್ ರೋಡ್, ದೊಡ್ಡಮ್ಮ ತಾಯಿ ಕಲ್ಯಾಣ ಮಂಟಪ ಪಕ್ಕ, ಎನ್.ಆರ್. ಮೊಹಲ್ಲಾ, ಮೈಸೂರು–570 007
9448048576, 9632378020

*** ಆರ್.ಎಸ್ ***
ಕನ್ಸ್‌ಟ್ರಕ್ಷನ್ಸ್ & ಡೆವಲಪರ್ಸ್
"ನಿಮ್ಮ ಕನಸಿನ ಮನೆ ನಮ್ಮ ಹೊಣೆ"
100 ಸಿಮೆಂಟ್ ಬ್ಯಾಗ್ ಉಚಿತ
10 ಚದರಕ್ಕಿಂತ ಹೆಚ್ಚಿನ ಮನೆಯ ನಿರ್ಮಾಣಕ್ಕಾಗಿ ಎಲ್ಲ ಸಾಮಗ್ರಿಗಳನ್ನು ಒಳಗೊಂಡು ಅತ್ಯುತ್ತಮ ಗುಣಮಟ್ಟದೊಂದಿಗೆ ಮನೆಯನ್ನು ವಾಸ್ತು ಪ್ರಕಾರ ನಿರ್ಮಾಣ ಮಾಡಿಕೊಡಲಾಗುವುದು
ಕೂಡಲೇ ಸಂಪರ್ಕಿಸಿ 7022211622

ಮನೆ ಬೇಕಾಗಿದೆ
ಒಂದು ಉತ್ತಮ 30x40 ರ ಮನೆ ಬೇಕಿದೆ.
ಸ್ಥಳ: ವಿವೇಕಾನಂದನಗರ ವೃತ್ತದ ಸಮೀಪ, ಮೈಸೂರು–23
8073589849

WANTED
1) TEACHERS for Pre-School
2. Office Assistant with Computer Knowledge
9448031964
7795301535

TERRACE WATERPROOFING
4 LAYERS OF COATING
7 YEARS WARRANTY
HARD & SHINE CHEMICALS
JUST ₹30 /sqft
88174 08204
88174 08203

WANTED
1. Sales Executive
Minimum 2 Year Experience
Salary 15K (CTC) and Incentives
2. Accountant with Tally ERP 9 and GST (Minimum 2 Years' Experience in auditor office)
Attractive Salary, ESI and EPF
for FMCG Distributor
916460 8888, 9945810626

ತಕ್ಷಣ ಬೇಕಾಗಿದ್ದಾರೆ
ಮೈಸೂರಿನ ಕೂರ್ಗಳ್ಳಿ, ಹೂಟಗಳ್ಳಿ & ಹೆಬ್ಬಾಳು ಕೈಗಾರಿಕ ಪ್ರದೇಶದಲ್ಲಿ ಕೆಲಸ ಮಾಡಲು ಅನುಭವವುಳ್ಳ ಸೆಕ್ಯೂರಿಟಿ ಗಾರ್ಡ್‌ಗಳ ಬೇಕಾಗಿದ್ದಾರೆ.
ವಿದ್ಯಾರ್ಹತೆ : SSLC & ಮೇಲ್ಪಟ್ಟು
ವಯೋಮಿತಿ: 30 ರಿಂದ 50
9844235981
9739199355

ಬರವಣಿಗೆ ಕೆಲಸ
ಮನೆಯಿಂದಲೇ ಫಾರಂ ಭರ್ತಿ ಮಾಡುವ ಉದ್ಯೋಗ ಮಾಡಿ ಪ್ರತಿ 1 ಫಾರಂಗೆ 30 ರೂ.ಗಳನ್ನು ಪಡೆಯಿರಿ.
97318 91409

neem
BOND PLATINUM®
PLY / DOORS @ FACTORY RATES

MANUFACTURER 10 YEARS WARRANTY
9901291267 / 9845426862

ಬೇಕಾಗಿದ್ದಾರೆ
ಹೆಲ್ಪರ್ಸ್‌ಗಳು ಬೇಕಾಗಿದ್ದಾರೆ
ಅನುಭವ ಬೇಕಾಗಿಲ್ಲ
ಜೈಭಾರತ್ ಮಾರ್ಕೆಟಿಂಗ್
ಗೀತಾ ಮಂದಿರ್ ರಸ್ತೆ, ದೊಡ್ಡ ಗುಜರಿ, ಮೈಸೂರು
Call: 0821-4252464

100% TEAK WOOD
FACTORY FINISH DOORS
@ DEPOT RATES

10 YEARS WARRANTY
www.ssbuildmart.com
9901291267
9845426862

ಸಂಪು
ಕ್ಲೀನಿಂಗ್‌ಗಾಗಿ
ಸಂಪರ್ಕಿಸಿ:
8861612486

INDUSTRIAL BUILDING FOR RENT
Near Bharat Cancer Hospital Hebbal Mysore
1200 Sqft RCC Building
800 Sqft AC Sheet
9845033206

FOR SALE
Buy & Sell Site, House, Land
1) 20x30,30x40,40x60 Sites in H D Kote Road and Bogadi Road
2) 30x40 Sites Srinagar attch (JP Nagar)
3) Commercial 25 Guntas Land Narasipura toll Near
4) 50x80 and 30x40 Vijay Nagar
9538690359, 9035990359

ಸಂಪು ಕ್ಲೀನಿಂಗ್
ಸಂಪರ್ಕಿಸಿ:
8431541631

ಉಚಿತ ತರಬೇತಿ
ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:
7406375196, 9880548596

ಬೇಕಾಗಿದ್ದಾರೆ
ಫ್ಲೆಕ್ಸ್ ಬೋರ್ಡ್ಸ್, ಲೈಟಿಂಗ್ & ಎಲ್‌ಇಡಿ ಬೋರ್ಡ್ಸ್ ಕೆಲಸ ಮಾಡುವ ಹುಡುಗರು ಬೇಕಾಗಿದ್ದಾರೆ
ಸಂಬಳ 15–18 ಸಾವಿರ
ದೇವು ಪ್ರಿಂಟ್ ಸೆಲ್ಯೂಷನ್ಸ್
ಅಶೋಕ ರೋಡ್, ಮೈಸೂರು
Call: 0821-4267800

DTCP SITES FOR SALE
DTCP Sites
Rs. 699 per sq.ft.,
Near Jayapura,
H.D. Kote Road, Mysore.
9590491194,9606783264


V-GUARD
V-GUARD GEYSER
BEST OFFER PRIZE
Solar Water Heater SALES & SERVICE
SUNZONE SOLAR SYSTEM
VM Double Road, Kuvempunagar, Mysuru
9845175443

ಬೇಕಾಗಿದ್ದಾರೆ
ಮೈಸೂರಿನ ಸರಸ್ವತಿಪುರಂನಲ್ಲಿ ಹೊಸದಾಗಿ ಪ್ರಾರಂಭವಾಗಿರುವ ಸಸ್ಯಹಾರಿ ಹೋಟೆಲ್‌ಗೆ ಈ ಕೆಳಕಂಡ ಕೆಲಸಗಾರರು ಬೇಕಾಗಿದ್ದಾರೆ.
ಸೌತ್ ಇಂಡಿಯನ್ ಕುಕ್–2, ಸೌತ್ ಇಂಡಿಯನ್ ಅಸಿಸ್ಟೆಂಟ್–2, ತಂದೂರಿ ಮೇಕರ್–2, ಕ್ಯಾಷಿಯರ್–2, ಟೇಬಲ್ ಕ್ಲೀನರ್–2, ಪಾತ್ರೆ ವಾಶಿಂಗ್–2,
7899929233

ಸುವರ್ಣಾವಕಾಶ
ನಿವೃತ್ತಿ, ಸ್ವಯಂ ನಿವೃತ್ತಿ, ಗೃಹಿಣಿಯರು, ಎಸ್.ಎಸ್.ಎಲ್.ಸಿ ಪಾಸಾದ ನಿರುದ್ಯೋಗಿಗಳು ಹಾಗೂ ಸ್ವಯಂ ಉದ್ಯಮದಾರರಿಗೆ ಪ್ರಖ್ಯಾತ ಬ್ಯಾಂಕ್ ಸಮೂಹದಿಂದ PART TIME / FULL TIME ಕೆಲಸಕ್ಕೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ.
1) Fixed Salary, PF, ESI
2) Age : Above 30 Years
9900596388,9008799156

ARAS HOMES PVT LTD
Trusted Mark
• Civil Engineers • Builders

9538003006
4 BHK House From 88 Lakhs with Interiors
- Concrete Road
- Underground Drainage
- Underground Electricity
- Attached to Highway
- Near Infosys, L&T
- Gated Community

• 9538003006 • 0821-4525966
• www.arashomes.net • arashomes27@gmail.com
• #37/B, 1st Floor, Nivedhitha Nagar, MKU Road, Mysore-22

ಪ್ರಸಿದ್ಧ ಮಹಾಮಾಂತ್ರಿಕ
ಶ್ರೀ ಜ್ಯೋತಿಷ್ಯರು
ಪಂ॥ ಶ್ರೀ ಶ್ರೀ ಎಸ್ ಕುಮಾರರಾಜು
9902239655
ಇವರು ಸತತವಾಗಿ 12 ವರ್ಷ ಕೇರಳ, ಬಂಗಾಳಿ, ಕೊಳ್ಳೇಗಾಲದ ಅಗೋಚರ ಮಾಂತ್ರಿಕ ವಿದ್ಯೆಯನ್ನು ಸಿದ್ಧಿ ಮಾಡಿಕೊಂಡಿರುವ ದಿವ್ಯಾಜ್ಞಾನ ಇವರು ನಿಮ್ಮ ಘೋರ, ನಿಗೂಢ, ಗುಪ್ತ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಮಾಡಿಕೊಡುತ್ತಾರೆ. ನಿಮ್ಮ ಗುಪ್ತ ಸಮಸ್ಯೆಗಳನ್ನು ಗುಟ್ಟಾಗಿ ಇಡಲಾಗುವುದು.
ರೂಂ. ನಂ.9, 2ನೇ ಮಹಡಿ, ಸಿಟಿ ಬಸ್ ಸ್ಟ್ಯಾಂಡ್ ಬಿಲ್ಡಿಂಗ್, ಕೆ.ಆರ್.ಸರ್ಕಲ್, ಮೈಸೂರು

ಇಂದೇ ಸಂಪರ್ಕಿಸಿ
ಬೆಂಗಳೂರು ಹಾಗೂ ಮೈಸೂರು ಜಿಲ್ಲೆಗಳಲ್ಲಿ ಹೊಸದಾಗಿ ತೆರೆದಿರುವ ಕಂಪನಿಯೊಂದಕ್ಕೆ 156 ವಿವಿಧ ಹುದ್ದೆಗಳಿಗೆ SSLC, PUC, ITI, Degree ಆಗಿರುವ ಉತ್ಸಾಹಿ ಯುವಕ /ಯುವತಿಯರು ಬೇಕಾಗಿದ್ದಾರೆ. ಉಚಿತ ವಸತಿಊಟದೊಂದಿಗೆ 14,000–30,000/-(ESI+PF+OT)
6364103418,6366141586

100% Job
ಮೈಸೂರಿನ ಪ್ರಸಿದ್ಧ ಕಂಪನಿಗಳಿಗೆ ಶೋರೂಂಗಳಿಗೆ ಮತ್ತು ಆಫೀಸ್‌ಗಳಿಗೆ ಕೆಲಸ ಮಾಡಲು ಯುವಕ/ಯುವತಿಯರು ಬೇಕಾಗಿದ್ದಾರೆ Any Qualification, (7th, 10th, PUC, ITI, Any Degree Pass /Fail) ಆದವರಿಗೆ ಅರ್ಹತೆಗೆ ತಕ್ಕಂತೆ ಕೆಲಸ ಸಂಬಳ 15,000 ರಿಂದ 39,000/- (ESI+PF+OT) ಸೇರಿ. ಷರತ್ತು ಅನ್ವಯ
9008603466,9035143190

SAI NALANDA CENTRAL SCHOOL
K.R. NAGAR - 571602
WANTED TEACHER
1. B.A B.Sc/M.A M.Sc, with B.Ed. (Social Science, English & Hindi)
2. BCA, MCA/M.Sc in Computer & NTT.
FREE ACCOMMODATION
Contact No: 87220 73456 & 87220 93456
Email: nalandakrn@gmail.com Web: www.sainalanda.com

SITE FOR SALE
30/40 Site for Sale Trendz Apartment near (Gaddige Road)
8217042841

PART TIME JOBS
ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000 ರಿಂದ 20,000 ಸಂಪಾದಿಸಿ.
(ಕೊರಿಯರ್ ಸೌಲಭ್ಯವಿದೆ)
87490 98879

ACCOUNTANT ಬೇಕಾಗಿದ್ದಾರೆ
ಬಿಲ್ಲಿಂಗ್ Tally ಹಾಗೂ Microsoft Excel ತಿಳಿದಿರುವವರು ತಮ್ಮ ವಿವರಗಳನ್ನು ಕೆಳಗಿನ ನಂಬರಿಗೆ ಕಳುಹಿಸಬೇಕಾಗಿ ವಿನಂತಿ
9902902530
Sreenivasan Image Products
(Sapna Book House IInd Left)
Shivarampet, Mysore

WANTED
Service Engineer
B.E /Diploma / ITI / Mechanical
Kent RO Water purifier Authorised Service Center/Home Appliances
Telecaller / Office Work -Female
9900237315
9845963421

ಸುವರ್ಣ ಯಾತ್ರ
1) ಮಧ್ಯಪ್ರದೇಶ್ ಪ್ರವಾಸ 2 ಜ್ಯೋತಿರ್ಲಿಂಗ ಸೇರಿ 4 ದಿನಗಳು 12/08/2023
2) ಕಾಶಿ ವಿಶ್ವನಾಥ ಹಾಗೂ ಬೈದ್ಯನಾಥ ಪ್ರವಾಸ 2 ಜ್ಯೋತಿರ್ಲಿಂಗ ಸೇರಿ 7 ದಿನಗಳು 18/08/23, 3) ಪುರಿ ಭುವನೇಶ್ವರಿ ಶಕ್ತಿಪೀಠ 4 ದಿನಗಳು 18/08/23
9008381022
9480843945

ಕಳೆದಿದೆ
ಜಿ.ರಾಮ್‌ದಾಸ್ ಅವರಿಗೆ ಸೇರಿದ ನಂ. 16,16ನೇ ಕ್ರಾಸ್, EWS ಅರವಿಂದನಗರ, ಮೈಸೂರು ಈ ಸ್ವತ್ತಿನ ಮುಡಾದಿಂದ ಸಯ್ಯದ್ ರಿಯಾಜ್ ಅವರಿಗೆ ಮಂಜೂರಾಗಿದ್ದ ಮೂಲ ಸ್ವಾಧೀನ ಪತ್ರ, ಮನೆ ಕಂದಾಯ ಪತ್ರ, ಮಂಜೂರಾತಿ ಪತ್ರ ಕಳೆದಿದ್ದು ಸಿಕ್ಕವರು ಸಂಪರ್ಕಿಸಿ:
8123788749

WORK @ HOME
WORK FROM HOME ಕಂಪನಿಗಳ ಬಗ್ಗೆ ಸಂಪೂರ್ಣ ಮಾಹಿತಿ ನೀಡುತ್ತೇವೆ ಕರೆ ಮಾಡಿ ಸರಿಯಾದ WORK FROM HOME ಆಯ್ಕೆಮಾಡಿ
8867973998

Wanted Immediately
Accounts Executive (Qualification B.Com / BBM). Male Exp: 2 to 3 years.
Stores Executive (Qualification Any Degree). Male Exp: Min. 1 to 2 years.
Electrician Male Exp: Min. 2 to 3 Years.
Address: The Akshayapatra Foundation, Mysore, No. 31, 18th Cross, Jayanagar, Mysore.
Mob: 9964451366

AFFIDAVIT
I, Smt. Latha Murthy C.K, residing at No. 55, Akshaya', 1st Cross, 3rd Main, Chamundi Nagar, Girinagar Extension, Banashankari 3rd Stage, Bengaluru-560085. I declare that my correct name is Latha Murthy C.K. In my Aadhaar Card No. 7796 4635 1432 and in my Pan No. AEAPL6197B and in all my records my name mentioned as Latha Murthy C.K. I am holding shares in Kanyakaparameshwari Co-Oerative Bank Ltd., and my name in shares and in Bank records appears as R. Latha. I declare in front of Notary C.R. Seetharam that Latha Murthy C.K. and R. Latha refers to me and pertains to me only.
Sd/- Latha Murthy C.K.

3 ಬೆಡ್‌ರೂಂ ಹೊಸ ಮನೆ ಮಾರಾಟಕ್ಕೆ ಇದೆ
20x30 ದಟ್ಟಗಳ್ಳಿ, ಮೈಸೂರು, ತ್ರಿವೇಣಿ ಸೂಪರ್ ಮಾರ್ಕೆಟ್ ಹತ್ತಿರ. Price - 79 Lakhs
ಮಾಲೀಕರು ಸಂಪರ್ಕಿಸಿ:
6361295132

ಸೈಟುಗಳು ಮಾರಾಟಕ್ಕಿವೆ
ಮುಡಾ ಅಪ್ರೂವ್ಡ್
30x40 - Corner
40x60 W/F, 40x60 S/F
40x60 Corner, 58x60 - Corner
ಯೂನಿವರ್ಸಿಟಿ ಲೇಔಟ್ ಎದುರು, ರಿಂಗ್ ರೋಡ್ ಹತ್ತಿರ, 30x40 E/F ವರಕೂಡ್ ಹತ್ತಿರ
9900372792

ಬೇಕಾಗಿದ್ದಾರೆ
ಸೆಕ್ಯೂರಿಟಿ ಗಾರ್ಡ್‌ಗಳು –10 ಮಂದಿ
1) ಬಸ್ತಿಪುರ, ಕೂರ್ಗಳ್ಳಿ ಏರಿಯಾ
2) ವಿಜಯನಗರ 4ನೇ ಹಂತ
3) ಹೆಬ್ಬಾಳು ಇಂಡಸ್ಟ್ರಿಯಲ್ ಏರಿಯಾ
4) ಚಾಮರಾಜನಗರ
9686422400
9242406261

ಖರೀದಿ ಮಾಡಲಾಗುವುದು
ನಿಮ್ಮ ಹಳೆಯ ವಾಹನ ಹಳೆಯ ವಸ್ತುಗಳು ಹಳೆಯ ಪೀಠೋಪಕರಣಗಳನ್ನು ಖರೀದಿ ಮಾಡಲಾಗುವುದು.
8277245949

ಬೇಕಾಗಿದ್ದಾರೆ
ಅಡುಗೆ ಹಾಗೂ ಮನೆ ಕೆಲಸ ಮಾಡುವವರು ಬೇಕಾಗಿದ್ದಾರೆ. ಮನೆಯಲ್ಲಿಯೆ ಉಳಿದುಕೊಳ್ಳುವವರಿಗೆ ಮೊದಲ ಆದ್ಯತೆ ಹಾಗೂ ಕೆಲಸ ಮಾಡಿ ಹೋಗುವವರಿಗೂ ಅವಕಾಶ ವಿರುತ್ತದೆ. ಉತ್ತಮ ಸಂಬಳ ದೊರೆಯುತ್ತದೆ. ಡಾ. ರಾಜಕುಮಾರ್ ರಸ್ತೆ, ಜೆ.ಎಸ್.ಎಸ್.ನಗರ, ಮೈಸೂರು
9036709090

ಬೇಕಾಗಿದ್ದಾರೆ
ಬೆಂಗಳೂರು ಜೆ.ಪಿ. ನಗರ ಮಾಂಸಾಹಾರಿ ಹೋಟೆಲಿಗೆ ಅಡುಗೆ ಭಟ್ಟರು, ಕೆಲಸದವರು ಬೇಕಾಗಿದ್ದಾರೆ. ವಸತಿ ಮತ್ತು ಆಕರ್ಷಕ ಸಂಬಳ.
Mob: 9880059793

Document Lost
S.R. Saraswathi, No. LIG 313, 4th Cross, 3rd Stage, Hebbal, Subramanya Nagara, Mysuru-570 016, I lost my site registration document assessment No. 79/2, Katha No. 79/2/07, Site No. 07. Finders please contact:
Mob: 9964023789

ಮನೆಯಿಂದಲೇ ಕೆಲಸ
ಪಾರ್ಟ್ ಟೈಂ/ಫುಲ್ ಟೈಂ ಕನ್ನಡ, ಇಂಗ್ಲೀಷ್ ಬರವಣಿಗೆ ಮೊಬೈಲ್ ಟೈಪಿಂಗ್ ಹಾಗೂ ಮೆಹಂದಿ ಪ್ಯಾಕಿಂಗ್ ಕೆಲಸ ಗಳಿಸಿ 18000/– ರಿಂದ 36000/–
6360472212

ಬೇಕಾಗಿದ್ದಾರೆ
ಪ್ರತಿಷ್ಠಿತ ಸಂಸ್ಥೆಗೆ ಟೆಲಿಕಾಲಿಂಗ್ ಕೆಲಸಕ್ಕೆ ಬೇಕಾಗಿದ್ದಾರೆ. ವೇತನ : 8000 ದಿಂದ 15000ರವರೆಗೆ, ವಯಸು : 18 ರಿಂದ 35 ವರ್ಷದ ಒಳಗೆ, ಅನುಭವ: ಉತ್ತಮ ಸಂವಹ ಕೌಶಲ್ಯ, ಮೊದಲು ಬಂದವರಿಗೆ ಆದ್ಯತೆ
6361278088,9663514277

ಮನೆ ಬಾಡಿಗೆಗೆ ಇದೆ
ಮೊದಲನೆ ಮಹಡಿ (ಸಸ್ಯಹಾರಿಗಳಿಗೆ) 2BHK ರಾಮಸ್ವಾಮಿ ಸರ್ಕಲ್ ಹತ್ತಿರ, ಮೈಸೂರು
9480442071

CHANGE OF NAME
I, PAVITHRA S, R/a # 60/A, Railway Layout, KRS Main Road, Yadavagiri, Mysuru-20, have changed my name as M.S. JAYALAKSHMI my own free will and desire infront of Notary C.R.Seetharam on 11/7/2023 at Mysuru.
Sd/-M.S. Jayalakshmi

ಮೈಸೂರು ಮ್ಯಾರೇಜ್ ಬ್ಯೂರೋ
ಎಲ್ಲಾ ಜಾತಿಯ ವಧು ವರರು, ವಿಧುರರು, ವಿಧವೆಯರು, ವಿಚ್ಛೇದಿತರು ನೇರ ಸಂಪರ್ಕಿಸಿ. ಮದುವೆ ವಿಳಂಬವಾದಲ್ಲಿ ಪರಿಹಾರ ಶತಸಿದ್ಧ.
ಡಾ. ಗುರೂಜಿ
9448229184
7899625268

ಮಾಂತ್ರಿಕ ಕೇರಳ ಶ್ರೀ ಭಗವತಿ ಜ್ಯೋತಿಷ್ಯರು
ಶ್ರೀ ಎಸ್.ಎಸ್.ಪ್ರಸಾದ್ ಪೊದುವಾಳ್
ಮೊ.: 9731839596
ಇವರು ಕುಟ್ಟಿಚೇತನ್ ರುದ್ರಿಮಾರ್ತಾಂಡ ದೇವಿ ಭಗವತಿ ಮಳಯಾಲಿ ಮಾಂತ್ರಿಕ ಶಕ್ತಿಯಿಂದ ಸ್ತ್ರೀ ಪುರುಷ, ಪ್ರೇಮ, ದಾಂಪತ್ಯ ಸಮಸ್ಯೆ, ಸಂತಾನ, ದುಷ್ಟಶಕ್ತಿ, ಶತ್ರುಭಾಧೇ, ವ್ಯಾಪಾರ, ಅತ್ತೆ ಸೊಸೆ ಕಿರಿಕಿರಿ, ಸಾಲಭಾಧೇ, ಆರೋಗ್ಯ, ಮಾನಸಿಕ ಚಿಂತೆ, ನಿಮ್ಮ ಯಾವುದೇ ಗುಪ್ತ ಸಮಸ್ಯೆಗಳಿಗೆ ತಕ್ಷಣದಲ್ಲಿ ಪರಿಹಾರ ಶತಸಿದ್ಧ. ಖಾಯಂ ಮನೆ ವಿಳಾಸ:– ಮನೆ ನಂ.68, ಸತ್ಯ ಮಾರ್ಗ ಗೀತಾ ಸ್ಕೂಲ್ ಹಿಂಭಾಗ, ಹೊಸ ಡಿ.ಸಿ ಆಫೀಸ್ ಎದುರು, ಸಿದ್ದಾರ್ಥನಗರ, ಮೈಸೂರು.

ಟಿವಿ ರಿಪೇರಿ
ಎಲ್‌ಸಿಡಿ, ಎಲ್‌ಇಡಿ ಟಿವಿ
Service at your doorstep.
Mob: 9880066886

ಬೇಕಾಗಿದ್ದಾರೆ
ಕೌಂಟರ್ ಮತ್ತು (Supply) ಸಪ್ಲೈ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ. ಅಕ್ಬರ್ ರೋಡ್ ಮಂಡಿ ಮೊಹಲ್ಲಾ, ಮೈಸೂರು
9036890169
8618959466

JANATHA TRUST
Basic to Advanced Beautician Class
1 Day Bridal Makeup
Demo at 99/-
9353394878

ಬೇಕಾಗಿದ್ದಾರೆ
ಮೈಸೂರಿನ ಮೇಟಗಳ್ಳಿ ಇಂಡಸ್ಟ್ರಿಯಲ್ ಏರಿಯಾದಲ್ಲಿ ಕೆಲಸ ನಿರ್ವಹಿಸಲು ಪುರುಷರು ವಿದ್ಯಾವಂತ ಹಾಗೂ ಅನುಭವವಿರುವ 40 ವರ್ಷದೊಳಗಿನವರು ಸೆಕ್ಯೂರಿಟಿ ಗಾರ್ಡ್ ಬೇಕಾಗಿದ್ದಾರೆ. ಒಳ್ಳೆಯ ವೇತನದೊಂದಿಗೆ ಇ.ಎಸ್.ಐ, ಪಿ.ಎಫ್ ಸೌಲಭ್ಯವಿರುತ್ತದೆ. ಹಾಗೂ ಹೆಲ್ಪರ್ ಕೆಲಸ ನಿರ್ವಹಿಸಲು ವಿದ್ಯಾರಣ್ಯಪುರಂನಲ್ಲಿ ಸಂಪರ್ಕಿಸಿ
9731976148
8050958451

ಬೇಕಾಗಿದ್ದಾರೆ
ಕರ್ನಾಟಕದಾದ್ಯಂತ ಪ್ರಸಿದ್ಧ MNC ಕಂಪನಿಗಳಿಗೆ, ಕಂಪನಿ ಕೆಲಸಕ್ಕೆ, ಆಫೀಸ್ ಕೆಲಸಕ್ಕೆ ಮತ್ತು ವರ್ಕ್ ಪ್ರಮ್ ಹೋಂ ಕೆಲಸಕ್ಕೆ ತಕ್ಷಣ ಯುವಕ, ಯುವತಿಯರು, ಬೇಕಾಗಿದ್ದಾರೆ. ಯಾವುದೇ ಎಜುಕೇಶನ್ ಯಾವುದೇ Age ಲಿಮಿಟ್ ಇಲ್ಲ. Salary 18000 to 38000 ಇರುತ್ತದೆ. ಹೆಚ್ಚಿನ ಮಾಹಿತಿಗಾಗಿ HR Madam
7619390846,8792369835

ನಿವೇಶನ ಬೇಕಾಗಿದೆ
30x40 ಅಳತೆಯುಳ್ಳ ಖಾಲಿ ಪೂರ್ವ/ಉತ್ತರ ದಿಕ್ಕಿನ ವಿಜಯ ನಗರದ 2ನೇ, 4ನೇ ಹಂತದ ಖಾಲಿ ನಿವೇಶನ ನೇರ ನೊಂದಾವಣಿಗೆ ಬೇಕಾಗಿದೆ. ನಿವೇಶನ
9448773746
8553122884

ಬೇಕಾಗಿದ್ದಾರೆ
ಹೂಟಗಳ್ಳಿ ಇಂಡಸ್ಟ್ರಿಯಲ್ ಏರಿಯಾದಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ.
ವಯೋಮಿತಿ (18–30) ಒಳಗೆ.
ವಿದ್ಯಾರ್ಹತೆ: SSLC & ITI
7019380847, 7090309148

TELECALLERS
Male / Female
FIELD EXECUTIVES
Fresher / Experienced required for BANK COLLECTIONS.
Contact:
9066675785, 7022328169
Location: Near Sharadadevi Nagar Circle, New Kantharaj Urs Road, Mysore-570 022

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

ಕೊಳ್ಳೇಗಾಲದ ಜ್ಯೋತಿಷ್ಯರು
ಪಂ. ಎಸ್. ಕುಮಾರಸ್ವಾಮಿ (ಮೋಡಿ ಮಾಂತ್ರಿಕರು)
MOB: 9880583804
ಇವರು ಕೊಳ್ಳೇಗಾಲದ ಚೌಡಿ, ಭೂತರಾಯ ಅಘೋಚರ ಶಕ್ತಿಯಿಂದ ಸ್ತ್ರೀ ಪುರುಷ ಪ್ರೇಮ, ದಾಂಪತ್ಯ ಸಮಸ್ಯೆ, ಶತ್ರು ದೋಷ, ಸಾಲ ಬಾಧೆ, ಯಾವುದೇ ಸಮಸ್ಯೆಗಳಿಗೆ ಮೋಡಿ ಮಾಂತ್ರಿಕ ಶಕ್ತಿಯಿಂದ ಚೌಡಿ ಮತ್ತು ಭೂತರಾಯನ ಪ್ರಯೋಗದಿಂದ ಎರಡೇ ದಿನದಲ್ಲಿ ಪರಿಹಾರ ಮಾಡಿಕೊಡುತ್ತಾರೆ.
ಖಾಯಂ ವಿಳಾಸ: ಎಟಿಎಂ ಪಕ್ಕ, ಟಿಕೆಟ್ ಬುಕ್ಕಿಂಗ್ ಕೌಂಟರ್ ಹತ್ತಿರ (ರಿಲಾಯನ್ಸ್ ಮಾಲ್) (ಕೆ.ಎಸ್.ಆರ್.ಟಿ.ಸಿ) ಸಬರ್ಬ್ ಬಸ್ ಸ್ಟ್ಯಾಂಡ್, ಮೈಸೂರು–1

ಕೇರಳ ಕೊಳ್ಳೇಗಾಲದ ಜ್ಯೋತಿಷ್ಯರು
INDIAN FAMOUS ASTROLOGER
Mob: 9036984793
ಪಂಡಿತ್: ಕೆ.ಎಸ್. ಪಣಿಕ್ಕರ್ (ಕೇರಳ)
ಜ್ಯೋತಿಷ್ಯ ವಿದ್ವಾನ್ ಶ್ರೀ ಶ್ರೀ ಎಸ್ ಕುಮಾರ್, (ಕೊಳ್ಳೇಗಾಲ)
ಇವರು ಕೇರಳದ ಕುಟ್ಟಿಚೇತನ್ ಕೊಳ್ಳೇಗಾಲದ ಕುಳ್ಳಚೌಡಿ ಅಘೋಚರ ಶಕ್ತಿಯಿಂದ, ಸ್ತ್ರೀ ಪುರುಷ, ಪ್ರೇಮ, ದಾಂಪತ್ಯ ಸಮಸ್ಯೆ, ಶತ್ರುದೋಷ, ಇನ್ನೂ ಯಾವುದೇ ನಿಮ್ಮ ಗುಪ್ತ ಸಮಸ್ಯೆಗಳಿಗೆ ಸ್ಥಳದಲ್ಲಿಯೇ. ಪರಿಹಾರ ತಿಳಿಸುತ್ತಾರೆ.
ಖಾಯಂ ವಿಳಾಸ: ಪಡುವಾರಹಳ್ಳಿ ಸಿಗ್ನಲ್, ಭೂದೇವಿ ಫಾರ್ಮ್ ಎದುರು, ವಿನೋಬ ರಸ್ತೆ, ಮೈಸೂರು–570006

ಬೇಕಾಗಿದ್ದಾರೆ
Accountant ಕೆಲಸಕ್ಕೆ ಹುಡುಗಿಯರು ಬೇಕಾಗಿದ್ದಾರೆ
ಸಂಬಳ 10000-12000/-
Ph.9535112233
ಶಿವರಾಂಪೇಟೆ, ಮೈಸೂರು

ಮೈಸೂರು ಮಿತ್ರ
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಮಂಡ್ಯದ ಕಬ್ಬು, ಭತ್ತ ಬೆಳೆಗಳ ರಕ್ಷಣೆಗಾಗಿ

ನಾಲೆಗಳಿಗೆ ನೀರು ಹರಿಸಲು ರೈತಸಂಘ ಆಗ್ರಹ



ಪಾಂಡವಪುರ ಪಟ್ಟಣದಲ್ಲಿ ರೈತಸಂಘದ ಜಿಲ್ಲಾಧ್ಯಕ್ಷ ಎ.ಎಲ್.ಕೆಂಪೂಗೌಡ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

ಪಾಂಡವಪುರ, ಜು.12– ಜಿಲ್ಲೆಯಲ್ಲಿ ಕಬ್ಬು, ಭತ್ತ, ರೇಷ್ಮೆ ಹಾಗೂ ತೋಟಗಾರಿಕೆ ಬೆಳೆ ರಕ್ಷಣೆಗಾಗಿ ಜಿಲ್ಲೆಯ ಎಲ್ಲಾ ನಾಲೆಗಳಿಗೂ ಕೆಆರ್‌ಎಸ್‌ನಿಂದ ನೀರು ಹರಿಸಬೇಕು ಎಂದು ರೈತಸಂಘದ ಜಿಲ್ಲಾಧ್ಯಕ್ಷ ಎ.ಎಲ್.ಕೆಂಪೂಗೌಡ ಆಗ್ರಹಿಸಿದರು.

ಪಟ್ಟಣದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಜಿಲ್ಲೆಯಲ್ಲಿ ವಾಡಿಕೆಗಿಂತೆ ಶೇ.36ರಷ್ಟು ಮಳೆ ಕೊರತೆಯಾಗಿದೆ. ಜಿಲ್ಲೆಯಲ್ಲಿ ಕಬ್ಬು, ಭತ್ತ, ರೇಷ್ಮೆ, ವಿವಿಧ ತೋಟಗಾರಿಕೆ ಬೆಳೆ ಬೆಳೆದಿದ್ದಾರೆ. ಸುಮಾರು 45 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಕಬ್ಬು ಬೆಳೆಯಲಾಗಿದ್ದು ಇದರ ರಕ್ಷಣೆಗಾಗಿ ವಿಸಿ, ಸಿಡಿಎಸ್ ಸೇರಿದಂತೆ ಜಿಲ್ಲೆಯ ಎಲ್ಲಾ ನಾಲೆಗಳಿಗೂ ನಿಂತಿರುವ ಬೆಳೆ ರಕ್ಷಣೆಗಾಗಿ ಒಂದು ಕಟ್ಟು ನೀರು ಹರಿಸಬೇಕು. ನೀರಾವರಿ ಮಂತ್ರಿಗಳು, ಉಸ್ತುವಾರಿ ಮಂತ್ರಿ ಹಾಗೂ ಜಿಲ್ಲೆಯ ಎಲ್ಲಾ ಶಾಸಕರು ಐಸಿಸಿ ಸಭೆ ನಡೆಸಿ ನಾಲೆಗೆ ನೀರು ಹರಿಸಲು ಕ್ರಮ ವಹಿಸಬೇಕು ಎಂದು ಒತ್ತಾಯಿಸಿದರು.

ಕಬ್ಬು ಬೆಳೆಗೆ ಸರಕಾರ ನೀಡುವ ಎಸ್‌ಎಪಿ(ರಾಜ್ಯ ಪ್ರೋತ್ಸಾಹ ಧನ) ಬೆಂಬಲ ಬೆಲೆಯನ್ನು ಘೋಷಣೆ ಮಾಡಿ 8 ವರ್ಷಗಳು ಕಳೆದಿವೆ. ಹಿಂದಿನ ಸರಕಾರಗಳು ಎಸ್‌ಎಪಿ ಬೆಂಬಲ ಬೆಲೆಯನ್ನು ಘೋಷಣೆ ಮಾಡಿಲ್ಲ. ಮಂಡ್ಯದಲ್ಲಿ ರೈತ ಸಂಘ 109 ದಿನಗಳ ಕಾಲ ಅದಕ್ಕಾಗಿ ಪ್ರತಿಭಟನೆಯನ್ನು ಸಹ ನಡೆಸಿದೆ. ಹಾಗಾಗಿ ಸಿಎಂ ಸಿದ್ದರಾಮಯ್ಯ ಅವರು ವಿಧಾನಸಭೆ ಅಧಿವೇಶನ ಮುಗಿಯುವಷ್ಟರಲ್ಲಿ ಕಬ್ಬು ಬೆಳೆಗೆ ಎಸ್‌ಎಪಿ ಬೆಂಬಲ ಬೆಲೆ ಘೋಷಣೆ ಮಾಡುವ ಮೂಲಕ ರೈತರನ್ನು ರಕ್ಷಣೆ ಮಾಡಬೇಕು. ಇಲ್ಲವಾದರೆ ರೈತ ಸಮುದಾಯ ಸಿದ್ದರಾಮಯ್ಯ ಅವರ ವಿರೋಧಿಸಲಿದ್ದಾರೆ ಎಂದು ಎಚ್ಚರಿಕೆ ನೀಡಿದರು.

ಪಿಎಸ್‌ಎಸ್‌ಕೆ ಕಾರ್ಖಾನೆಯನ್ನು ನಿರಾಣಿ ಶುಗರ್ಸ್‌ನವರು ಇದೀಗ ರಿಜಿಸ್ಟರ್ ಮಾಡಿಸಿಕೊಂಡು 26 ಕೋಟಿ ಹಣ ಪಾವತಿಸಿದ್ದಾರೆ. ಕಾರ್ಖಾನೆಯಿಂದ ರೈತರು ಹಾಗೂ ಕಾರ್ಮಿಕರಿಗೆ 6.80 ಕೋಟಿ ಹಣ ಬರಬೇಕಿದೆ. ಮೊದಲು ಇದನ್ನು ಪಾವತಿಸಿ ಬಳಿಕ ಉಳಿಕೆ ಹಣವನ್ನು ಕಾರ್ಖಾನೆ ಸಾಲ ತೀರಿಸಿಕೊಳ್ಳಲು ಬಳಕೆ ಮಾಡಬೇಕು. ಜತೆಗೆ ರಾಜ್ಯ ಸರಕಾರ ಕಾರ್ಖಾನೆಯ ಆಸ್ತಿ ರಕ್ಷಣೆಗಾಗಿ ಷೇರುದಾರರ ಕಮಿಟಿ ರಚಿಸಬೇಕು. ಕಾರ್ಖಾನೆಯಲ್ಲಿ ಯಾವುದೇ ಬಿಡಿಭಾಗಗಳನ್ನು ಬದಲಾವಣೆ ಮಾಡಿದ ವೇಳೆ ಹೊಸ ಬಿಡಿ ಭಾಗಗಳನ್ನು ಹಾಕಬೇಕು ಎಂಬುದಾಗಿ ಕಾರ್ಖಾನೆಯ ಅಗ್ರಿಮೆಂಟ್‌ನಲ್ಲಿ ಉಲ್ಲೇಖಿಸಲಾಗಿದೆ. ಆದರೆ, ಕಾರ್ಖಾನೆಯವರು ಬಿಡಿಭಾಗಗಳನ್ನು ಬದಲಾಯಿಸಿ ಅಲ್ಲಿಗೆ ದ್ವಿತೀಯ ದರ್ಜೆ ಬಿಡಿಭಾಗ ಅಳವಡಿಕೆ ಮಾಡುತ್ತಿದ್ದಾರೆ ಎನ್ನುವುದು ನಮ್ಮ ಗಮನಕ್ಕೆ ಬಂದಿದೆ, ಇವುಗಳನ್ನು ಸರಿಪಡಿಸಿಕೊಳ್ಳದೆ ಹೋದರೆ ಕಾರ್ಖಾನೆಯ ವಿರುದ್ಧ ಚಳವಳಿ ಹಮ್ಮಿಕೊಳ್ಳಬೇಕಾಗುತ್ತದೆ ಎಂದು ಎಚ್ಚರಿಸಿದರು.

ರಾಜ್ಯ ಸರಕಾರ ಸ್ವಾಮ್ಯದಲ್ಲಿ ನಡೆಯುತ್ತಿರುವ ರಾಜ್ಯದ ಏಕೈಕ ಕಾರ್ಖಾನೆ ಎಂದರೆ ಮೈಶುಗರ್ ಸಕ್ಕರೆ ಕಾರ್ಖಾನೆ. ಇದಕ್ಕೆ ಸಿದ್ದರಾಮಯ್ಯ ಅವರು 50 ಕೋಟಿ ಬಿಡುಗಡೆ ಮಾಡಿದ್ದು ಕಾರ್ಖಾನೆಯನ್ನು ಲಾಭದಾಯಕವಾಗಿ ನಡೆಸಿಕೊಂಡು ಹೋಗಬೇಕು. ಶುಗರ್ ಟೆಕ್ನಾಲಜಿ ಗೊತ್ತಿರುವ ಅಪ್ಪಾಸಾಹೇಬ್ ಪಾಟೀಲ್ ಅವರನ್ನು ಎಂಡಿ ಯಾಗಿ ನೇಮಕ ಮಾಡಬೇಕು ಎಂದು ಮನವಿ ಮಾಡಿದರು.

ಹಸುವಿನ ಆಹಾರ ಪದಾರ್ಥಗಳು, ಹಸಿ, ಒಣ ಹುಲ್ಲಿನ ದರ ಏರಿಕೆಯಾಗಿದ್ದು ಸರ್ಕಾರ ಹಾಲಿನ ದರ ಏರಿಕೆ ಮಾಡಬೇಕು. ಸಬ್‌ರಿಜಿಸ್ಟ್ರಾರ್ ಹಾಗೂ ತಾಲೂಕು ಕಚೇರಿಯಲ್ಲಿ ಭ್ರಷ್ಟಾಚಾರ ನಡೆಯುತ್ತಿದೆ ಎನ್ನುವ ಆರೋಪಗಳು ಕೇಳಿಬರುತ್ತಿವೆ. ಭ್ರಷ್ಟ ಅಧಿಕಾರಿಗಳಿಗೆ ನಮ್ಮಲ್ಲಿ ಅವಕಾಶವಿಲ್ಲ. ಲಂಚ ಸ್ವೀಕಾರ ಮಾಡಿದ ಹಿಂದಿನ ಸಬ್ ರಿಜಿಸ್ಟ್ರಾರ್ ಮೇಲೆ ಕ್ರಮಕ್ಕೆ ಆಗ್ರಹಿಸಿ ಮೇಲಾಧಿಕಾರಿಗಳಿಗೆ ದೂರು ನೀಡಲಾಗಿದೆ ಎಂದು ಎಚ್ಚರಿಕೆ ನೀಡಿದರು.

ಗೋಷ್ಠಿಯಲ್ಲಿ ತಾಲೂಕು ರೈತಸಂಘದ ಅಧ್ಯಕ್ಷ ಪಿ.ನಾಗರಾಜು, ಮುಖಂಡರಾದ ಲಕ್ಷ್ಮೀಗೌಡ, ವೈ.ಪಿ.ಮಂಜುನಾಥ್, ರಘು, ವೆಂಕಟೇಶ್‌ಮೂರ್ತಿ, ತಿಮ್ಮೇಗೌಡ ಹಾಜರಿದ್ದರು.

ಎಕ್ಸ್‌ಪ್ರೆಸ್‌ವೇನಲ್ಲಿ ಮುಂದುವರೆದ ಅಪಘಾತ: ಇಬ್ಬರಿಗೆ ಗಾಯ



ಮಂಡ್ಯ, ಜು.12– ಲಾರಿಯನ್ನು ಓವರ್ ಟೇಕ್ ಮಾಡಲು ಯತ್ನಿಸಿ ಕಾರೊಂದು ಡಿವೈಡರ್‌ಗೆ ಡಿಕ್ಕಿ ಹೊಡೆದ ಪರಿಣಾಮ ಕಾರಿನಲ್ಲಿದ್ದ ಇಬ್ಬರು ಗಂಭೀರವಾಗಿ ಗಾಯಗೊಂಡಿರುವ ಘಟನೆ ತಾಲೂಕಿನ ತೂಬಿನಕೆರೆ ಬಳಿ ಸಂಭವಿಸಿದೆ.

ತೂಬಿನಕೆರೆಯ ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್ ವೇನಲ್ಲಿ ಬುಧವಾರ ಸಂಭವಿಸಿದ ಈ ಅಪಘಾತದಲ್ಲಿ ಕಾರಿನಲ್ಲಿದ್ದ ಒಂದೇ ಕುಟುಂಬದ ಅತ್ತೆ ಹಾಗೂ ಸೊಸೆ ಗಂಭೀರವಾಗಿ ಗಾಯಗೊಂಡಿದ್ದು, ಇವರನ್ನು ಮೈಸೂರಿನ ಖಾಸಗಿ ಆಸ್ಪತ್ರೆಗೆ ದಾಖಲು ಮಾಡಲಾಗಿದೆ. ಮೈಸೂರಿನಿಂದ ಬೆಂಗಳೂರಿಗೆ ಹೊರಟಿದ್ದ ಕಾರು ಚಾಲಕ ವೇಗವಾಗಿ ಚಲಾಯಿಸುತ್ತಿದ್ದ ಪರಿಣಾಮ ಮುಂದಿದ್ದ ಲಾರಿಯನ್ನು ಓವರ್‌ಟೇಕ್ ಮಾಡಲು ಹೋಗಿ ಈ ಅಪಘಾತ ಸಂಭವಿಸಿದೆ. ಘಟನೆ ಸಂಬಂಧ ಮಂಡ್ಯ ಸಂಚಾರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಇದೇ ರೀತಿಯ ಮತ್ತೊಂದು ಅಪಘಾತ ಶ್ರೀರಂಗಪಟ್ಟಣ ತಾಲೂಕಿನ ನಗುವನಹಳ್ಳಿ ಗ್ರಾಮದ ಬಳಿ ನಡೆದಿದ್ದು, ಲಾರಿಯೊಂದನ್ನು ಓವರ್‌ಟೇಕ್ ಮಾಡಲು ಹೋದ ಕಾರು ಪಲ್ಟಿ ಹೊಡೆದಿದೆ. ಅದೃಷ್ಟವಶಾತ್ ಕಾರಿನಲ್ಲಿದ್ದ ಯಾರಿಗೂ ಪ್ರಾಣಾಪಾಯ ಸಂಭವಿಸಿಲ್ಲ. ಈ ಕಾರು ಸಹ ಎಕ್ಸ್‌ಪ್ರೆಸ್‌ವೇನಲ್ಲಿ ಹೋಗುತ್ತಿದ್ದ ಸಂದರ್ಭದಲ್ಲಿ ಲಾರಿಯನ್ನು ಓವರ್‌ಟೇಕ್ ಮಾಡಲು ಹೋಗಿ ಘಟನೆ ಸಂಭವಿಸಿದೆ. ಘಟನೆ ಸಂಬಂಧ ಶ್ರೀರಂಗಪಟ್ಟಣ ಟೌನ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬೈಕ್‌ಗೆ ಟ್ರಾಕ್ಟರ್ ಡಿಕ್ಕಿ: ಹೋಂಗಾರ್ಡ್ ಸಾವು

ಮಂಡ್ಯ, ಜು.12– ಮಂಡ್ಯ– ಮೇಲುಕೋಟೆ ರಸ್ತೆಯಲ್ಲಿ ಬೈಕ್‌ಗೆ ಟ್ರಾಕ್ಟರ್ ಡಿಕ್ಕಿ ಹೊಡೆದ ಪರಿಣಾಮ ಹೋಂ ಗಾರ್ಡ್ ಸಾವನ್ನಪ್ಪಿರುವ ಘಟನೆ ಬುಧವಾರ ರಾತ್ರಿ ನಡೆದಿದೆ. ಶಿವಳ್ಳಿ ಗ್ರಾಮದ ನಿವಾಸಿ ಹೋಂ ಗಾರ್ಡ್ ಬಸವರಾಜ್ (43) ಅಪಘಾತದಲ್ಲಿ ಸಾವನ್ನಪ್ಪಿದವರಾಗಿದ್ದು, ಹೊಸಹಳ್ಳಿ ಗೇಟ್ ಬಳಿ ಕಬ್ಬು ತುಂಬಿದ ಟ್ರಾಕ್ಟರ್ ಇವರ ಬೈಕ್‌ಗೆ ಡಿಕ್ಕಿ ಹೊಡೆದು ಸವಾರನ ಮೇಲೆ ಹರಿದ ಪರಿಣಾಮ ಬಸವರಾಜು ಸ್ಥಳದಲ್ಲಿಯೇ ಸಾವನ್ನಪ್ಪಿದ್ದಾರೆ. ಕೆಲಸ ಮುಗಿಸಿ ಸ್ವಗ್ರಾಮಕ್ಕೆ ಹಿಂದಿರುಗುತ್ತಿದ್ದಾಗ ಈ ಅಪಘಾತ ಸಂಭವಿಸಿದೆ. ಮಂಡ್ಯ ಗ್ರಾಮಾಂತರ ಠಾಣಾ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ, ಪರಿಶೀಲಿಸಿ ಮೃತದೇಹವನ್ನು ಮರಣೋತ್ತರ ಪರೀಕ್ಷೆಗಾಗಿ ಮಿಮ್ಸ್ ಆಸ್ಪತ್ರೆಗೆ ರವಾನಿಸಿದ್ದು, ಪ್ರಕರಣ ದಾಖಲಿಸಿಕೊಂಡು ಮುಂದಿನ ಕ್ರಮ ಕೈಗೊಂಡಿದ್ದಾರೆ.

ಆತ್ಮಹತ್ಯೆಗೆ ಯತ್ನಿಸಿದ ಕೆಎಸ್‌ಆರ್‌ಟಿಸಿ ಚಾಲಕ ಜಗದೀಶ್ ತೆರಳುತ್ತಿದ್ದ ಆಂಬುಲೆನ್ಸ್ ತಡೆದ ಆರೋಪ

ಮಾಜಿ ಶಾಸಕ ಸುರೇಶ್‌ಗೌಡ ಮೇಲೆ ಸುಮೊಟೋ ಕೇಸು ದಾಖಲಿಸಲು ಸತ್ಯಾನಂದ ಒತ್ತಾಯ

ಮಂಡ್ಯ, ಜು.12– ವಿಷ ಸೇವಿಸಿ ಆತ್ಮಹತ್ಯೆಗೆ ಯತ್ನಿಸಿದ್ದ ಸರ್ಕಾರಿ ಬಸ್ ಚಾಲಕನ್ನು ಬಿಜಿಎಸ್ ಆಸ್ಪತ್ರೆಯಿಂದ ಹೆಚ್ಚಿನ ಚಿಕಿತ್ಸೆಗೆ ಮೈಸೂರಿಗೆ ಸಾಗಿಸುತ್ತಿದ್ದ ಆಂಬುಲೆನ್ಸ್ ತಡೆದು ರೋಗಿಯ ಆರೋಗ್ಯದ ಜೊತೆ ಚೆಲ್ಲಾಟವಾಡಿರುವ ಮಾಜಿ ಶಾಸಕ ಸುರೇಶ್‌ಗೌಡ ವಿರುದ್ಧ ಪೊಲೀಸ್ ಇಲಾಖೆ ಸುಮೊಟೊ ಮೊಕದ್ದಮೆ ದಾಖಲಿಸಬೇಕು ಎಂದು ಕೆಪಿಸಿಸಿ ವಕ್ತಾರ ಟಿ.ಎಸ್.ಸತ್ಯಾನಂದ ಒತ್ತಾಯಿಸಿದರು.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಯಾವುದೇ ರೋಗಿಗೆ ಕ್ಲಿಷ್ಟ ಸಂದರ್ಭದಲ್ಲಿ ತುರ್ತು ಇದ್ದಾಗ ಪ್ರತಿ ನಿಮಿಷ ಗೋಲ್ಡನ್ ಸಮಯವಾಗಿರುತ್ತದೆ ಅಂತಹ ಸಂದರ್ಭದಲ್ಲಿ ರೋಗಿಯ ಪ್ರಾಣದ ಜೊತೆ ಚೆಲ್ಲಾಟವಾಡಿ ಪ್ರಕರಣವನ್ನು ರಾಜಕೀಯಗೊಳಿಸಲು ಕೃತ್ಯ ಎಸಗಿರುವುದು ಮಾಜಿ ಶಾಸಕರಿಗೆ ಶೋಭೆ ತರುವುದಿಲ್ಲ. ಈ ಕೂಡಲೇ ಅವರು ಸಚಿವ ಚಲುವರಾಯಸ್ವಾಮಿ ಮತ್ತು ಜಿಲ್ಲೆಯ ಜನರ ಕ್ಷಮೆಯಾಚಿಸಬೇಕು ಎಂದು ಆಗ್ರಹಿಸಿದರು. ಸರ್ಕಾರಿ ಬಸ್ ಚಾಲಕ ಜಗದೀಶ್ ಆತ್ಮಹತ್ಯೆ ಯತ್ನ ಪ್ರಕರಣವನ್ನು ರಾಜಕೀಯವಾಗಿ ಬಳಸಿಕೊಳ್ಳಲು ಪ್ರಯತ್ನಿಸಿರುವ ಜೆಡಿಎಸ್ ನಾಯಕರ ಕೃತ್ಯ ನಾಚಿಕೆಗೇಡಿನ ಕೃತ್ಯವಾಗಿದೆ. ಮಾಜಿ ಸಿಎಂ ಕುಮಾರಸ್ವಾಮಿ ತಮ್ಮ ಸ್ಥಾನದ ಘನತೆಯನ್ನು ಮರೆತು ವಿಧಾನ ಸಭಾ ಅಧಿವೇಶನದಲ್ಲಿ ಹತಾಶರಾಗಿ ರಾಜಕೀಯ ವೈರತ್ವ ತೀರಿಸಿಕೊಳ್ಳಲು ಪ್ರಯತ್ನಿಸಿದ್ದು ಹೇಡಿತನದ ಪರಮಾವಧಿಯಾಗಿದೆ.

ಜಿಪಂನಲ್ಲಿ ಸಂಪೂರ್ಣ ಬಹುಮತವಿದ್ದರೂ ಒಂದು ಸಭೆ ನಡೆಸಿ ಸರ್ಕಾರದ ಅನುದಾನವನ್ನು ಗ್ರಾಮೀಣ ಪ್ರದೇಶದ ಅಭಿವೃದ್ಧಿಗೆ ಬಳಸಲು ಸಾಧ್ಯವಾಗಲಿಲ್ಲ. ಆದರೆ ರಾಜಕೀಯ ವಿರೋಧಿಗಳ ಮೇಲೆ ಇಂತಹ ಪ್ರಕರಣಗಳ ಮೂಲಕ ದ್ವೇಷ ಸಾಧಿಸಲು ಹೊರಟಿರುವುದು ನಾಚಿಕೆಗೇಡಿನ ಸಂಗತಿಯಾಗಿದ್ದು ಕುಮಾರಸ್ವಾಮಿರವರಿಗೆ ಶೋಭೆ ತರುವಂತದ್ದಲ್ಲ ಎಂದರು. ಪೊಲೀಸ್ ಇಲಾಖೆ ನಿಷ್ಪಕ್ಷಪಾತವಾಗಿ ತನಿಖೆ ನಡೆಸಿ ಸತ್ಯಾಂಶವನ್ನು ಹೊರತೆಗೆಯಲಿ. ತಪ್ಪಿತಸ್ಥರು ಯಾರೆ ಆದರೂ ಅವರಿಗೆ ಕಠಿಣ ಶಿಕ್ಷೆಯಾಗಲಿ ಎಂದರು.

ಸುದ್ದಿಗೋಷ್ಠಿಯಲ್ಲಿ ನಗರಸಭೆ ಮಾಜಿ ಅಧ್ಯಕ್ಷ ಲೋಕೇಶ್, ಸದಸ್ಯ ಶ್ರೀಧರ್, ಕಾಂಗ್ರೆಸ್ ಮುಖಂಡರಾದ ನರಸಪ್ಪ ಹೆಗಡೆ, ಇನ್ನಿತರರಿದ್ದರು.

ಶಾಸಕ ನರೇಂದ್ರಸ್ವಾಮಿ ವಿರುದ್ಧ ಜೆಡಿಎಸ್ ಪ್ರತಿಭಟನೆ



ಮಳವಳ್ಳಿ, ಜು.12– ಸದನದಲ್ಲಿ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ವಿರುದ್ಧ ಶಾಸಕ ಪಿ.ಎಂ.ನರೇಂದ್ರಸ್ವಾಮಿ ಏಕವಚನದಲ್ಲಿ ಮಾತನಾಡಿರುವುದನ್ನು ಖಂಡಿಸಿ ಜೆಡಿಎಸ್ ಕಾರ್ಯಕರ್ತರು ಬುಧವಾರ ಪ್ರತಿಭಟನೆ ನಡೆಸಿದರು.

ಪಟ್ಟಣದ ಅನಂತ್‌ರಾಂ ವೃತ್ತದ ಬಳಿ ಬುಧವಾರ ಮಾಜಿ ಶಾಸಕ ಡಾ.ಕೆ.ಅನ್ನದಾನಿ ನೇತೃತ್ವದಲ್ಲಿ ಜಮಾಯಿಸಿದ ಜೆಡಿಎಸ್ ಕಾರ್ಯಕರ್ತರು, ಮಾನವ ಸರಪಳಿ ನಿರ್ಮಿಸಿ ಶಾಸಕ ಪಿ.ಎಂ.ನರೇಂದ್ರಸ್ವಾಮಿ ವಿರುದ್ಧ ಧಿಕ್ಕಾರ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಮಾಜಿ ಶಾಸಕ ಡಾ.ಕೆ.ಅನ್ನದಾನಿ ಮಾತನಾಡಿ, ರಾಜ್ಯದಲ್ಲಿ ಎರಡು ಬಾರಿ ಮುಖ್ಯಮಂತ್ರಿಯಾಗಿ ಅಭಿವೃದ್ಧಿ ಕಾರ್ಯಕ್ರಮಗಳ ಮೂಲಕ ನಾಡಿನ ಜನರ ಮನಗೆದ್ದಿರುವ ಎಚ್.ಡಿ.ಕುಮಾರಸ್ವಾಮಿ ಅವರನ್ನು ಸದನದಲ್ಲಿ ಏಕವಚನ ಹಾಗೂ ಅಸಂಸದೀಯ ಪದ ಬಳಕೆ ಮಾಡಿ ಟೀಕಿಸಿ ಯೋಗ್ಯತೆ ಬಗ್ಗೆ ಪ್ರಶ್ನೆ ಮಾಡಿರುವ ಶಾಸಕ ಪಿ.ಎಂ.ನರೇಂದ್ರಸ್ವಾಮಿ ದುರಹಂಕಾರದ ನಡೆ ಸರಿಯಲ್ಲ, ಕೂಡಲೇ ಸದನದಲ್ಲಿ ಕುಮಾರಸ್ವಾಮಿ ಅವರ ಕ್ಷಮೆಯಾಚಿಸಬೇಕು. ಇಂಥ ಧೋರಣೆ ಮುಂದುವರೆಸಿದರೆ ಮುಂದಿನ ದಿನಗಳಲ್ಲಿ ಜನರು ತಕ್ಕಪಾಠ ಕಲಿಸಲಿದ್ದಾರೆ ಎಂದು ವಾಗ್ದಾಳಿ ನಡೆಸಿದರು.

ಪಿ.ಎಂ.ನರೇಂದ್ರಸ್ವಾಮಿ 2008ರಲ್ಲಿ ಶಾಸಕರಾಗಿ ಅನರ್ಹಗೊಂಡ ಸಂದರ್ಭದಲ್ಲಿ ಶಾಸಕ ಸ್ಥಾನ ಉಳಿಸಿಕೊಳ್ಳಲು ರಾಮನಗರ ಈಗಲ್‌ಟನ್ ರೆಸಾರ್ಟ್‌ನಲ್ಲಿ ಎಚ್.ಡಿ. ಕುಮಾರಸ್ವಾಮಿ ಅವರ ಕಾಲು ಹಿಡಿದಿರಲಿಲ್ಲವೇ, ಅದಕ್ಕೆ ನಾನೇ ಸಾಕ್ಷಿಯಾಗಿದ್ದೇನೆ. ಕುಮಾರಸ್ವಾಮಿ ಬಳಿ ಎಷ್ಟು ಹಣ ಪಡೆದಿದ್ದೀರಾ ಎನ್ನುವುದು ನನಗೆ ಗೊತ್ತಿದೆ ಎಂದು ಆರೋಪಿಸಿದರು.

ಜೆಡಿಎಸ್ ಯುವ ಘಟಕದ ಜಿಲ್ಲಾ ಅಧ್ಯಕ್ಷ ಬಿ.ರವಿ ಕಂಸಾಗರ ಮಾತನಾಡಿ, ಕಾಂಗ್ರೆಸ್‌ನ ನಿಷ್ಠೆಯ ಬಗ್ಗೆ ಮಾತನಾಡುವ ಶಾಸಕರು 2008ರಲ್ಲಿ ಪಕ್ಷೇತರರಾಗಿ ಗೆದ್ದು ಬಿಜೆಪಿಗೆ ಹೋಗಿರಲಿಲ್ಲವೇ? ಎಚ್.ಡಿ.ಕುಮಾರಸ್ವಾಮಿ ಅವರ ಯೋಗ್ಯತೆ ಬಗ್ಗೆ ಮಾತನಾಡುವ ಯಾವ ನೈತಿಕತೆ ಅವರಿಗಿದೆ ಎಂದು ಪ್ರಶ್ನಿಸಿದರು.

ಜೆಡಿಎಸ್ ತಾಲೂಕು ಘಟಕದ ಅಧ್ಯಕ್ಷ ವಿ.ಎಂ.ವಿಶ್ವನಾಥ್, ಪುರಸಭೆ ಸದಸ್ಯರಾದ ಸಿದ್ದರಾಜು, ಟಿ.ನಂದಕುಮಾರ್, ನೂರುಲ್ಲಾ, ಪಿಎಲ್‌ಡಿ ಬ್ಯಾಂಕ್ ನಿರ್ದೇಶಕ ಬುಲೆಟ್ ನಿಂಗಣ್ಣ, ಮುಖಂಡರಾದ ಹನುಮಂತು, ಜಯರಾಮು, ಪ್ರಭು, ಸದಾನಂದ, ಚೊಟ್ಟನಹಳ್ಳಿ ಸತೀಶ್, ಪೊತ್ತಂಡೆ ನಾಗರಾಜು, ಸಿದ್ದಚಾರಿ, ಮೆಹಬೂಬ್ ಪಾಷ ಸೇರಿದಂತೆ ಹಲವರು ಇದ್ದರು.

ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್ ವೇನಲ್ಲಿ ಮೂಲ ಸೌಲಭ್ಯಕ್ಕೆ ಕ್ರಮ ವಹಿಸಲು ಸಿಎಂ ಸೂಚನೆ

ಮಂಡ್ಯ ಭಾಗದ ಶಾಸಕತ್ರಯರ ಮನವಿಗೆ ಸ್ಪಂದನೆ

ಮಂಡ್ಯ, ಜು.12– ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್ ವೇ ನಡುವೆ ಬರುವ ಸರ್ವಿಸ್ ರಸ್ತೆಗಳು, ಇನ್ನಿತರ ಕಾಮಗಾರಿಗಳು ಪೂರ್ಣಗೊಳ್ಳದಿರುವುದು ಸೇರಿದಂತೆ ಮೂಲ ಸೌಕರ್ಯವನ್ನು ಕಲ್ಪಿಸದಿರುವುದರ ಬಗ್ಗೆ ಮಂಡ್ಯ ಭಾಗದ ಶಾಸಕರಾದ ದಿನೇಶ್ ಗೂಳಿಗೌಡ, ರವಿಕುಮಾರ್ ಗಣಿಗ ಹಾಗೂ ರಮೇಶ್ ಬಂಡಿಸಿದ್ದೇಗೌಡ ಅವರ ಮನವಿಗೆ ಸಿಎಂ ಸಿದ್ದರಾಮಯ್ಯ ಸ್ಪಂದಿಸಿದ್ದು, ಕೂಡಲೇ ಅಗತ್ಯ ಕ್ರಮ ಕೈಗೊಳ್ಳುವಂತೆ ಮುಖ್ಯ ಕಾರ್ಯದರ್ಶಿಗೆ ಸೂಚನೆ ನೀಡಿದ್ದಾರೆ.

ಸಿಎಂ ಸೂಚನೆ ಮೇರೆಗೆ ಮುಖ್ಯ ಕಾರ್ಯದರ್ಶಿ ವಂದಿತಾ ಶರ್ಮ ಅವರು ಸಂಬಂಧಪಟ್ಟ ಅಧಿಕಾರಿಗಳ ತುರ್ತು ಸಭೆ ಕರೆದು ಸಮಸ್ಯೆಯನ್ನು ಬಗೆಹರಿಸಬೇಕು. ಅಲ್ಲದೆ, ಜನಪ್ರತಿನಿಧಿಗಳ ಅಭಿಪ್ರಾಯವನ್ನು ಪಡೆಯುವಂತೆಯೂ ಸೂಚಿಸಲಾಗಿದೆ.

ಈಗಾಗಲೇ ಈ ಭಾಗದಲ್ಲಿ ಎರಡೆರಡು ಕಡೆ ಟೋಲ್ ಸಂಗ್ರಹ ಮಾಡಲಾಗುತ್ತಿದೆ. ಆದರೆ, ಅಗತ್ಯ ಮೂಲ ಸೌಲಭ್ಯವನ್ನು ಕಲ್ಪಿಸಲಾಗಿಲ್ಲ. ಈ ಬಗ್ಗೆ ಗಮನಹರಿಸಬೇಕೆಂದು ಶಾಸಕರು ಸಿಎಂ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದು ಕೋರಿದ್ದರು.

ಈ ನಿಟ್ಟಿನಲ್ಲಿ ಸಂಬಂಧಪಟ್ಟವರ ಸಭೆ ಕರೆದು ಸಮಸ್ಯೆಯನ್ನು ಇತ್ಯರ್ಥ ಮಾಡುವಂತೆ ಪಿಡಬ್ಲ್ಯುಡಿ ಮುಖ್ಯ ಕಾರ್ಯದರ್ಶಿ ಹಾಗೂ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳಿಗೆ ಮುಖ್ಯ ಕಾರ್ಯದರ್ಶಿಯವರು ಸೂಚನೆಯನ್ನು ನೀಡಿದ್ದಾರೆ.

ಒಂದನೇ ಪುಟದಿಂದ

ವಿಪಕ್ಷ ನಾಯಕರಾಗ್ತಾರೆ...

ಜತೆ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು ಕೈಜೋಡಿಸಬಹುದು. ಜೆಡಿಎಸ್, ಎನ್‌ಡಿಎ ಜತೆ ಕೈ ಜೋಡಿಸದಿದ್ದರೂ ಕಾಂಗ್ರೆಸ್ ಸಭೆಗೆ ಹೋಗದೇ, ದೂರ ಉಳಿದರೆ ನಮ್ಮವರಿಗೆ ಅಷ್ಟೇ ಸಾಕು. ಇದನ್ನು ಮುಂದಿಟ್ಟುಕೊಂಡು ಕುಮಾರಸ್ವಾಮಿ ಅವರನ್ನು ಒಮ್ಮತದ ನಾಯಕರನ್ನಾಗಿ ಆ ಸ್ಥಾನಕ್ಕೆ ತರುತ್ತಾರೆ. ಈ ವಿಚಾರದ ಬಗ್ಗೆ ಗೌಡರು, ನನ್ನ ಮತ್ತು ರಾಜ್ಯದ ಮತ್ತೊಬ್ಬ ನಾಯಕರೊಂದಿಗೆ ಎರಡು, ಮೂರು ಬಾರಿ ಮಾತನಾಡಿದ್ದಾರೆ. ನಮಗೆ ಸೂಕ್ಷ್ಮತೆ ತಿಳಿಯುತ್ತಿದ್ದಂತೆ ವಿಧಾನಸಭೆ ಒಳ ಮತ್ತು ಹೊರಗೆ ಕುಮಾರಸ್ವಾಮಿ ಬೆಂಬಲಕ್ಕೆ ನಿಂತಿದ್ದೇವೆ. ಅವರು ಸಹ ವಿಧಾನಸಭೆ ಯಲ್ಲಿ ಸರ್ಕಾರದ ವಿರುದ್ಧ ಮತ್ತು ಬಿಜೆಪಿ ಪರವಾಗಿ ಮಾತನಾಡುತ್ತಿದ್ದಾರೆ. ಈ ಬೆಳವಣಿಗೆ ರಾಜಕೀಯ ವಲಯದಲ್ಲಿ ಆಶ್ಚರ್ಯವಾಗಬಹುದು. ಆದರೆ, ದೇವೇಗೌಡರೇ ಈ ತೀರ್ಮಾನ ಕೈಗೊಳ್ಳಲು ಮುಂಚೂಣಿಯಲ್ಲಿದ್ದಾರೆ. ಕುಮಾರಸ್ವಾಮಿ ವಿರೋಧ ಪಕ್ಷದ ನಾಯಕರಾಗಲು ಯಾವುದೇ ಅಭ್ಯಂತರವಿಲ್ಲ. ಒಟ್ಟಿಗೆ ಹೋರಾಟ ಮಾಡುತ್ತೇವೆ. ಎಲ್ಲವೂ ಸೋಮವಾರದ ಬೆಳವಣಿಗೆ ನಂತರ ನಿರ್ಧಾರವಾಗಲಿದೆ. ಈ ಬೆಳವಣಿಗೆಯ ನಂತರ ಬಿಹಾರದ ಮುಖ್ಯಮಂತ್ರಿ ನಿತೀಶ್ ಕುಮಾರ್ ಹಾಗೂ ಮಮತಾ ಬ್ಯಾನರ್ಜಿ ಅವರು ಗೌಡರು ಮತ್ತು ಕುಮಾರಸ್ವಾಮಿ ಅವರನ್ನು ಸಂಪರ್ಕಿಸಿದರೂ ಪ್ರಯೋಜನವಾಗಿಲ್ಲ.

ವಿಪಕ್ಷ ನಾಯಕರಾಗಿ ಕುಮಾರಸ್ವಾಮಿ ಆಯ್ಕೆ ಖಚಿತ

ಮಾಡಿಕೊಳ್ಳಲು ಆಗುತ್ತಿಲ್ಲ ಏಕೆ? ಎಂದು ಪ್ರಶ್ನಿಸಿದರು. ಈ ವೇಳೆ ಇವರ ಸಮಕಾಲೀನರೂ ಆದ ಸಹಕಾರಿ ಧುರೀಣ ಲಕ್ಷ್ಮಣ್ ಸವದಿ ತಕ್ಷಣವೇ ಮೇಲೆದ್ದು, ಗೌಡರೇ, ನಿಮಗೂ ತಿಳಿದಿರಬೇಕಲ್ಲ. ಪ್ರತಿಪಕ್ಷದ ನಾಯಕನ ಸ್ಥಾನ ನಿಮ್ಮ ಮನೆ ಬಾಗಿಲಿಗೆ ಹುಡುಕಿಕೊಂಡು ಬರುತ್ತಿದೆ. ರಾಜ್ಯ ಬಿಜೆಪಿಯಲ್ಲಿನ ಆಂತರಿಕ ಕಚ್ಚಾಟದಿಂದ ವರಿಷ್ಠರು ರೋಸಿ ಹೋಗಿದ್ದಾರೆ. ನಾನು ಆ ಪಕ್ಷದಲ್ಲಿದ್ದವನು. ನನಗೂ ವರಿಷ್ಠರ ಸಂಪರ್ಕವಿದೆ. ಇದರ ಆಧಾರದ ಮೇಲೆ ಕುಮಾರಸ್ವಾಮಿ ಅವರನ್ನು ಪ್ರತಿಪಕ್ಷದ ನಾಯಕನ ಸ್ಥಾನಕ್ಕೆ ತರಲು ಬಿಜೆಪಿ ವರಿಷ್ಠರು ಮುಂದಾಗಿದ್ದಾರೆ. ಇದೇ ಕಾರಣಕ್ಕೆ ರಾಜ್ಯಾಧ್ಯಕ್ಷರನ್ನು ನೇಮಕ ಮಾಡಿಲ್ಲ. ಪ್ರತಿಪಕ್ಷದ ನಾಯಕನನ್ನು ಆಯ್ಕೆ ಮಾಡಿಲ್ಲ. ಜೆಡಿಎಸ್ ಬಾಗಿಲಿಗೆ ಅಧಿಕಾರ ಬರುತ್ತಿದೆ ಗೌಡರೇ... ಎಂದು ಕೂಗಿ ಹೇಳಿದರು.

ಸಾಬೀತುಪಡಿಸಿದ್ರೆ ನಿವೃತ್ತಿ ಘೋಷಿಸುವೆ...

ರಾಜಕೀಯವನ್ನು ನೇರವಾಗಿ ಮಾಡಿದ್ದೇನೆ. ನಾನೇನು ಹಿಂದಿನ ಬಾಗಿಲಿನಿಂದ ರಾಜಕೀಯ ಮಾಡಿಲ್ಲ ಎಂದು ಮುಖ್ಯಮಂತ್ರಿ ಅವರನ್ನು ಪರೋಕ್ಷವಾಗಿ ತಿವಿದರು. ಆಕಸ್ಮಿಕವಾಗಿ ಮುಖ್ಯಮಂತ್ರಿಯಾಗಿಯೋ ಇಲ್ಲವೇ ಹೊಂದಾಣಿಕೆಯಿಂದಲೋ ಎರಡು ಬಾರಿ ರಾಜ್ಯದ ಆಡಳಿತ ನಡೆಸಿದ್ದೇನೆ. ಮುಕ್ತವಾಗಿ ಹೊಂದಾಣಿಕೆ ಮಾಡಿಕೊಳ್ಳಲಾಗಿದೆ. ಹಿಂಬಾಗಿಲ ಮೂಲಕ ರಾಜಕೀಯ ಮಾಡಿಲ್ಲ ಎಂದು ಮಾರ್ಮಿಕವಾಗಿ ನುಡಿದರು.

ಹಿಂದೂಗಳು ಒಬ್ಬೊಬ್ಬರೇ ಓಡಾಡಬೇಡಿ!

ಫೋನ್ ಪರಿಶೀಲಿಸಿದರೆ ಯಾರೆಲ್ಲಾ ಕರೆ ಮಾಡಿದ್ದಾರೆ ಎಂಬುದು ಗೊತ್ತಾಗುತ್ತದೆ. ವೇಣುಗೋಪಾಲ ಹಿಂದೂ ಸಂಘಟನೆಯಲ್ಲಿ ಕೆಲಸ ಮಾಡಿದ್ದ. ಯಾವುದೇ ಕ್ರಿಮಿನಲ್ ಕೆಲಸ ಮಾಡಿಲ್ಲ. ಕಾಂಗ್ರೆಸ್ ಸರ್ಕಾರ ಬಂದ ನಂತರ ಯಾರಿಗೂ ರಕ್ಷಣೆ ಇಲ್ಲದಂತಾಗಿದೆ ಎಂದು ವಾಗ್ದಾಳಿ ನಡೆಸಿದರು. ಕಾಂಗ್ರೆಸ್ ಅಧಿಕಾರಕ್ಕೆ ಬಂದಾಗಲೆಲ್ಲ ಹಿಂದೂ ಕಾರ್ಯಕರ್ತರ ಹತ್ಯೆ ಶುರುವಾಗುತ್ತದೆ. ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಹದಗೆಟ್ಟಿದೆ. ಕಾನೂನನ್ನು ಗಂಟು ಮೂಟೆ ಕಟ್ಟಿ ಬಿಸಾಡಲಾಗಿದೆ. ರಾಜ್ಯದ ಎಲ್ಲಾ ಕಡೆಗಳಲ್ಲೂ ಕೊಲೆ, ದೌರ್ಜನ್ಯ ನಡೆಯುತ್ತಿವೆ. ಸಿಎಂ ಕ್ಷೇತ್ರದಲ್ಲೇ ಕಾನೂನು ಸುವ್ಯವಸ್ಥೆ ಹದಗಟ್ಟಿದೆ ಅಂದ ಮೇಲೆ ರಾಜ್ಯದ ಬೇರೆ ಭಾಗಗಳ ಪರಿಸ್ಥಿತಿ ಹೇಗಿರಬೇಡ ಯೋಚಿಸಿ ಎಂದರು. ರಾಜ್ಯದಲ್ಲಿ ಹಿಂದೂ ಕಾರ್ಯಕರ್ತರಿಗೆ, ಸ್ವಾಮೀಜಿಗಳಿಗೆ, ಹಿರಿಯ ನಾಗರೀಕರಿಗೆ ರಕ್ಷಣೆ ಇಲ್ಲ. ಕಾಂಗ್ರೆಸ್ ಸರ್ಕಾರ ಬಂದಾಗಲೆಲ್ಲಾ ರಾಜ್ಯದ ಒಳಗಿನ ಜಿಹಾದಿ ಮನಸ್ಥಿತಿಯ ಜನ ಎದ್ದು ಕೂರುತ್ತಾರೆ ಎಂದು ಕಿಡಿಕಾರಿದರು.

ಸುಳ್ಳಿನ ಗ್ಯಾರಂಟಿ ಮೂಲಕ ಅಧಿಕಾರಕ್ಕೆ ಬಂದವರು ವೈಯಕ್ತಿಕ ವರ್ಚಸ್ಸಿನಿಂದ ಬಾಯಿಗೆ ಬಂದಂತೆ ಮಾತನಾಡುತ್ತಿದ್ದಾರೆ. ವೇಣುಗೋಪಾಲ ನಾಯಕ ಹತ್ಯೆ ನಂತರ ಅವರ ಕುಟುಂಬಕ್ಕೆ ಸ್ಪಂದಿಸುವ ಕೆಲಸವನ್ನು ಜಿಲ್ಲಾ ಮಂತ್ರಿ ಮಾಡಿಲ್ಲ. ಸಿಎಂ ಸಮೇತ ಎಲ್ಲರೂ ಕಣ್ಮುಚ್ಚಿ ಕುಳಿತಿದ್ದಾರೆ. ಹಿಂದೂ ಕಾರ್ಯಕರ್ತರ ಮೇಲೆ ಈ ರೀತಿ ಘಟನಾವಳಿಗಳು ಮೇಲಿಂದ ಮೇಲೆ ನಡೆಯುತ್ತವೆ. ಎಲ್ಲರೂ ಸ್ವಲ್ಪ ಜಾಗರೂಕರಾಗಿರಿ. ಶವದ ಮೇಲೆ ಬಿಜೆಪಿ ಯಾವತ್ತೂ ರಾಜಕೀಯ ಮಾಡಿಲ್ಲ. ಹಿಂದೂ ಸಂಘಟನೆಯ ಕಾರ್ಯಕರ್ತರ ಹತ್ಯೆಯಾದಾಗ ಧ್ವನಿ ಎತ್ತುವುದು ನಮ್ಮ ಜವಾಬ್ದಾರಿ. ಪೊಲೀಸ್ ತನಿಖೆಯ ಒತ್ತಡಗಳು ಉಂಟಾಗುವ ಅನುಮಾನ ಇದೆ. ಅದ್ದರಿಂದ ಸಿಬಿಐ ತನಿಖೆ ಮಾಡಿದರೆ ಸತ್ಯ ಹೊರಬರುತ್ತದೆ ಎಂದು ಆಗ್ರಹಿಸಿದರು.

ಮತ್ತೆ ಫೀಲ್ಡ್‌ಗಿಳಿದ ಪೊಲೀಸರು

ವಿಭಾಗದ ಡಿಸಿಪಿ ಎಸ್.ಜಾಹ್ನವಿ ಹಾಗೂ ಎಸಿಪಿ ಹೆಚ್.ಪರುಶುರಾಮಪ್ಪ ನಗರದ ಪ್ರಮುಖ ರಸ್ತೆ ಹಾಗೂ ವೃತ್ತಗಳಲ್ಲಿ ವಿಶೇಷ ಕಾರ್ಯಾಚರಣೆ ಪರಿಶೀಲನೆ ನಡೆಸಿದರಲ್ಲದೆ, ವಾಹನಗಳ ತಪಾಸಣೆ ನಡೆಸಿದರು.

ತಬ್ಬಿಬ್ಬಾದ ಸವಾರರು: ಕಳೆದ ಒಂದು ತಿಂಗಳಿಂದ ನಗರದಲ್ಲಿ ಕಾರ್ಯಾಚರಣೆ ಸ್ಥಗಿತಗೊಳಿಸಿದ್ದ ಪೊಲೀಸರು, ಮತ್ತೆ ಏಕಾಏಕಿ ಕಾರ್ಯಾಚರಣೆ ನಡೆಸಿದ್ದರಿಂದ ಪೊಲೀಸರು ಇಲ್ಲವೆಂದು ಹೆಲ್ಮೆಟ್ ಧರಿಸದೆ ವಾಹನ ಚಾಲನೆ ಮಾಡಿಕೊಂಡು ಬರುತ್ತಿದ್ದವರು ಪೊಲೀಸರನ್ನು ಕಂಡು ತಬ್ಬಿಬ್ಬಾದರು. ಸಂಚಾರ ನಿಯಮ ಉಲ್ಲಂಘಿಸಿ ಪೊಲೀಸರಿಗೆ ಸಿಕ್ಕಿಬಿದ್ದವರಲ್ಲಿ ಕೆಲವರು ಸಬೂಬು ಹೇಳಿಕೊಂಡು ತಪ್ಪಿಸಿಕೊಳ್ಳಲು ಪ್ರಯತ್ನಿಸಿದರಾದರೂ ಯಾವುದೇ ಪ್ರಯೋಜನವಾಗಲಿಲ್ಲ.

ವಿಶೇಷ ಕಾರ್ಯಾಚರಣೆ ಮುಂದುವರಿಯಲಿದೆ: ನಗರದೆಲ್ಲೆಡೆ ಸಂಚಾರ ನಿಯಮ ಉಲ್ಲಂಘನೆ ಹೆಚ್ಚಾಗಿರುವ ಹಿನ್ನೆಲೆಯಲ್ಲಿ ವಿಶೇಷ ಕಾರ್ಯಾಚರಣೆಯನ್ನು ಮತ್ತೆ ಆರಂಭಿಸಲಾಗಿದೆ. ಪ್ರತಿನಿತ್ಯ ಸಂಜೆ 5 ರಿಂದ ರಾತ್ರಿ 9 ಗಂಟೆಯವರೆಗೆ ನಗರದ ಪ್ರಮುಖ ರಸ್ತೆ ಹಾಗೂ ವೃತ್ತಗಳಲ್ಲಿ ಕಾರ್ಯಾಚರಣೆ ನಡೆಯಲಿದೆ ಎಂದು ನಗರ ಪೊಲೀಸ್ ಆಯುಕ್ತ ಬಿ.ರಮೇಶ್ 'ಮೈಸೂರು ಮಿತ್ರ'ನಿಗೆ ತಿಳಿಸಿದರು. ತ್ರಿಬಲ್ ರೈಡಿಂಗ್, ಹೆಲ್ಮೆಟ್ ಧರಿಸದೆ ವಾಹನ ಸವಾರಿ ಸೇರಿದಂತೆ ಇನ್ನಿತರೆ ಸಂಚಾರ ನಿಯಮ ಉಲ್ಲಂಘನೆ ಹೆಚ್ಚಾಗಿದೆ. ಕಳೆದೊಂದು ತಿಂಗಳಿಂದ ಸುಗಮ ಸಂಚಾರಕ್ಕೆ ಆದ್ಯತೆ ನೀಡುವ ಸಲುವಾಗಿ ದಂಡ ವಿಧಿಸುವ ಕಾರ್ಯಾಚರಣೆಯನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಿ, ಸಿಸಿ ಕ್ಯಾಮರಾಗಳ ಮೂಲಕ ಪ್ರಕರಣ ದಾಖಲಿಸುವುದನ್ನು ಹೆಚ್ಚಿಸಲಾಗಿತ್ತು. ಆದರೆ ಇದನ್ನೇ ಲಾಭವಾಗಿ ಪಡೆದಿರುವ ಬಹುತೇಕ ಸವಾರರು ಸಂಚಾರ ನಿಯಮ ಉಲ್ಲಂಘಿ ಸುತ್ತಿದ್ದಾರೆ. ಶಾಲಾ–ಕಾಲೇಜುಗಳ ಸುತ್ತಮುತ್ತ ತ್ರಿಬಲ್ ರೈಡಿಂಗ್ ಪ್ರಕರಣಗಳು ಹೆಚ್ಚಾಗಿರುವುದು ಕಂಡು ಬಂದ ಹಿನ್ನೆಲೆ ವಿಶೇಷ ಕಾರ್ಯಾಚರಣೆ ಆರಂಭಿಸಲಾಗಿದೆ ಎಂದರು.

ಸಂಚಾರ ಪೊಲೀಸರ ಕಾರ್ಯಾಚರಣೆ ಪುನಾರಂಭ....

ರಸ್ತೆ ಬದಿ ಹಾಗೂ ವೃತ್ತಗಳಲ್ಲಿ ಮೊದಲಿನಂತೆ ಪ್ರತಿನಿತ್ಯ ಆಯಾ ಸಂಚಾರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಪರಿಶೀಲನೆ ಹಾಗೂ ದಂಡ ವಿಧಿಸುವ ಕಾರ್ಯಾಚರಣೆ ನಾಳೆ(ಜು.13)ಯಿಂದ ಮತ್ತೆ ಆರಂಭವಾಗಲಿದೆ ಎಂದು ಮೈಸೂರು ನಗರ ಪೊಲೀಸ್ ಆಯುಕ್ತ ಬಿ.ರಮೇಶ್ ತಿಳಿಸಿದರು.

ವಾಹನ ಸವಾರರನ್ನು ರಸ್ತೆ ಬದಿ ತಡೆದು ವಾಹನದ ದಾಖಲೆ ಹಾಗೂ ಡಿಎಲ್ ಪರಿಶೀಲನೆ ನಡೆಸಿ, ದಂಡ ವಸೂಲಿ ಮಾಡುವುದರಿಂದ ಸಾರ್ವಜನಿಕರಿಗೆ ಕಿರಿಕಿರಿ ಉಂಟಾಗುತ್ತಿದೆ ಎಂಬ ಕೆಲ ದೂರುಗಳು ಕೇಳಿಬಂದಿದ್ದರಿಂದ ತಾತ್ಕಾಲಿಕವಾಗಿ ಸ್ಥಗಿತಗೊಳಿಸಿ, ಸಿಸಿ ಕ್ಯಾಮರಾಗಳ ಮೂಲಕ ಸಂಚಾರ ನಿಯಮ ಉಲ್ಲಂಘಿಸಿದವರ ವಿರುದ್ಧ ಪ್ರಕರಣ ದಾಖಲಿಸಿ ನೋಟಿಸ್ ಕಳುಹಿಸಲು ನಿರ್ಧರಿಸಲಾಗಿತ್ತು. ಆದರೆ, ಇದರಿಂದ ಸಂಚಾರ ನಿಯಮ ಉಲ್ಲಂಘನೆ ಹೆಚ್ಚಾಗಿದೆಯೇ ಹೊರತು ಕಡಿಮೆಯಾಗಿಲ್ಲ.

ತ್ರಿಬಲ್ ರೈಡಿಂಗ್, ಹೆಲ್ಮೆಟ್ ಹಾಕದೆ ದ್ವಿಚಕ್ರ ವಾಹನ ಸವಾರಿ ಮಾಡುವುದು ಜಾಸ್ತಿಯಾಗಿದೆ. ರಸ್ತೆಯಲ್ಲಿ ಸಂಚಾರಿ ಪೊಲೀಸರು ಇಲ್ಲದಿರುವುದರಿಂದ ಭಯವಿಲ್ಲದಂತೆ ಹೆಲ್ಮೆಟ್ ಧರಿಸದೆ ಅಡ್ಡಾವುದಲ್ಲದೇ ವೀಲಿಂಗ್ ಮಾಡುವುದು ಕಂಡು ಬಂದಿದೆ. ಆದ್ದರಿಂದ ಸಂಚಾರ ನಿಯಮ ಉಲ್ಲಂಘನೆ ನಿಯಂತ್ರಣ ಹಾಗೂ ಸುಗಮ ಸಂಚಾರಕ್ಕೆ ಅನುಕೂಲ ಮಾಡಿಕೊಡುವ ನಿಟ್ಟಿನಲ್ಲಿ ಮತ್ತೆ ಕಾರ್ಯಾಚರಣೆ ಆರಂಭಿಸಲಾಗಿದೆ ಎಂದು ಮಾಹಿತಿ ನೀಡಿದರು.

ಜಮೀನು ಮೌಲ್ಯ ಮಾತ್ರ ಪರಿಷ್ಕರಣೆ

ಅವರ ಪ್ರಶ್ನೆಗೆ ಸಚಿವರು ಉತ್ತರಿಸಿದ್ದಾರೆ. ಜಮೀನಿನ ಮೌಲ್ಯ ಪರಿಷ್ಕರಣೆ ನಡೆಸಿ ಕನಿಷ್ಟ ನಾಲ್ಕು ವರ್ಷವಾಗಿದೆ. ಇದರಿಂದ ರೈತರಿಗೆ ಅನ್ಯಾಯವಾಗುತ್ತಿದೆ. ಹೀಗಾಗಿ ಜಮೀನು ಮೌಲ್ಯ ಪರಿಷ್ಕರಣೆ ನಡೆ ಸಲಾಗುವುದು ಎಂದಿದ್ದಾರೆ. ಜಮೀನಿನ ಮೌಲ್ಯ ಪರಿಷ್ಕರಣೆಯ ಆಧಾರದಲ್ಲಿ ರೈತರ ಭೂಮಿಗಳಿಗೆ ಮಾರುಕಟ್ಟೆ ಮೌಲ್ಯ ನಿಗದಿಯಾಗುತ್ತದೆ. ಆದರೆ ರೈತರು ಜಮೀನು ಮಾರಾಟಕ್ಕೆ ಮುಂದಾಗುವಾಗ ಅವರಿಗೆ ನ್ಯಾಯ ಯುತ ಬೆಲೆ ಸಿಗುತ್ತಿಲ್ಲ. ಅಲ್ಲದೆ ಜಮೀನು ಮಾರಾಟ ಪ್ರಕ್ರಿಯೆಯಲ್ಲಿ ಹಣದ ವಹಿ ವಾಟು ಅಧಿಕವಾಗಿದ್ದು, ಕಪ್ಪು ಹಣ ಪರಿವರ್ತನೆಗೂ ಕಾರಣವಾಗಿದೆ. ಹೀಗಾಗಿ ಜಮೀನಿನ ಮೌಲ್ಯವನ್ನು ಶೀಘ್ರದಲ್ಲೇ ಪರಿಷ್ಕರಿಸಲಾಗುವುದು ಎಂದು ತಿಳಿಸಿದ್ದಾರೆ.

ಸಬ್ ರಿಜಿಸ್ಟ್ರಾರ್ ಕಚೇರಿಗಳು ಬಾಡಿಗೆ ಕಟ್ಟಡಗಳಲ್ಲಿ ನಡೆಯುತ್ತಿವೆ. ಶೌಚಾಲಯ ಸೇರಿದಂತೆ ಮೂಲ ಸೌಲಭ್ಯಗಳ ಕೊರತೆ ಇದೆ ಎಂದು ಮುನಿರಾಜುಗೌಡ ಪ್ರಶ್ನೆ ಮಾಡಿದರು. ಇದಕ್ಕೆ ಉತ್ತರಿಸಿದ ಸಚಿವರು, ಸಬ್ ರಿಜಿಸ್ಟ್ರಾರ್ ಕಚೇರಿಗಳಿಗೆ ಅಧಿಕ ಸಂಖ್ಯೆಯಲ್ಲಿ ಜನ ಬರುವ ಕಾರಣ ಶೌಚಾಲಯ ಸೇರಿದಂತೆ ಮೂಲಭೂತ ಸೌಕರ್ಯಗಳ ನಿರ್ವಹಣೆ ಸವಾಲಿನ ಕೆಲಸವಾಗಿದೆ. ಆದರೆ ಮುಂದಿನ ಒಂದು ವರ್ಷದಲ್ಲಿ ಎಲ್ಲಾ ಕಚೇರಿಗಳಲ್ಲೂ ಉತ್ತಮ ಜನಸ್ನೇಹಿ ಸೌಲಭ್ಯ ಕಲ್ಪಿಸಲು ನಿರ್ಧರಿಸಲಾಗಿದೆ. ಪಾಸ್‌ಪೋರ್ಟ್ ಕಚೇರಿಗಳ ಮಾದರಿಯಲ್ಲಿ ಸಬ್ ರಿಜಿಸ್ಟ್ರಾರ್ ಕಚೇರಿಗಳಲ್ಲೂ ಉತ್ತಮ ಮೂಲ ಸೌಲಭ್ಯ ನೀಡಲಾಗುವುದು ಎಂದಿದ್ದಾರೆ.

ಜೈನ ಸಮುದಾಯ ಮೌನ ಪ್ರತಿಭಟನೆ

ರಕ್ಷಣೆ ನೀಡಿ', 'ದಿಗಂಬರ ಜೈನ ಮುನಿಗಳಿಗೆ ರಕ್ಷಣೆ ನೀಡಿ' ಎಂಬಿತ್ಯಾದಿ ಘೋಷಣೆಯ ಫಲಕಗಳನ್ನಿಡಿದು ತಮ್ಮಲ್ಲಿನ ಆಕ್ರೋಶ ಹೊರಹಾಕಿದರು. ಆಚಾರ್ಯ ಶ್ರೀ ತೀರ್ಥಭದ್ರ ಸುರೀಶ್ವರ್ಜಿ ಮಹಾ ರಾಜ್ ಹಾಗೂ 108 ಶ್ರೀ ಪ್ರಗಲಬ್ದ್ ಮುನಿ ಮಹಾರಾಜ್ ಇದೇ ವೇಳೆ ಮೌನ ಪ್ರತಿಭಟನೆಯಲ್ಲಿ ಪಾಲ್ಗೊಂಡು ಹತ್ಯೆಯನ್ನು ಖಂಡಿಸಿದರು. ಇದೇ ಸಂದರ್ಭದಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿದ ಶ್ರೀ ದಿಗಂಬರ ಜೈನ ಸಮಾಜದ ಅಧ್ಯಕ್ಷ ಎಂ.ಆರ್.ಸುನೀಲ್‌ಕುಮಾರ್, ಜೈನ ಮುನಿ ಶ್ರೀ ಕಾಮಕುಮಾರ ನಂದಿ ಮಹಾರಾಜರನ್ನು ಭೀಕರ ವಾಗಿ ಹತ್ಯೆ ಮಾಡಲಾಗಿದೆ. ಈ ಸಂಬಂಧ ಸಮಗ್ರ ತನಿಖೆಯಾಗಬೇಕು. ಆರೋಪಿಗಳಿಗೆ ಕಠಿಣ ಶಿಕ್ಷೆಯಾಗ ಬೇಕು. ಜೊತೆಗೆ ಇಂತಹ ಕೃತ್ಯ ಮರುಕಳಿಸ ಬಾರದು. ನಮ್ಮ ಜೈನ ಮುನಿಗಳಿಗೆ ಸೂಕ್ತ ರಕ್ಷಣೆ ಒದಗಿಸಬೇಕು ಎಂದು ಒತ್ತಾಯಿಸಿದರು. ಜೈನ ಧರ್ಮ ಇಡೀ ವಿಶ್ವಕ್ಕೆ ಅಹಿಂಸಾ ತತ್ವ ಬೋಧಿಸಿದೆ. ಜೈನ ಮುನಿಗಳನ್ನು ಹತ್ಯೆ ಮಾಡಿ ರುವುದು ಸಾಮಾನ್ಯ ಸಂಗತಿಯಲ್ಲ. ನಾವು ಜೈನ ಸಮುದಾಯದವರು ಅಮೂಲ್ಯ ರತ್ನವೊಂದನ್ನು ಕಳೆದುಕೊಂಡಿದ್ದೇವೆ. ಹತ್ಯೆಗೀಡಾದ ನಮ್ಮ ಜೈನ ಮುನಿಗಳು ತಮ್ಮ ಸುತ್ತಮುತ್ತಲ ಜನತೆಗೆ ಸಹಾಯ ಮಾಡುತ್ತಿದ್ದರು. ಯಾವುದೇ ಪಂಥ–ಧರ್ಮಕ್ಕೆ ಸೀಮಿತಗೊಳ್ಳದೇ ತಮ್ಮಲ್ಲಿಗೆ ಬಂದ ಎಲ್ಲರಿಗೂ ನೆರವಾಗುತ್ತಿದ್ದರು ಎಂದು ಸ್ಮರಿಸಿದರು.

ಅನ್ನ–ಔಷಧ ದಾನ ಸೇರಿದಂತೆ ಅನೇಕ ಸೇವಾ ಕಾರ್ಯಗಳ ಮೂಲಕ ಜನ ಸಮುದಾಯಕ್ಕೆ ನೆರವಾ ಗುತ್ತಿದ್ದರು. ಅಂತಹ ವ್ಯಕ್ತಿಯ ಭೀಕರ ಕೊಲೆ ನಡೆದಿ ರುವುದು ಆಘಾತಕಾರಿ. ಇದನ್ನು ಜೈನ ಸಮು ದಾಯ ಅರಗಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ ಎಂದು ಸಮುದಾಯದಲ್ಲಿನ ದುಃಖ ವ್ಯಕ್ತಪಡಿಸಿದರು.

ಬೃಹತ್ ಮೌನ ಮೆರವಣಿಗೆ: ಗಾಂಧಿ ಚೌಕದಲ್ಲಿ ಮೌನ ಪ್ರತಿಭಟನೆ ನಡೆಸಿದ ಜೈನ ಸಮುದಾಯವರು ಬಳಿಕ ಅಲ್ಲಿಂದ ನಿರ್ಗಮಿಸಿ, ಮಲೆ ಮಹಾದೇಶ್ವರ ರಸ್ತೆಯ ಆದಿಶ್ವರ್ ವಾಟಿಕ ಅಪಾರ್ಟ್‌ಮೆಂಟ್ ಎದುರು ಸಮಾವೇಶಗೊಂಡರು. ನಂತರ ಇಲ್ಲಿಂದ ನೂತನ ಜಿಲ್ಲಾಧಿಕಾರಿ ಕಚೇರಿವರೆಗೆ ಮೌನ ಪ್ರತಿ ಭಟನಾ ಮೆರವಣಿಗೆ ನಡೆಸಿದರು. ಆ ಮೂಲಕ ಇದೇ ರಸ್ತೆಯ ಸಿದ್ಧಾರ್ಥನಗರದ ನೂತನ ಜಿಲ್ಲಾಧಿಕಾರಿ ಕಚೇರಿ ಆವರಣ ತಲುಪಿದರು. ಬಳಿಕ ಸ್ಥಳಕ್ಕಾಗಮಿಸಿದ ಅಪರ ಜಿಲ್ಲಾಧಿಕಾರಿ ಕವಿತಾ ರಾಜರಾಂ ಅವರಿಗೆ ತಮ್ಮ ಅಹವಾಲು ಸಲ್ಲಿಸಿ, ಪ್ರತಿಭಟನೆ ಅಂತ್ಯಗೊಳಿಸಿದರು.

ದಿಗಂಬರ ಜೈನ ತೀರ್ಥ ಕ್ಷೇತ್ರ ಸಮಿತಿ ಕರ್ನಾಟಕ ರಾಜ್ಯಾಧ್ಯಕ್ಷ ವಿನೋದ್ ಬಕ್ಲಿವಾಲ್, ಶ್ರೀ ದಿಗಂಬರ ಜೈನ ಸಮಾಜದ ಉಪಾಧ್ಯಕ್ಷ ಬಿ.ಭರತ್‌ರಾಜ್, ಕಾರ್ಯ ದರ್ಶಿ ಪಿ.ಎಸ್.ಲಕ್ಷ್ಮೀಶ್‌ಬಾಬು, ಕೋಶಾಧ್ಯಕ್ಷ ಬಿ.ಜ್ವಾಲೇಂದ್ರ ಪ್ರಸಾದ್, ಸಹ ಕಾರ್ಯದರ್ಶಿ ಎನ್. ಜಿನೇಂದ್ರಪ್ರಕಾಸ್, ಕಾರ್ಯಕಾರಿ ಸಮಿತಿ ಸದಸ್ಯರಾದ ಎಸ್.ಡಿ.ಮಹೇಶ್ ಪ್ರಸಾದ್, ಎ.ಎನ್.ಧರಣೇಂ ದ್ರನ್, ಕೆ.ಚಂದ್ರಶೇಖರ್ ಆರಿಗ, ಭಾರತೀಯ ಜೈನ್ ಮಿಲನ–ವಲಯ 8ರ ಅಧ್ಯಕ್ಷ ಯುವರಾಜ್ ಭಂಡಾರಿ, ಕಾರ್ಯದರ್ಶಿ ರತ್ನರಾಜ್ ಸೇರಿದಂತೆ ಭಾರೀ ಸಂಖ್ಯೆ ಯಲ್ಲಿ ಸಮಸ್ತ ಜೈನ ಸಮುದಾಯದವರು ಭಾಗ ವಹಿಸಿದ್ದರು. ಅಲ್ಲದೆ, ದಕ್ಷಿಣ ಕನ್ನಡ ಮತ್ತು ಕರಾವಳಿ ಜಿಲ್ಲಾ ಸಂಘಗಳ ಒಕ್ಕೂಟದ ಅಧ್ಯಕ್ಷ ಗ್ರೇಶಿಯನ್ ರೋಡ್ರಿಗಸ್, ಕಾರ್ಯದರ್ಶಿ ನಾರಾಯಣ ಹೆಗಡೆ ಮತ್ತಿತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಸರ್ಕಾರಕ್ಕೆ ಮನವಿ

ಜೈನ ಮುನಿಗಳನ್ನು ಹತ್ಯೆಗೈದಿರುವ ಹಂತಕರಿಗೆ ಅತ್ಯಂತ ಕಠಿಣ ಶಿಕ್ಷೆ ವಿಧಿಸುವಂತೆ ಅಪರ ಜಿಲ್ಲಾಧಿಕಾರಿಗಳಿಗೆ ಸಲ್ಲಿಸಿದ ಮನವಿಯಲ್ಲಿ ರಾಜ್ಯ ಸರ್ಕಾರವನ್ನು (ಗೃಹ ಸಚಿವ ಡಾ.ಜಿ.ಪರಮೇಶ್ವರ್) ಒತ್ತಾಯಿಸಲಾಗಿದೆ. ವಿಶ್ವದಲ್ಲಿ ಮಾನವ ಕುಲಕ್ಕೆ ಅಹಿಂಸಾ ಧರ್ಮವನ್ನು ಸಾರಿದ ಅತೀ ಪುರಾತನ ಧರ್ಮ 'ಜೈನ ಧರ್ಮ'. ಇದರ ಅನುಯಾಯಿಗಳು ಯಾರಿಗೂ ಹಿಂಸಿಸದೇ ತಮ್ಮ ಧರ್ಮವನ್ನು ಪಾಲಿಸಿಕೊಂಡು ಬರುತ್ತಿದ್ದಾರೆ ಅನಾದಿಕಾಲದಿಂದಲೂ ಶೈಕ್ಷಣಿಕ, ಸಾಮಾಜಿಕ ಮತ್ತು ಧಾರ್ಮಿಕವಾಗಿ ಜೈನ ಸಮುದಾಯ ಸೇವಾನಿರತವಾಗಿದೆ. ಜಗತ್ತಿಗೆ ಅಹಿಂಸೆ ಮತ್ತು ಶಾಂತಿ ತತ್ವವನ್ನು ಬೋಧಿಸಿದ್ದು ಜೈನ ಧರ್ಮ. ಉತ್ಕೃಷ್ಟವಾದ ಜೈನ ಧರ್ಮದ ತತ್ವಗಳನ್ನು ತಮ್ಮ ಜೀವನ ಪರ್ಯಾಂತ ಮಹಾವ್ರತಗಳಂತೆ ಜೈನ ಮುನಿಗಳು ಪಾಲಿಸುತ್ತ ಬರುತ್ತಿದ್ದಾರೆ. ಈ ನಡುವೆ ಬೆಳಗಾವಿ ಜಿಲ್ಲೆಯಲ್ಲಿ ಆಚಾರ್ಯ ಶ್ರೀ ಕಾಮಕುಮಾರ ನಂದಿ ಮಹಾರಾಜರನ್ನು ಅತ್ಯಂತ ಭೀಕರವಾಗಿ ಹತ್ಯೆ ಮಾಡಲಾಗಿದೆ. ಇವರನ್ನು ಹತ್ಯೆ ಮಾಡಿದ ಹಂತರಿಗೆ ಕಠಿಣ ಶಿಕ್ಷೆಯಾಗ ಬೇಕು. ಅಧ್ಯಾತ್ಮ ಪ್ರವರ್ತಕರು, ಶಾಂತಿಪ್ರಿಯರು ಮತ್ತು ಅಹಿಂಸಾ ಪ್ರತಿಪಾದಕರೂ ಆದ ಜೈನ ಮುನಿಗಳಿಗೆ ಸೂಕ್ತ ಭದ್ರತೆ ಒದಗಿಸಬೇಕೆಂದು ಮನವಿ ಪತ್ರದಲ್ಲಿ ಕೋರಲಾಗಿದೆ.

ನರೇಗಾ ಯೋಜನೆಯಡಿ ನಿರ್ದಿಷ್ಟ ಪ್ರಗತಿ ಸಾಧಿಸುವಂತೆ ಗ್ರಾಪಂಗಳಿಗೆ ಜಿಪಂ ಸಿಇಓ ಸೂಚನೆ



ಮೈಸೂರು, ಜು.12(ಎಂಕೆ)– ನರೇಗಾ ಯೋಜನೆಯಡಿ ಕಡಿಮೆ ಮಾನವ ದಿನಗಳನ್ನು ಸಾಧಿಸಿರುವ ಗ್ರಾಮ ಪಂಚಾಯಿತಿಗಳು ಹೆಚ್ಚು ಮಾನವ ದಿನಗಳನ್ನು ಸಾದಿಸುವಂತೆ ಜಿಪಂ ಸಿಇಓ ಕೆ.ಎಂ.ಗಾಯಿತ್ರಿ ಸೂಚನೆ ನೀಡಿದರು.

ಜಿಪಂ ಮಿನಿ ಸಭಾಂಗಣದಲ್ಲಿ ಬುಧವಾರ ಎಲ್ಲಾ ತಾಲೂಕು ಕಾರ್ಯನಿರ್ವಾಹಕ ಅಧಿಕಾರಿಗಳೊಂದಿಗೆ ಮಾಸಿಕ ಪ್ರಗತಿ ಪರಿಶೀಲನಾ ಸಭೆ ನಡೆಸಿದ ಅವರು, ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಕೈಗೊಂಡಿರುವ ಕಾಮಗಾರಿಗಳ ಪ್ರಗತಿ, ಅಮೃತ ಸರೋವರ ಯೋಜನೆ ಪ್ರಗತಿ, ಪಂಚ ಅಭಿಯಾನ, ಗೋಮಾಳ ಹಾಗೂ ಸ್ವಚ್ಛ ಭಾರತ್ ಅಭಿಯಾನ, ಘನತ್ಯಾಜ್ಯ ವಿಲೇವಾರಿ ಘಟಕಗಳ ಕಾಮಗಾರಿ ಪೂರ್ಣಗೊಳಿಸುವ ಕುರಿತು ಚರ್ಚಿಸಿದರು. ಘನ ತ್ಯಾಜ್ಯ ವಿಲೇವಾರಿ ಸಂಬಂಧ ತರಬೇತಿ ಪಡೆದಿರುವ ಸ್ವಸಹಾಯ ಸಂಘದ ಮಹಿಳೆಯರಿಗೆ ಸ್ವಚ್ಛ ಭಾರತ್ ಮಿಷನ್ ಯೋಜನೆಯಿಂದ ಕಸ ವಿಲೇವಾರಿಗೆ ವಾಹನ ಚಾಲನೆಗೆ ಅವಕಾಶ ನೀಡುವುದು. ಒಂದು ವಾರದೊಳಗೆ ಎಲ್ಲಾ ಗ್ರಾಪಂಗಳನ್ನು ಡಿಜಿಟಲ್ ಗ್ರಂಥಾಲಯಗಳನ್ನಾಗಿ ಮಾರ್ಪಾಡು ಮಾಡಿ, ಮಕ್ಕಳ ನೊಂದಣಿ ಮಾಡಿಸುವುದು. ಬಯೋಮೆಟ್ರಿಕ್ ಮೂಲಕ ಹಾಜರಾತಿ ಪರಿಶೀಲಿಸಿ ವೇತನ ಪಾವತಿಸುವಂತೆ ತಿಳಿಸಿದರಲ್ಲದೆ ಬಾಪೂಜಿ ಸೇವಾ ಕೇಂದ್ರದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಗೃಹ ಜ್ಯೋತಿ ಅರ್ಜಿಗಳನ್ನು ಹಾಕುವಂತೆ ಕಟ್ಟುನಿಟ್ಟಿನ ಕ್ರಮಹಿಸುವಂತೆ ಸೂಚಿಸಿದರು. ಜಿಪಂ ಉಪಕಾರ್ಯದರ್ಶಿ(ಅಭಿವೃದ್ಧಿ) ಡಾ.ಎಂ. ಕೃಷ್ಣರಾಜು, ಮುಖ್ಯ ಯೋಜನಾಧಿಕಾರಿ ಸೌಮಿತ್ರ, ಮುಖ್ಯ ಲೆಕ್ಕಾಧಿಕಾರಿ ಹೆಚ್.ಇನಂದಾ, ಯೋಜನಾ ನಿರ್ದೇಶಕರಾದ ಸವಿತಾ ಮತ್ತಿತರರಿದ್ದರು.

ಸರ್ವ ಸದಸ್ಯರ ಸಭೆ

ಮೈಸೂರು, ಜು.12–ಮೈಸೂರಿನ ದೇವಮಲ್ಲು ಕ್ಷತ್ರಿಯ ಮತ ಸಂಘದ 2022–23ನೇ ಸಾಲಿನ ಸರ್ವ ಸದಸ್ಯರ ಸಭೆಯನ್ನು ಜು. 16 ರಂದು ಬೆಳಗ್ಗೆ 11.30 ಗಂಟೆಗೆ ಸಂಘದ ಆವರಣದಲ್ಲಿ ಏರ್ಪಡಿಸಲಾಗಿದೆ. ಇದೇ ವೇಳೆ ಸಂಘದ ಸದಸ್ಯರ ಮಕ್ಕಳಿಗೆ ಪ್ರೋತ್ಸಾಹ ಧನವನ್ನು ನೀಡಲಾಗುವುದು. 1ನೇ ತರಗತಿಯಿಂದ 7ನೇ ತರಗತಿಯವರೆಗೆ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ರೂ. 500, 8ನೇ ತರಗತಿಯಿಂದ ಪಿಯುಸಿ, ಡಿಪ್ಲೊಮಾ, ಐಟಿಐ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ರೂ. 1000 ಹಾಗೂ ಪದವಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ರೂ. 1500ಗಳ ಪ್ರೋತ್ಸಾಹ ಧನ ನೀಡಲಾಗುವುದು ಎಂದು ಸಂಘದ ಅಧ್ಯಕ್ಷ ಎಸ್. ಚಂದ್ರಶೇಖರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜನರನ್ನು ಬೆಚ್ಚಿ ಬೀಳಿಸಿದ ನಾಗರಹಾವು



ನಾಪೋಕ್ಲು, ಜು.12– ಸಮೀಪದ ಪಾರಾಣೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಮೂಕಂಡಬಾಣೆ ಎಂಬಲ್ಲಿ ಅಂಗನವಾಡಿ ಸಮೀಪ ಬುಧವಾರ ನಾಗರಹಾವು ಕಾಣಿಸಿಕೊಂಡು ಪುಟಾಣಿ ಮಕ್ಕಳು ಹಾಗೂ ಸ್ಥಳೀಯರು ಭಯಭೀತರಾದರು. ಏಕಾಏಕಿ ಕಾಣಿಸಿ ಕೊಂಡ ನಾಗರ ಹಾವನ್ನು ಸ್ಥಳೀಯರೇ ಚಾಣಾಕ್ಷತನ ದಿಂದ ಹಿಡಿದು ಕಾಡಿಗೆ ಬಿಟ್ಟರು..

ಜೂಜಾಡುತ್ತಿದ್ದ ಏಳು ಮಂದಿ ಬಂಧನ

ನಾಪೋಕ್ಲು, ಜು.12– ಸಮೀಪದ ಕೊಳಕೇರಿ ಗ್ರಾಮದಲ್ಲಿ ಅಕ್ರಮವಾಗಿ ಜೂಜಾಟವಾಡುತ್ತಿದ್ದ ಏಳು ಮಂದಿಯನ್ನು ನಗದು ಸಹಿತ ನಾಪೋಕ್ಲು ಪೊಲೀಸರು ಬಂಧಿಸಿದ್ದಾರೆ.

ನಾಪೋಕ್ಲು ಠಾಣಾ ಸರಹದ್ದಿನ ಕೊಳಕೇರಿಯಲ್ಲಿ ಜೂಜಾಟವಾಡು ತ್ತಿರುವ ಕುರಿತು ಖಚಿತ ಮಾಹಿತಿ ದೊರೆತ ಹಿನ್ನೆಲೆಯಲ್ಲಿ ಅಧಿಕಾರಿ ಗಳು ಹಾಗೂ ಸಿಬ್ಬಂದಿಗಳು ದಾಳಿ ನಡೆಸಿ ಆರೋಪಿಗಳ ಬಳಿಯಿಂದ 8540 ರೂ. ನಗದು ವಶಕ್ಕೆ ಪಡೆದಿದ್ದು ಕಾನೂನು ಕ್ರಮ ಕೈಗೊಂಡಿದ್ದಾರೆ.

ವಾಹನಗಳ ಮೇಲೆ ಕಾಡಾನೆ ದಾಳಿ: ವಿದ್ಯಾರ್ಥಿನಿಗೆ ಗಾಯ

ಕಾರ್ಮಿಕರ ಕೂಗಾಟದಿಂದ ಕಾಡು ಸೇರಿದ ಆನೆ, ಕೂಡಲೇ ಸ್ಪಂದಿಸಿದ ಶಾಸಕ ಪೊನ್ನಣ್ಣ, ಗಾಯಾಳು ಆರೋಗ್ಯ ವಿಚಾರಿಸಿದ ಸಂಕೇತ್‌ಪೂವಯ್ಯ

ಮಡಿಕೇರಿ, ಜು.12– ತಿತಿಮತಿ ಗ್ರಾಮದ ದೊಡ್ಡರೇಷ್ಮೆ ಬಳಿ ಕಾಡಾನೆಯೊಂದು ಎರಡು ವಾಹನಗಳ ಮೇಲೆ ದಾಳಿ ನಡೆಸಿದ ಪರಿಣಾಮ ಕಾಲೇಜು ವಿದ್ಯಾರ್ಥಿನಿ ಗಾಯಗೊಂಡಿರುವ ಘಟನೆ ಸಂಭವಿಸಿದೆ.

ತಿತಿಮತಿಯಿಂದ ದೊಡ್ಡ ರೇಷ್ಮೆ ಕಡೆಗೆ ಕಾರ್ಮಿಕರನ್ನು ಕರೆ ತರುತ್ತಿದ್ದ ಟ್ಯಾಕ್ಸಿ ಮತ್ತು ಮಗಳನ್ನು ಕಾಲೇಜಿಗೆ ಬಿಡಲು ಬರುತ್ತಿದ್ದ ಓಮ್ನಿ ವ್ಯಾನ್ ಮೇಲೆ ಏಕಾಏಕಿ ಕಾಡಾನೆ ದಾಳಿ ನಡೆಸಿದ್ದು, ಕಾಲೇಜು ವಿದ್ಯಾರ್ಥಿನಿಯ ಕಾಲಿಗೆ ಗಾಯಗಳಾಗಿದೆ.

ಬೆಳಗಿನ ಜಾವ ಟ್ಯಾಕ್ಸಿಯಲ್ಲಿ ಕಾರ್ಮಿಕರನ್ನು ಕರೆ ತರುತ್ತಿದ್ದ ವಾಹನದ ಮೇಲೆ ಮೊದಲು ಕಾಡಾನೆ ದಾಳಿ ನಡೆಸಿದ್ದು, ಕಾರ್ಮಿಕರು ಬೊಬ್ಬೆ ಹಾಕಿದ ಸಂದರ್ಭ ಕಾಡಾನೆ ಕಾಡಿನಲ್ಲಿ ಮರೆಯಾಗಿದೆ. ಈ ಘಟನೆ ನಡೆದು ಕೆಲವೇ ಕ್ಷಣಗಳಲ್ಲಿ ಇದೇ ರಸ್ತೆಯಲ್ಲಿ ಓಮ್ನಿ ವ್ಯಾನ್‌ನಲ್ಲಿ ಮಣಿ ಎಂಬುವರು ತಮ್ಮ ಮಗಳು ಸುಚಿತ್ರ ಅವರನ್ನು ಕಾಲೇಜಿಗೆ ಬಿಡಲು ಬರುತ್ತಿದ್ದು, ಈ ವೇಳೆ ಕಾಡಾನೆ ಮತ್ತೆ ದಾಳಿ ಮಾಡಿದೆ.

ಇದರಿಂದ ಎರಡೂ ವಾಹನಗಳ ಗಾಜು ಒಡೆಯಲ್ಪಟ್ಟಿದ್ದು, ವ್ಯಾನ್‌ನಲ್ಲಿದ್ದ ವಿದ್ಯಾರ್ಥಿನಿ ಸುಚಿತ್ರ ಅವರ ಕಾಲಿಗೆ ಗಾಯಗಳಾಗಿವೆ. ಗಾಯಾಳು ವಿದ್ಯಾರ್ಥಿನಿಯನ್ನು ಗೋಣಿಕೊಪ್ಪ ಸರಕಾರಿ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದೆ.

ಸಂಕೇತ್ ಅಭಯ: ಕಾಡಾನೆ ದಾಳಿ ಕುರಿತು ಮಾಹಿತಿ ಪಡೆದ ಕೆಪಿಸಿಸಿ ವಕ್ತಾರ ಮತ್ತು ಸಮಾಜ ಸೇವಕ ಸಂಕೇತ್ ಕ್ಷೇತ್ರದ ಶಾಸಕ ಎ.ಎಸ್. ಪೊನ್ನಣ್ಣ ಅವರಿಗೆ ಘಟನೆ ಕುರಿತು ವಿವರಿಸಿದರು. ನಂತರ ಶಾಸಕರ ಸೂಚನೆಯಂತೆ ಆಸ್ಪತ್ರೆಗೆ ತೆರಳಿ ಗಾಯಾಳು ವಿದ್ಯಾರ್ಥಿನಿಯ ಆರೋಗ್ಯ ವಿಚಾರಿಸಿದ ಸಂಕೇತ್ ಪೂವಯ್ಯ ವಿದ್ಯಾರ್ಥಿನಿಗೆ ಧೈರ್ಯ ತುಂಬಿದರು.







ಪುನರ್ವಸತಿಗೆ ಆದೇಶ: ತಿತಿಮತಿ ಭಾಗದಲ್ಲಿ ಕಾಡಾನೆ ಉಪಟಳ ಹೆಚ್ಚಿದ್ದು, ಸಾರ್ವಜನಿಕರ ಆಸ್ತಿಪಾಸ್ತಿಗೆ ಹಾನಿ ಮಾಡುತ್ತಿರುವ ಕಾಡಾನೆಯನ್ನು ಮೊದಲು ಗುರುತಿಸಬೇಕು. ಬಳಿಕ ಆನೆ ಕಾರ್ಯಾಚರಣೆ ಮೂಲಕ ಸೆರೆ ಹಿಡಿದು ಕಾಡಾನೆಗೆ ಪುನರ್ವಸತಿ ಕಲ್ಪಿಸಲು ಶಾಸಕ ಎ.ಎಸ್. ಪೊನ್ನಣ್ಣ ಅರಣ್ಯ ಇಲಾಖೆ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

ಮಾತ್ರವಲ್ಲದೇ, ಗಾಯಗೊಂಡಿರುವ ವಿದ್ಯಾರ್ಥಿನಿಯ ವೈದ್ಯಕೀಯ ವೆಚ್ಚವನ್ನು ಅರಣ್ಯ ಇಲಾಖೆ ಭರಿಸಬೇಕು, ಉತ್ತಮ ಆರೋಗ್ಯ ಸೇವೆ ಒದಗಿಸಬೇಕೆಂದು ಅರಣ್ಯ ಅಧಿಕಾರಿಗಳಿಗೆ ಶಾಸಕ ಪೊನ್ನಣ್ಣ ಸೂಚಿಸಿದ್ದಾರೆ.

ಆಸ್ಪತ್ರೆಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಸಂಕೇತ್ ಪೂವಯ್ಯ, ಜಿಲ್ಲೆಯಲ್ಲಿ ಮಿತಿ ಮೀರಿರುವ ಕಾಡಾನೆ ಹಾವಳಿ ತಡೆಯುವ ಸಲುವಾಗಿ ವೈಜ್ಞಾನಿಕ ವಿಧಾನಗಳನ್ನು ಜಾರಿಗೊಳಿಸಲು ಶಾಸಕ ಎ.ಎಸ್. ಪೊನ್ನಣ್ಣ ಮುಂದಾಗಿದ್ದಾರೆ. ಇದರಿಂದ ಕಾಡಾನೆ ಉಪಟಳಕ್ಕೆ ಕಡಿವಾಣ ಬೀಳಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು. ಘಟನೆಯಲ್ಲಿ ಗಾಯಗೊಂಡ ವಿದ್ಯಾರ್ಥಿನಿಯೊಂದಿಗೆ ಶಾಸಕ ಪೊನ್ನಣ್ಣ ಅವರು ದೂರವಾಣಿ ಮೂಲಕ ಮಾತನಾಡಿ ಧೈರ್ಯ ತುಂಬಿದ್ದಾರೆ. ವಿದ್ಯಾರ್ಥಿನಿ ಚಿಕಿತ್ಸೆಗೆ ಸ್ಪಂದಿಸುತ್ತಿದ್ದಾಳೆ ಎಂದು ಸಂಕೇತ್ ಪೂವಯ್ಯ ಮಾಹಿತಿ ನೀಡಿದರು.

ಕೊಡಗು ಜಿಲ್ಲೆಯಲ್ಲಿ ಮಳೆ ಕ್ಷೀಣ

ಮಂಜು ಮುಸುಕಿದ ವಾತಾವರಣ, ಮೈಕೊರೆಯುವ ಚಳಿ

ಮಡಿಕೇರಿ, ಜು.12– ಕೊಡಗು ಜಿಲ್ಲೆಯಲ್ಲಿ ಮಳೆ ಕ್ಷೀಣಿಸಿದ್ದು, ಕೆಲವೆಡೆ ಚದುರಿದಂತೆ ಅಲ್ಪ ಪ್ರಮಾಣದ ಮಳೆಯಾದ ಬಗ್ಗೆ ವರದಿಯಾಗಿದೆ.

ಈ ನಡುವೆ ಹವಾಮಾನ ಇಲಾಖೆ ಮಾಹಿತಿಯನ್ನಾಧರಿಸಿ ಗೋಣಿಕೊಪ್ಪ ಕೃಷಿ ವಿಜ್ಞಾನ ಕೇಂದ್ರ ಜು.13 ಮತ್ತು 14ರಂದು ಮಡಿಕೇರಿ ತಾಲೂಕು, ಸೋಮವಾರಪೇಟೆ ತಾಲೂಕಿನಾದ್ಯಂತ ಹಾಗೂ ಜಿಲ್ಲೆಯ ಕೆಲವೆಡೆ ಭಾರೀ ಮಳೆ ಸುರಿಯಲಿದೆ ಎಂದು ಮುನ್ಸೂಚನೆ ನೀಡಿದೆ.

ಪ್ರಸ್ತುತ ಜಿಲ್ಲೆಯಲ್ಲಿ ದಟ್ಟ ಮಂಜು ಮುಸುಕಿದ ಹವಾಮಾನ ಸಹಿತ ಮೈ ಕೊರೆಯುವ ಚಳಿಯ ವಾತಾವರಣ ಕಂಡು ಬರುತ್ತಿದೆ. ಕಳೆದ 3 ದಿನಗಳಿಂದ ಮಳೆ ಪ್ರಮಾಣ ಕುಸಿತವಾಗಿರುವ ಹಿನ್ನೆಲೆಯಲ್ಲಿ ನದಿಗಳಲ್ಲಿ ಸಾಧಾರಣ ಪ್ರಮಾಣದ ನೀರಿನ ಹರಿವು ಕಂಡು ಬರುತ್ತಿದೆ. ಕಾವೇರಿ, ಹಟ್ಟಿಹೊಳೆ, ಮಾದಾಪುರ ಹೊಳೆಗಳಲ್ಲೂ ನೀರಿನ ಪ್ರಮಾಣ ಇಳಿಕೆಯಾಗಿದೆ. ಹೀಗಾಗಿ ನದಿ ಬದಿ ನಿವಾಸಿಗಳು ಸದ್ಯಕ್ಕೆ ತುಸು ನಿಟ್ಟಿಸಿರು ಬಿಡುವಂತಾಗಿದೆ.

ಹಾರಂಗಿ ಮದಿ: ಹಾರಂಗಿ ಜಲಾಶಯದ ಜಲ ಮೂಲಗಳಲ್ಲಿ ನೀರಿನ ಪ್ರಮಾಣ ಕುಸಿತವಾಗಿರುವ ಹಿನ್ನೆಲೆಯಲ್ಲಿ ಜಲಾ

ಅಲ್ಲಲ್ಲಿ ಚದುರಿದಂತೆ ಅಲ್ಪ ಪ್ರಮಾಣದ ಮಳೆ

ಶಯದ ಒಳಹರಿವು ಕುಸಿತ ಕಂಡಿದೆ. 2859 ಅಡಿ ನೀರಿನ ಸಂಗ್ರಹ ಸಾಮರ್ಥ್ಯ ಹೊಂದಿರುವ ಜಲಾಶಯದಲ್ಲಿ ಪ್ರಸ್ತುತ 2840.17 ಅಡಿ ನೀರಿ ಸಂಗ್ರಹವಿದೆ. ಇಂದು 946 ಕ್ಯುಸೆಕ್ ಪ್ರಮಾಣದ ನೀರಿನ ಒಳ ಹರಿವು ದಾಖಲಾಗಿದ್ದರೆ, ಕಳೆದ ವರ್ಷ ಇದೇ ದಿನದಂದು ಒಟ್ಟು 18,251 ಕ್ಯುಸೆಕ್ ನೀರಿನ ಒಳಹರಿವು ಕಂಡು ಬಂದಿತ್ತು. ಆ ಸಂದರ್ಭ ಜಲಾಶಯದ ಸುರಕ್ಷತೆ ಮತ್ತು ನದಿ ಪಾತ್ರದಲ್ಲಿ ಪ್ರವಾಹ ಉಂಟಾಗುವುದನ್ನು ತಡೆಯುವ ಸಲುವಾಗಿ ನದಿಗೆ 18,625 ಕ್ಯುಸೆಕ್ ಪ್ರಮಾಣದ ನೀರನ್ನು ಹರಿಸಲಾಗಿತ್ತು ಎಂಬುದನ್ನ ಇಲ್ಲಿ ಸ್ಮರಿಸಬಹುದು.

ಮಳೆ ವಿವರ: ಬುಧವಾರ ಬೆಳಗ್ಗೆ 8.30ಕ್ಕೆ ಕೊನೆಗೊಂಡಂತೆ ಜಿಲ್ಲೆಯಲ್ಲಿ ಕಳೆದ 24 ಗಂಟೆ ಅವಧಿಯಲ್ಲಿ ಸರಾಸರಿ 5.80 ಮಿ.ಮೀ. ಮಳೆಯಾಗಿದೆ. ಕಳೆದ ವರ್ಷ ಇದೇ ದಿನ 72.70 ಮಿ.ಮೀ. ಮಳೆಯಾಗಿತ್ತು. ಜನವರಿಯಿಂದ ಇಲ್ಲಿಯವರೆಗಿನ ಮಳೆ 831.30 ಮಿ.ಮೀ ಮಳೆ ಸುರಿದಿದ್ದರೆ, ಕಳೆದ ವರ್ಷ ಇದೇ ಅವಧಿಯಲ್ಲಿ 1421.10 ಮಿ.ಮೀ ಮಳೆಯಾಗಿತ್ತು.

ಇಂದಿನಿಂದ ತಾತ್ಕಾಲಿಕ ಸತ್ಯಾಪನೆ ಮುದ್ರೆ ಶಿಬಿರ

ಮಡಿಕೇರಿ, ಜು.12– ಕಾನೂನು ಮಾಪನಶಾಸ್ತ್ರ ಇಲಾಖೆ ವತಿಯಿಂದ ತಾತ್ಕಾಲಿಕ ಸತ್ಯಾಪನೆ ಮುದ್ರೆ ಶಿಬಿರವು ಜು.13 ರಿಂದ 21 ರವರೆಗೆ ಶ್ರೀಮಂಗಲದ ನಾಲ್ಕೇರಿ ಜಂಕ್ಷನ್‌ನ ಮಣಿ ಕಾಂಪ್ಲೆಕ್ಸ್‌ನಲ್ಲಿ ನಡೆಯಲಿದೆ. ತಮ್ಮಲ್ಲಿ ಉಪಯೋಗಿಸುವ ಅಳತೆ, ತೂಕ ಮತ್ತು ತೂಕದ ಸಾಧನಗಳನ್ನು ಹಾಜರುಪಡಿಸಿ ಸತ್ಯಾಪನೆ ಮುದ್ರೆ ಮಾಡಿಸಿಕೊಳ್ಳುವಂತೆ ಕಾನೂನು ಮಾಪನಶಾಸ್ತ್ರ ನಿರೀಕ್ಷಕರು ತಿಳಿಸಿದ್ದಾರೆ.

ತೇಗದ ಮರದ ನಾಟಾಗಳನ್ನು ಸಾಗಿಸುತ್ತಿದ್ದ ಮೂವರ ಸೆರೆ

ಬೆಲೆ ಬಾಳುವ ನಾಟಾಗಳ ವಶ, ಮತ್ತಿಬ್ಬರು ಆರೋಪಿಗಳು ಪರಾರಿ



ಕುಶಾಲನಗರ, ಜು.12– ತಾಲೂಕಿನ ಯಡವನಾಡು ಮೀಸಲು ಅರಣ್ಯ ಪ್ರದೇಶದಿಂದ ಅಕ್ರಮವಾಗಿ ತೇಗದ ಮರವನ್ನು ಕಡಿದು ನಾಟಾಗಳಾಗಿ ಪರಿವರ್ತಿಸಿ ಸಾಗಾಟ ಮಾಡುತ್ತಿದ್ದ ತಂಡದ ಮೇಲೆ ಅರಣ್ಯಾಧಿಕಾರಿಗಳು ದಾಳಿ ಮಾಡಿ ಲಕ್ಷಾಂತರ ಮೌಲ್ಯದ ತೇಗದ ನಾಟಾ ಹಾಗೂ ವಾಹನವನ್ನು ವಶಪಡಿಸಿಕೊಂಡಿದ್ದಾರೆ.

ಈ ಅಕ್ರಮ ಸಾಗಾಟ ನಡೆಸುತ್ತಿದ್ದ ಯಡವನಾಡು ಗ್ರಾಮದ ತೀರ್ಥನಂದ ಅಲಿಯಾಸ್ ಸಂತೋಷ್, ಯತೀಶ್ ಹಾಗೂ ಬಿ.ಸಿ. ತೀರ್ಥನಂದ ಅವರನ್ನು ಬಂಧಿಸಲಾಗಿದೆ. ಅದೇ ಗ್ರಾಮದ ವಿನು, ಶರತ್ ತಲೆ ಮರೆಸಿಕೊಂಡಿದ್ದಾರೆ. ಸೋಮವಾರಪೇಟೆ ವಲಯದ ಹುದುಗೂರು ಶಾಖೆಯ ಯಡವನಾಡು ಅರಣ್ಯ ಪ್ರದೇಶದಲ್ಲಿ ತೇಗದ ಮರವನ್ನು ಕಡಿದು ಅದರ ನಾಟಾಗಳನ್ನು ಪಿಕ್‌ಅಪ್ ವಾಹನದಲ್ಲಿ ಸಾಗಿಸುತ್ತಿದ್ದ ವೇಳೆ ಖಚಿತ ಮಾಹಿತಿ ಮೇರೆಗೆ ಹುದುಗೂರು ಶಾಖೆಯ ಅರಣ್ಯಾಧಿಕಾರಿ ಹಾಗೂ ಸಿಬ್ಬಂದಿಗಳು ಕಾರ್ಯಾಚರಣೆ ನಡೆಸಿ ಮರದ ನಾಟಾ ಹಾಗೂ ಸಾಗಾಟಕ್ಕೆ ಬಳಸಿದ್ದ ವಾಹನ, ಮೂವರು ಆರೋಪಿಗಳನ್ನು ವಶಕ್ಕೆ ಪಡೆದಿದ್ದಾರೆ.

ಮಡಿಕೇರಿ ವಿಭಾಗದ ಅರಣ್ಯ ಸಂರಕ್ಷಣಾಧಿಕಾರಿ ಕೆ.ಟಿ.ಪೂವಯ್ಯ ಹಾಗೂ ಸೋಮವಾರಪೇಟೆ ಉಪವಿಭಾಗದ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಗೋಪಾಲ್ ಮಾರ್ಗದರ್ಶನದಲ್ಲಿ ಸೋಮವಾರಪೇಟೆ ವಲಯ ಅರಣ್ಯಾಧಿಕಾರಿ ಎಚ್.ಪಿ.ಚೇತನ್ ಹಾಗೂ ಹುದುಗೂರು ಶಾಖೆಯ ಉಪವಲಯ ಅರಣ್ಯಾಧಿಕಾರಿ ಎಸ್.ಬಿ.ಸತೀಶ್ ಕುಮಾರ್ ನೇತೃತ್ವದಲ್ಲಿ ಕಾರ್ಯಾಚರಣೆ ನಡೆಸಿ ಮರಗಳ್ಳರನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಕಾರ್ಯಾಚರಣೆಯಲ್ಲಿ ಉಪವಲಯ ಅರಣ್ಯಾಧಿಕಾರಿಗಳಾದ ಭರತ್, ಎಂ.ಕೆ.ಮನು, ಅರಣ್ಯ ಪಾಲಕರಾದ ಪಿ.ಕೆ.ಚೇತನ್, ಸಿದ್ದರಾಜು, ಭೀಮಣ್ಣ, ಅರಣ್ಯ ವೀಕ್ಷಕರಾದ ಡಿಲಕ್ಸ್, ದೀಕ್ಷಿತ್ ಹಾಗೂ ಚಾಲಕ ನಂದೀಶ್ ಪಾಲ್ಗೊಂಡಿದ್ದರು.

ಮಡಿಕೇರಿಯಲ್ಲಿ ಕಾಂಗ್ರೆಸ್ ಮೌನ ಪ್ರತಿಭಟನೆ

ರಾಹುಲ್‌ಗಾಂಧಿಗೆ ನೈತಿಕ ಬೆಂಬಲ, ಕೇಂದ್ರದ ವಿರುದ್ಧ ಆಕ್ರೋಶ



ಮಡಿಕೇರಿ, ಜು.12– ಎಐಸಿಸಿ ಮುಖಂಡ ರಾಹುಲ್ ಗಾಂಧಿ ವಿರುದ್ಧ ಕೇಂದ್ರದ ಬಿಜೆಪಿ ನೇತೃತ್ವದ ಸರ್ಕಾರ ರಾಜಕೀಯ ಷಡ್ಯಂತ್ರ ನಡೆಸುತ್ತಿದೆ ಎಂದು ಆರೋಪಿಸಿ ಕೊಡಗು ಜಿಲ್ಲಾ ಕಾಂಗ್ರೆಸ್ ಸಮಿತಿ ವತಿಯಿಂದ ಮಡಿಕೇರಿಯಲ್ಲಿ ಮೌನ ಪ್ರತಿಭಟನೆ ನಡೆಸಲಾಯಿತು.

ಮಡಿಕೇರಿ ನಗರದ ಗಾಂಧಿ ಮೈದಾನದಲ್ಲಿ ಜಮಾಯಿಸಿದ ಕಾಂಗ್ರೆಸ್ ಪ್ರಮುಖರು ಹಾಗೂ ಕಾರ್ಯಕರ್ತರು, ರಾಹುಲ್ ಗಾಂಧಿ ಅವರಿಗೆ ನೈತಿಕ ಬೆಂಬಲ ಸೂಚಿಸಿ, ಕೇಂದ್ರ ಸರ್ಕಾರದ ನಡೆಯನ್ನು ಖಂಡಿಸಿದರು. ರಾಹುಲ್ ಗಾಂಧಿ ವಿರುದ್ಧ ರಾಜಕೀಯ ಪ್ರೇರಿತ ದುರುದ್ದೇಶದ ದೂರುಗಳನ್ನು ದಾಖಲಿಸಿಕೊಳ್ಳಲಾಗಿದೆ ಎಂದು ಆರೋಪಿಸಿ ಭಿತ್ತಿಪತ್ರಗಳನ್ನು ಪ್ರದರ್ಶಿಸಿದರು.

ಈ ಸಂದರ್ಭ ಮಾತನಾಡಿದ ಕಾಂಗ್ರೆಸ್ ಪ್ರಚಾರ ಸಮಿತಿಯ ಅಧ್ಯಕ್ಷ ಟಿ.ಪಿ.ರಮೇಶ್, ಎಐಸಿಸಿ ಮುಖಂಡ ರಾಹುಲ್ ಗಾಂಧಿ ವಿರುದ್ಧ ಕೇಂದ್ರದ ಬಿಜೆಪಿ ನೇತೃತ್ವದ ಸರ್ಕಾರ ರಾಜಕೀಯ ಷಡ್ಯಂತ್ರ ನಡೆಸುತ್ತಿದೆ ಎಂದು ಆರೋಪಿಸಿದರಲ್ಲದೇ, ಕೇಂದ್ರ ಸರಕಾರದ ನಡೆಯನ್ನು ಖಂಡಿಸಿದರು. ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ತೀತಿರ ಧರ್ಮಜ ಉತ್ತಪ್ಪ, ಕೆಪಿಸಿಸಿ ಸದಸ್ಯರಾದ ಮಂಜುನಾಥ್ ಗುಂಡೂರಾವ್, ಹೆಚ್.ಎಂ. ನಂದಕುಮಾರ್, ಮಡಿಕೇರಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಹೆಚ್.ಎ.ಹಂಸ, ನಗರ ಕಾಂಗ್ರೆಸ್ ಅಧ್ಯಕ್ಷ ರಾಜೇಶ್ ಯಲ್ಲಪ್ಪ, ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಮುನೀರ್ ಅಹಮದ್, ತೆನ್ನಿರ ಮೈನಾ, ಕೊಲ್ಯದ ಗಿರೀಶ್, ಸತೀಶ್, ಕಾನೆಹಿತ್ಲು ಮೊಣ್ಣಪ್ಪ, ಮಂಡಿರ ಸದಾ ಮುದ್ದಪ್ಪ, ಐಲಪಂಡ ಪುಷ್ಪ ಪೂಣಚ್ಚ, ಸೂರಜ್ ಹೊಸೂರು, ಜೆ.ಸಿ.ಜಗದೀಶ್, ಚಂದ್ರಶೇಖರ್ ಮತ್ತಿತರ ಪ್ರಮುಖರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಕೊಳ್ಳೇಗಾಲದ ಬಳಿ ಕೌಟುಂಬಿಕ ಕಲಹ ಹಿನ್ನೆಲೆ

ಮಕ್ಕಳಿಗೆ ವಿಷವುಣಿಸಿ ತಾನೂ ವಿಷ ಕುಡಿದು ಆತ್ಮಹತ್ಯೆಗೆ ಯತ್ನಿಸಿದ ತಾಯಿ

8 ವರ್ಷದ ಹೆಣ್ಣು ಮಗು ಸಾವು, ತಾಯಿ ಮಗ ಸಾವು–ಬದುಕಿನ ನಡುವೆ ಹೋರಾಟ

ಕೊಳ್ಳೇಗಾಲ, ಜು.12– ಕೌಟುಂಬಿಕ ಕಲಹದಿಂದ ಮನನೊಂದ ಗೃಹಿಣಿಯೊಬ್ಬರು ತನ್ನ ಮಕ್ಕಳಿಬ್ಬರಿಗೂ ವಿಷವುಣಿಸಿ ತಾನೂ ವಿಷ ಸೇವಿಸಿ ಆತ್ಮಹತ್ಯೆಗೆ ಯತ್ನಿಸಿದ ಘಟನೆ ತಾಲೂಕಿನ ಮಧುವನಹಳ್ಳಿಯಲ್ಲಿ ನಡೆದಿದ್ದು, 8 ವರ್ಷದ ಪುಟ್ಟ ಕಂದಮ್ಮ ಆಸ್ಪತ್ರೆಗೆ ಬರುವ ಮುನ್ನವೇ ಸಾವನ್ನಪ್ಪಿದ್ದು, ವಿಷ ಕುಡಿದ ತಾಯಿ, ಮಗ ಸಾವು–ಬದುಕಿನ ನಡುವೆ ಹೋರಾಟ ನಡೆಸುತ್ತಿದ್ದಾರೆ.

ಮಧುವನಹಳ್ಳಿ ಗ್ರಾಮದ ಷಣ್ಮುಖಸ್ವಾಮಿ ಎಂಬುವರ ಪುತ್ರಿ ಸಿಂಧು (8) ಮೃತ ಪುಟ್ಟ ಕಂದಮ್ಮ. ಷಣ್ಮುಖಸ್ವಾಮಿ ಅವರ ಪತ್ನಿ ಶೀಲಾ (30) ಹಾಗೂ ಪುತ್ರ ಯಶ್ವಂತ್(11) ಸ್ಥಿತಿ ಗಂಭೀರವಾಗಿದ್ದು, ಅವರನ್ನು ಮೈಸೂರಿನ ಕೆ.ಆರ್.ಆಸ್ಪತ್ರೆಗೆ ದಾಖಲು ಮಾಡಲಾಗಿದೆ.

ಷಣ್ಮುಖಸ್ವಾಮಿ ದಿನನಿತ್ಯ ಕುಡಿದು ಬಂದು ಪತ್ನಿಗೆ ಮಾನಸಿಕ ಮತ್ತು ದೈಹಿಕವಾಗಿ ಹಿಂಸೆ ನೀಡುತ್ತಿದ್ದ ಎನ್ನಲಾಗಿದೆ. ಮಂಗಳವಾರ ರಾತ್ರಿಯೂ ಕುಡಿದು ಬಂದು ಪತ್ನಿ ಜೊತೆ ಜಗಳವಾಡಿದ್ದಲ್ಲದೇ ಮನ ಬಂದಂತೆ ಥಳಿಸಿದ್ದನೆನ್ನಲಾಗಿದೆ. ಜೊತೆಗೆ ಬುಧವಾರ ಬೆಳಗ್ಗೆಯೂ ಜಗಳ ವಾಡಿದ್ದರಿಂದ ಬೇಸತ್ತ ಶೀಲಾ ತನ್ನ ಮಕ್ಕಳಿಬ್ಬರಿಗೂ ವಿಷ ಕುಡಿಸಿ, ತಾನೂ ವಿಷ ಸೇವಿಸಿ ಆತ್ಮಹತ್ಯೆಗೆ ಯತ್ನಿಸಿದ್ದಾಳೆ. ವಿಷ ಸೇವಿಸಿ ಮನೆಯಲ್ಲಿ ನರಳಾಡುತ್ತಿದ್ದವರನ್ನು ಕಂಡ ಸ್ಥಳೀಯರು ತಕ್ಷಣ ಆಸ್ಪತ್ರೆಗೆ ಕರೆತಂದು ಸೇರಿಸಿದ್ದಾರೆ.



ಮೃತಪಟ್ಟ ಸಿಂಧು

ವಿಷ ಅದಾಗಲೇ ದೇಹ ಸೇರಿದ್ದರಿಂದ ಮಗಳು ಸಿಂಧು ಆಸ್ಪತ್ರೆಗೆ ಬರುವ ಮುನ್ನವೇ ಸಾವನ್ನಪ್ಪಿದ್ದರೆ, ತಾಯಿ ಹಾಗೂ ಮಗನ ಸ್ಥಿತಿ ಚಿಂತಾಜನಕವಾಗಿರುವುದರಿಂದ ಪ್ರಾಥಮಿಕ ಚಿಕಿತ್ಸೆ ನೀಡಿ, ಮೈಸೂರಿನ ಆಸ್ಪತ್ರೆಗೆ ರವಾನಿಸಲಾಗಿದೆ. ಈ ಸಂಬಂಧ ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಷಣ್ಮುಖಸ್ವಾಮಿ ಜೊತೆ ಶೀಲಾಳಿಗೆ ಕಳೆದ 15 ವರ್ಷದ ಹಿಂದೆ ವಿವಾಹವಾಗಿತ್ತು. ದಂಪತಿಗಳಿಗೆ ಇಬ್ಬರು ಮಕ್ಕಳಿದ್ದಾರೆ. ಮೃತ ಸಿಂಧು 2ನೇ ತರಗತಿ ಅಧ್ಯಯನ ಮಾಡುತ್ತಿದ್ದು, ಯಶ್ವಂತ್ 4ನೇ ತರಗತಿ ಓದುತ್ತಿದ್ದಾನೆ.



ಚಿಕಿತ್ಸೆ ಪಡೆಯುತ್ತಿರುವ ತಾಯಿ, ಮಗ

ಗಂಡನ ಹಿಂಸೆಗೆ ಬೇಸತ್ತಿದ್ದ ಶೀಲಾಳ ದುಡುಕಿನ ನಿರ್ಧಾರದಿಂದಾಗಿ ಪುಟ್ಟ ಕಂದಮ್ಮ ಬಲಿಯಾಗಿರುವ ವಿಚಾರ ತಿಳಿಯುತ್ತಿದ್ದಂತೆ ಆಸ್ಪತ್ರೆ ಬಳಿಗೆ ಬಂದು ಸಂಬಂಧಿಗಳ ಆಕ್ರಂದನ ಮುಗಿಲು ಮುಟ್ಟಿತ್ತು. ಸ್ಥಳಕ್ಕೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪದ್ಮಿನಿ ಸಾಹು, ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಉದ್ದೇಶ್, ಗ್ರಾಮಾಂತರ ಪೊಲೀಸ್ ಠಾಣೆಯ ಪಿಎಸ್‌ಐ ಗಣೇಶ್ ಇನ್ನಿತರರು ಮಧುವನಹಳ್ಳಿ ಗ್ರಾಮಕ್ಕೆ ಭೇಟಿ ನೀಡಿ, ಸ್ಥಳ ಪರಿಶೀಲಿಸಿದ್ದು, ಮುಂದಿನ ಕ್ರಮ ಕೈಗೊಂಡಿದ್ದಾರೆ.

ಈ ಸಂಬಂಧ ಶೀಲಾಳ ಪತಿ ಷಣ್ಮುಖ ದೂರು ನೀಡಿದ್ದು, ಆಗಿಂದಾಗ್ಗೆ ಸಣ್ಣ ವಿಚಾರಗಳಿಗೆ ಗಲಾಟೆ ನಡೆಯುತ್ತಿತ್ತು. ಬೆಳಗ್ಗೆ ಗಲಾಟೆ ಆದ ಬಳಿಕ ನಾನು ಬಹಿರ್ದೆಸೆಗೆ ತೆರಳಿದ್ದೆ, ಬಂದು ನೋಡುವಷ್ಟರಲ್ಲಿ ಮಕ್ಕಳ ಬಾಯಲ್ಲಿ ನೊರೆ ಬರುತ್ತಿತ್ತು. ಇದನ್ನು ಗಮನಿಸಿ ಅಕ್ಕ–ಪಕ್ಕದವರ ಸಹಾಯ ಪಡೆದು ಆಸ್ಪತ್ರೆಗೆ ದಾಖಲಿಸಿದೆ ಎಂದು ದೂರಿನಲ್ಲಿ ವಿವರಿಸಿದ್ದಾರೆ.

ಬಿಜೆಪಿ ಮುಖಂಡನ ಮೇಲೆ ಗುಂಪಿನಿಂದ ಹಲ್ಲೆ

ಜೋರಾಗಿ ಮಾತಾಡಬೇಡಿ ಎಂದಿದ್ದೆ ಹಲ್ಲೆಗೆ ಕಾರಣವಾಯಿತು

ಕೊಳ್ಳೇಗಾಲ, ಜು.12– ನಗರ ಮಂಡಲ ಬಿಜೆಪಿ ಯುವ ಮೋರ್ಚಾ ಅಧ್ಯಕ್ಷ ಕಿರಣ್ ಎಂಬುವರ ಮೇಲೆ ಗುಂಪೊಂದು ಹಲ್ಲೆ ನಡೆಸಿರುವ ಪ್ರಕರಣ ಮಂಗಳವಾರ ರಾತ್ರಿ ನಡೆದಿದೆ. ಹಲ್ಲೆಗೊಳಗಾದ ಕಿರಣ್ ಸಾರ್ವಜನಿಕ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಕಿರಣ್ ಮಾರಿಗುಡಿ ಬಡಾವಣೆಯ ನಿವಾಸಿಯಾಗಿದ್ದು, ಮಾರಮ್ಮನ ತಂಪು ಹಬ್ಬದ ವಿಶೇಷಪೂಜೆ ಹಿನ್ನೆಲೆಯಲ್ಲಿ ನಡೆದ ಉತ್ಸವದಲ್ಲಿ ಪಾಲ್ಗೊಂಡು ತೆರಳುತ್ತಿದ್ದ ವೇಳೆ ದೇವಾಂಗ ಪೇಟೆಯ ಪಂಚರಂಗಿ ಸರ್ಕಲ್ ಬಳಿ ಗುಂಪೊಂದು ನಿಂತು ಜೋರಾಗಿ ಮಾತನಾಡುತ್ತಿತ್ತು ಎನ್ನಲಾಗಿದೆ. ಈ ವೇಳೆ ಕಿರಣ್ ಅವರ ಬಳಿ ತೆರಳಿ ಅಕ್ಕಪಕ್ಕದಲ್ಲಿ ಮನೆಗಳಿವೆ. ಎಲ್ಲರೂ ಮಲಗಿದ್ದಾರೆ ಮೆತ್ತಗೆ ಮಾತನಾಡಿ ಎನ್ನುತ್ತಿದ್ದಂತೆ ಅವಾಚ್ಯ ಶಬ್ಧಗಳಿಂದ ನಿಂದಿಸಿ, ಉಸಿರು ಕಟ್ಟಿಸುವ ಪ್ರಯತ್ನ ಮಾಡಿದರು ಎನ್ನಲಾಗಿದೆ. ಬಳಿಕ ಕಲ್ಲು, ರಾಡು ಹಾಗೂ ಕೈನಿಂದ ಗುದ್ದಿ ತಲೆ, ಕತ್ತಿನ ಹಾಗೂ ಕಾಲಿನ ಭಾಗ ಸೇರಿದಂತೆ ಹಲವೆಡೆ ಹಲ್ಲೆ ಮಾಡಿದರು. ಈ ವೇಳೆ ಜೊತೆಯಲ್ಲಿದ್ದ ನಿಖಿಲ್ ಮತ್ತು ಕಿರಣ್ ತಂದೆ ಸುರೇಶ್ ಅವರು ಸಕಾಲದಲ್ಲಿ ಬಂದು ಹಲ್ಲೆ ನಡೆಯುತ್ತಿದ್ದನ್ನು ತಡೆದರು ಎಂದು ಪೊಲೀಸರಿಗೆ ನೀಡಿರುವ ದೂರಿನಲ್ಲಿ ತಿಳಿಸಲಾಗಿದೆ.

ಈ ವೇಳೆ ಗುಂಪಿನಲ್ಲಿದ್ದ ಕೆಲವರು ಈ ದಿನ ನೀನು ತಪ್ಪಿಸಿಕೊಂಡೆ, ನಿನ್ನ ಕಥೆ ಮುಗಿಸುತ್ತೇವೆ, ನಿನ್ನ ಮನೆ ಮುಂದೆ ಹೊಗೆ ಹಾಕಿಸುವುದು ಸಿದ್ಧ ಎಂದು ಕೊಲೆ ಬೆದರಿಕೆ ಹಾಕಿದರಂತೆ. ಹಲ್ಲೆಗೊಳಗಾದ ನಾನು ಬೆಳಗ್ಗೆ ಕೊಳ್ಳೇಗಾಲ ಆಸ್ಪತ್ರೆಗೆ ಬಂದು ದಾಖಲಾಗಿದ್ದು ನನ್ನ ಮೇಲೆ ಹಲ್ಲೆ, ಕೊಲೆ ಬೆದರಿಕೆ ಹಾಕಿದವರ ಮೇಲೆ ಕ್ರಮಕೈಗೊಂಡು ನನಗೆ ಸೂಕ್ತ ರಕ್ಷಣೆ ನೀಡಬೇಕು ಎಂದು ಪಟ್ಟಣ ಪೊಲೀಸರಿಗೆ ನೀಡಿರುವ ದೂರಿನಲ್ಲಿ ಪ್ರವೀಣ್ ತಿಳಿಸಿದ್ದಾರೆ.

ಸಿದ್ದಪ್ಪನ ಬೆಟ್ಟದಲ್ಲಿ ಚಿರತೆ ಪ್ರತ್ಯಕ್ಷ

ಕೊಳ್ಳೇಗಾಲ, ಜು.12– ಬುಧವಾರ ಸಿದ್ದಪ್ಪನಬೆಟ್ಟದ ತಪ್ಪಲಲ್ಲಿ ಚಿರತೆಯೊಂದು ಪ್ರತ್ಯಕ್ಷವಾಗಿದ್ದು, ಸ್ಥಳೀಯರು ಚಿರತೆ ಓಡಾಡುವ ದೃಶ್ಯಗಳನ್ನು ಸೆರೆ ಹಿಡಿದ ವಿಡಿಯೋ ವೈರಲ್ ಆಗಿದೆ.

ಇತ್ತೀಚೆಗೆ ಹನೂರು ತಾಲೂಕಿನ ಕಗ್ಗಲಿಗುಂಡಿ ಗ್ರಾಮದಲ್ಲಿ ಬಾಲಕಿ ಮೇಲೆ ದಾಳಿ ನಡೆಸಿ ಸ್ಥಳೀಯರು ಕೂಗಿಕೊಂಡ ಹಿನ್ನೆಲೆ ಪರಾರಿಯಾಗಿದ್ದ ಚಿರತೆ ಬುಧವಾರ ಸಿದ್ದಪ್ಪನ ಬೆಟ್ಟದಲ್ಲಿ ಪ್ರತ್ಯಕ್ಷವಾಗಿದೆ. ಇದೇ ಚಿರತೆ ಗುಂಡಾಲ್ ಮತ್ತು ಕೆಂಪನಪಾಳ್ಯ ಗ್ರಾಮ ಸಮೀಪದಲ್ಲೂ ಸಂಚರಿಸುತ್ತಿದ್ದು, ಬೆಟ್ಟದ ತಪ್ಪಲಲ್ಲಿ ಸುತ್ತಾಡಿರುವುದು ನಾಗರಿಕರಲ್ಲಿ ಆತಂಕ ಮೂಡಿಸಿದೆ. ಚಿರತೆ ಸೆರೆಗೆ ಮುಂದಾಗಬೇಕು ಎಂದು ಸ್ಥಳೀಯರು ಅರಣ್ಯಾಧಿಕಾರಿಗಳಿಗೆ ಮನವಿ ಮಾಡಿದ್ದಾರೆ.

ಸಂಸದ ಸ್ಥಾನದಿಂದ ರಾಹುಲ್‌ಗಾಂಧಿ ಅನರ್ಹತೆ ಖಂಡಿಸಿ

ಚಾ.ನಗರದಲ್ಲಿ ಕಾಂಗ್ರೆಸ್ ಮೌನ ಪ್ರತಿಭಟನೆ



ಚಾಮರಾಜನಗರ, ಜು.12– ರಾಹುಲ್ ಗಾಂಧಿ ಅವರನ್ನು ಸಂಸದ ಸ್ಥಾನದಿಂದ ಅನರ್ಹಗೊಳಿಸಿರುವ ಕ್ರಮವನ್ನು ಖಂಡಿಸಿ ಜಿಲ್ಲಾ ಕಾಂಗ್ರೆಸ್ ಸಮಿತಿ ವತಿಯಿಂದ ಮೌನ ಪ್ರತಿಭಟನೆ ನಡೆಯಿತು.

ನಗರದ ಜಿಲ್ಲಾಡಳಿತ ಭವನದ ಮುಂಭಾಗದಲ್ಲಿ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಪಿ. ಮರಿಸ್ವಾಮಿ ನೇತೃತ್ವದಲ್ಲಿ ಸಮಾವೇಶಗೊಂಡ ಪ್ರತಿಭಟನಾನಿರತರು ಬಾಯಿಗೆ ಕಪ್ಪುಪಟ್ಟಿ ಕಟ್ಟಿಕೊಂಡು ಮೌನ ಪ್ರತಿಭಟನೆ ನಡೆಸಿದರು. ಈ ಸಂದರ್ಭದಲ್ಲಿ ಮಾಜಿ ಶಾಸಕ ಶಾಸಕ ಆರ್.ನರೇಂದ್ರ ಮಾತನಾಡಿ, ರಾಹುಲ್‌ಗಾಂಧಿ ಅವರನ್ನು ಸಂಸದ ಸ್ಥಾನದಿಂದ ಅನರ್ಹಗೊಳಿಸಿ 2 ವರ್ಷ ಶಿಕ್ಷೆಯಾಗುವ ರೀತಿ ಮಾಡಿರುವುದು ಖಂಡನೀಯವಾಗಿದೆ ಎಂದು ಆರೋಪಿಸಿದರು.

ಪ್ರಧಾನಿ ನರೇಂದ್ರಮೋದಿ ಆಡಳಿತ ದೇಶದಲ್ಲಿ ಬಂದ ಮೇಲೆ ವಿರೋಧ ಪಕ್ಷಗಳನ್ನು ಕಡೆಗಣಿಸುವುದು ಅಲ್ಲದೆ ವಿರೋಧ ಪಕ್ಷದ ಮುಖಂಡರಿಗೆ ತೊಂದರೆ ಕೊಡುವುದು ನಡೆಯುತ್ತಿದೆ. ಇದು ಪ್ರಜಾಪ್ರಭುತ್ವಕ್ಕೆ ಮಾರಕವಾಗಿದೆ ರಾಹುಲ್‌ಗಾಂಧಿ ಅವರನ್ನು ಅನರ್ಹಗೊಳಿಸಿರುವ ವಿರುದ್ದ ಮೌನಪ್ರತಿಭಟನೆ ನಡೆಸಲಾಗುತ್ತಿದೆ ಎಂದರು.

ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಬಂದು ಇನ್ನೂ ಎರಡು ತಿಂಗಳು ಆಗಿಲ್ಲ. ಬಿಜೆಪಿಯವರು ಅಧಿಕಾರದಲ್ಲಿ ಇದ್ದಾಗ ಅಭಿವೃದ್ದಿ ಬಗ್ಗೆ ಮಾತನಾಡಿಲ್ಲ. ಇಲ್ಲದಿರುವ ಕಾರಣ ಹುಡುಕಿ ಪ್ರತಿಭಟನೆ ಮಾಡುತ್ತಿರುವುದು ವಿಪರ್ಯಾಸ. ಬಿಜೆಪಿಯವರು ಸಾವಿನ ರಾಜಕೀಯವನ್ನು ಬಿಡಬೇಕು ಎಂದರು.

ಪ್ರತಿಭಟನೆ ನೇತೃತ್ವ ವಹಿಸಿದ್ದ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಪಿ.ಮರಿಸ್ವಾಮಿ ಮಾತನಾಡಿ, ರಾಹುಲ್‌ಗಾಂಧಿ ಅವರನ್ನು ಸಂಸದ ಸ್ಥಾನದಿಂದ ಅನರ್ಹಗೊಳಿಸಿರುವುದು ಸರಿಯಲ್ಲ ಬಿಜೆಪಿಯವರು ದ್ವೇಷ ರಾಜಕಾರಣ ಮಾಡುವುದು ಸರಿಯಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಟನೆಯಲ್ಲಿ ಮಾಜಿ ಸಂಸದ ಕಾಗಲವಾಡಿ ಎಂ.ಶಿವಣ್ಣ, ಮಾಜಿ ಶಾಸಕ ಎಸ್. ಜಯಣ್ಣ, ಜಿಲ್ಲಾ ಕಾಂಗ್ರೆಸ್ ಉಪಾಧ್ಯಕ್ಷ ಬಿ.ಕೆ.ರವಿಕುಮಾರ್, ಪ್ರಧಾನ ಕಾರ್ಯದರ್ಶಿಗಳಾದ ಚಿಕ್ಕಮಹದೇವು, ಆರ್.ಮಹದೇವು,ಜಿಲ್ಲಾ ಮಹಿಳಾ ಅಧ್ಯಕ್ಷೆ ಲತಾ ರಾಜಶೇಖರಜತ್ತಿ, ಬ್ಲಾಕ್ ಅಧ್ಯಕ್ಷ ಮಹಮ್ಮದ್ ಅಸ್ಗರ್, ಅರಕಲವಾಡಿ ಗುರುಸ್ವಾಮಿ, ತೋಟೇಶ್, ಜಿ.ಪಂ.ಮಾಜಿ ಸದಸ್ಯ ಯೋಗೇಶ್, ಸದಾಶಿವಮೂರ್ತಿ, ನಗರಸಭಾ ಸದಸ್ಯರಾದ ಚಿನ್ನಮ್ಮ, ಕಲಾವತಿ, ಲೀಲಮ್ಮ, ಮಹಿಳಾ ಕಾಂಗ್ರೆಸ್‌ನ ಶಕುಂತಲಾ, ಮುಖಂಡ ಮಹೇಶ್ ಕುದೇರು, ಎಸ್ ಸಿ ವಿಭಾಗದ ಅಧ್ಯಕ್ಷ ನಲ್ಲೂರು ಸೋಮೇಶ್, ಎನ್‌ಎಸ್ ಯುಐ ಅಧ್ಯಕ್ಷ ಮೋಹನ್, ನಗು, ತಾಪಂ ಮಾಜಿ ಸದಸ್ಯ ಕಾಗಲವಾಡಿ ಶಿವಸ್ವಾಮಿ, ಯುವ ಕಾಂಗ್ರೆಸ್ ಚೇತನ್ ದೊರೆರಾಜು, ನಾಗೇಂದ್ರ, ಯೋಗೇಂದ್ರ, ವೀಕ್ಷಕರಾಗಿ ಆಗಮಿಸಿದ ಕಾಳಯ್ಯ, ರೇವಣ್ಣ, ಡಿ.ಪಿ. ಪ್ರಕಾಶ್, ಮಹದೇವಶೆಟ್ಟಿ, ಆಲೂರು ಪ್ರದೀಪ್, ಕೃಷ್ಣ, ಶಿವಕುಮಾರ್, ಸುಹೇಲ್ ಆಲಿ ಖಾನ್, ಆಯೂಬ್ ಖಾನ್, ಷರೀಫ್, ನಸುರುಲ್ಲಾ ಖಾನ್ ಇದ್ದರು.

ರೋಟರಿ ಸಂಸ್ಥೆಯಿಂದ ವೈದ್ಯರ ದಿನಾಚರಣೆ

ಅಂಧತ್ವ ನಿವಾರಣೆಯಲ್ಲಿ ರೋಟರಿ ಸೇವೆ ಅನನ್ಯ

ಚಾಮರಾಜನಗರ, ಜು.12– ಅಂಧತ್ವ ನಿವಾರಣೆಯಲ್ಲಿ ರೋಟರಿ ಸೇವೆ ಅನನ್ಯವಾಗಿದೆ ಎಂದು ಸಂತೇಮರಹಳ್ಳಿ ಸಮುದಾಯದ ಆರೋಗ್ಯ ಕೇಂದ್ರ ವೈದ್ಯಾಧಿಕಾರಿ ಡಾ.ರೇಣುಕಾದೇವಿ ಹೇಳಿದರು.

ನಗರದ ರೋಟರಿ ಭವನದಲ್ಲಿ ರೋಟರಿ ಸಂಸ್ಥೆ ವತಿಯಿಂದ ನಡೆದ ವೈದ್ಯರ ದಿನಾಚರಣೆ ಕಾರ್ಯಕ್ರಮದಲ್ಲಿ ಸನ್ಮಾನ ಸ್ವೀಕರಿಸಿ ಮಾತನಾಡಿದರು. ರೋಟರಿ ಸಂಸ್ಥೆಯು ಪ್ರತಿ ತಿಂಗಳು ಮೊದಲನೆಯ ಭಾನುವಾರ ನಡೆಸುವ ಉಚಿತ ಕಣ್ಣಿನ ತಪಾಸಣಾ ಶಿಬಿರದಿಂದ ಜಿಲ್ಲೆಯ ಹಾಗೂ ಹೊರ ಜಿಲ್ಲೆಯ ಜನತೆಗೆ ಅನುಕೂಲವಾಗಿದೆ. ಇಂತಹ ಶಿಬಿರವನ್ನು ಸಂತೇಮರಹಳ್ಳಿ ಭಾಗಕ್ಕೂ ವಿಸ್ತರಿಸುವ ಜೊತೆಗೆ ಆ ಭಾಗದ ಗ್ರಾಮಾಂತರ ಪ್ರದೇಶದ ಜನತೆಗೆ ಹೆಚ್ಚು ಅನುಕೂಲ ಕಲ್ಪಿಸಿಕೊಡುವಂತೆ ಮನವಿ ಮಾಡಿದರು.



ಸನ್ಮಾನ ಸ್ವೀಕರಿಸಿದ ಡಾ.ಜನಾರ್ಧನ್, ಡಾ.ಮಮತ ಮಾತನಾಡಿ, ಸೇವೆಯಲ್ಲಿ ತೊಡಗಿರುವ ವೈದ್ಯರನ್ನು ಗುರುತಿಸುವ ಮೂಲಕ ಗ್ರಾಮೀಣ ಪ್ರದೇಶಗಳಲ್ಲಿ ಉತ್ತಮ ಸೇವೆ ಸಲ್ಲಿಸಲು ಪ್ರೇರಣೆ ನೀಡಿದ್ದೀರಿ. ತಮ್ಮನ್ನು ಸನ್ಮಾನಿಸಿ, ಜವಾಬ್ದಾರಿ ಹೆಚ್ಚು ಮಾಡಿದ್ದೀರಿ ಇದ್ದಕಾಗಿ ರೋಟರಿ ಸಂಸ್ಥೆಯ ಪದಾಧಿಕಾರಿಗಳಿಗೆ ಋಣಿಯಾಗಿರುತ್ತೇವೆ ಎಂದರು.

ಅಧ್ಯಕ್ಷತೆ ವಹಿಸಿದ್ದ ರೋಟರಿ ಅಧ್ಯಕ್ಷ ಸಿ.ಎನ್.ಚಂದ್ರಪ್ರಭಜೈನ್ ಮಾತನಾಡಿ, ವೈದ್ಯರು ರೋಗಿಗಳ ವಿಷಯದಲ್ಲಿ ಸರ್ವಕಾಲ ಸರ್ವಾವ್ಯವಸ್ಥೆಯಲ್ಲೂ ಜೀವ ರಕ್ಷಕನ ಪಾತ್ರದಲ್ಲಿ ಪೋಷಿಸುತ್ತಾರೆ. ಆದ್ದರಿಂದ ವೈದ್ಯೋನಾರಾಯಣೋಹರಿ ಎಂದು ಹೇಳುತ್ತಾರೆ ಎಂದರು.

ಕಾರ್ಯಕ್ರಮದಲ್ಲಿ ರೋಟರಿ ಕಾರ್ಯದರ್ಶಿ ಅಬ್ದುಲ್ ಅಜೀಜ್, (ದೀನಾ ಚಿಕ್ ಫೋಸ್ಟ್), ಜಿ.ಆರ್.ಅಶ್ವಥ್‌ನಾರಾಯಣ್, ಕೆ.ಎಂ.ಮಹದೇವಸ್ವಾಮಿ, ಪ್ರಕಾಶ್, ಕೆಂಪನಪುರ ಸಿದ್ದರಾಜು, ಸಾರ್ಜೆಂಟ್ ಅಶೋಕ್, ಗುರುಸ್ವಾಮಿ, ರಾಮಸಮುದ್ರ ಎಲ್. ನಾಗರಾಜು, ಕಾವೇರಿ ಡಯೊಗ್ನೋಸ್ಟಿಕ್ ರಾಮು, ಕುಮಾರ್‌ರಾಜ್, ಆರ್.ಎಂ .ಸ್ವಾಮಿ, ಮೋಹನ್, ಕಾಳನಹುಂಡಿ ಗುರುಸ್ವಾಮಿ, ರಾಮು, ಡಾ. ಗೋವಿಂದಶೆಟ್ಟಿ, ಸಂಜಯ್ ಕುಮಾರ್ ಜೈನ್, ಸುಭಾಷ್, ಡಯಾಲಿಸಿಸ್ ಕೇಂದ್ರದ ಅಧ್ಯಕ್ಷ ರಮೇಶ್ ಇತರರು ಹಾಜರಿದ್ದರು.

ರಸ್ತೆ ಬದಿಯಲ್ಲಿ ತ್ಯಾಜ್ಯ: ಸವಾರರು ಬಿದ್ದು ಗಾಯ

ಕೊಳ್ಳೇಗಾಲ, ಜು.12– ಚರಂಡಿಯಿಂದ ತೆಗೆದ ತ್ಯಾಜ್ಯವನ್ನು ರಸ್ತೆ ಮಧ್ಯದಲ್ಲಿಯೇ ಹಾಕಿದ ಪರಿಣಾಮ ಹಲವು ವಾಹನ ಸವಾರರು ಬಿದ್ದು, ಬುಧವಾರ ಗಾಯಗೊಂಡಿ ರುವ ಘಟನೆ ನಡೆದಿದೆ. ಮಾನಸ ಕಾಲೇಜು ಸಮೀಪದಲ್ಲಿನ ಮುಖ್ಯರಸ್ತೆಯ ಮಧ್ಯದಲ್ಲಿ ನಗರಸಭೆಯವರು ತ್ಯಾಜ್ಯ ಹಾಕಿದ್ದ ಪರಿಣಾಮ, ಜೋರಾಗಿ ಬಂದ ತಂದೆ, ಮಗಳು ಬಿದ್ದು ಗಾಯಗೊಂಡಿದ್ದಾರೆ. ಬೆಳಗಿನ ಜಾವ ಇದೇ ಮಾರ್ಗದಲ್ಲಿ ಬಂದ ತೇಜು ಸೇರಿದಂತೆ ಹಲವು ಸವಾರರು ಸಹಾ ವಾಹನದಿಂದ ಆಯತಪ್ಪಿ ಬಿದ್ದು ಗಾಯಗೊಂಡಿದ್ದಾರೆ. ನಗರಸಭೆಯ ಈ ವರ್ತನೆಗೆ ನಾಗರಿಕರಲ್ಲಿ ಆಕ್ರೋಶ ವ್ಯಕ್ತವಾಗಿದ್ದು, ಹೆಚ್ಚಿನ ಅನಾಹುತ ಸಂಭವಿಸುವ ಮುನ್ನ ನಗರಸಭೆ ತ್ಯಾಜ್ಯ ತೆಗೆಸಿ ಕ್ರಮಕೈಗೊಳ್ಳುವಂತೆ ನಾಗರೀಕರು ಆಗ್ರಹಿಸಿದ್ದಾರೆ.

ಸಾವಿನಲ್ಲೂ ಸಾರ್ಥಕತೆ ಮೆರೆದ ಕುಟುಂಬ

ಹನೂರು, ಜು.12– ರಸ್ತೆ ಅಪ ಘಾತದಲ್ಲಿ ಗಾಯಗೊಂಡು ಚಿಕಿತ್ಸೆ ಫಲಕಾರಿಯಾಗದೆ ಸಾವನ್ನಪ್ಪಿದ ಕುರಟ್ಟಿ ಹೊಸೂರು ಗ್ರಾಮದ ಯುವಕನೊಬ್ಬ ತನ್ನ ಆಸೆಯಂತೆ ನೇತ್ರದಾನ ಮಾಡುವ ಮೂಲಕ ಸಾವಿನಲ್ಲೂ ಸಾರ್ಥಕತೆ ಮೆರೆದಿದ್ದಾನೆ.



ಹನೂರು ತಾಲೂಕಿನ ಕುರಟ್ಟಿ ಹೊಸೂರು ಗ್ರಾಮದ ಅಂಬರೀಶ್ (27) ಎಂಬಾತನಿಗೆ ಸ್ವಗ್ರಾಮದಲ್ಲಿಯೇ ಬೈಕ್ ಅಪಘಾತ ಸಂಭವಿಸಿ ಗಂಭೀರವಾಗಿ ಗಾಯಗೊಂಡಿದ್ದ ಹಿನ್ನೆಲೆ ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಗೆ ಚಿಕಿತ್ಸೆಗಾಗಿ ದಾಖಲು ಮಾಡಲಾಗಿತ್ತು. ಆದರೆ ಚಿಕಿತ್ಸೆ ಫಲಿಸದೇ ಮಂಗಳವಾರ ನಿಧನ ಹೊಂದಿದ್ದಾರೆ.

ಮೃತ ಅಂಬರೀಶ್‌ನ ಆಸೆಯಂತೆ ಅವರ ಕಣ್ಣುಗಳನ್ನು ಕುಟುಂಬಸ್ಥರು ದಾನ ಮಾಡಿದ್ದಾರೆಂದು ತಿಳಿದು ಬಂದಿದೆ. ತಮ್ಮ ಮರಣದ ಬಳಿಕ ನೇತ್ರದಾನ ಮಾಡಬೇಕು ಎಂಬುದು ಅಂಬರೀಶ್ ಅವರ ಆಸೆಯಾಗಿತ್ತು. ಅದರಂತೆ ನೇತ್ರದಾನ ಮಾಡಲಾಗಿದೆ ಎಂದು ಮೃತನ ಸ್ನೇಹಿತರು ತಿಳಿಸಿದ್ದಾರೆ.



ಮೈಸೂರಿನ ಜೆ.ಪಿ.ನಗರದಲ್ಲಿರುವ ಬಸಂತ್ ಕನ್ವೆನ್‌ಷನ್ ಸೆಂಟರ್‌ನಲ್ಲಿ ನಡೆದ ಮೈಸೂರು ಮರ್ಚೆಂಟ್ಸ್ ಕೋ-ಆಪರೇಟಿವ್ ಬ್ಯಾಂಕ್‌ನ 64ನೇ ಸರ್ವ ಸದಸ್ಯರ ಸಭೆಯನ್ನು ಬ್ಯಾಂಕಿನ ಅಧ್ಯಕ್ಷ ಆರ್.ಆನಂದ್ ಉದ್ಘಾಟಿಸಿದರು. ಈ ವೇಳೆ ಬ್ಯಾಂಕಿನ ಉಪಾಧ್ಯಕ್ಷ ಕೆ.ಪ್ರೇಮಕುಮಾರ್, ನಿರ್ದೇಶಕರಾದ ಸಿ.ವಿ. ಸೋಮಶೇಖರ್, ಬಿ.ಆರ್. ನಂದೀಶ್, ಬಿ. ಕೋದಂಡರಾಮ್, ಎ.ಪ್ರಭುಪ್ರಸಾದ್, ಆರ್.ಪಿ.ಕೃಷ್ಣಮೂರ್ತಿ, ಎಂ.ಎನ್.ಮಹೇಶ್, ಎನ್.ಕಣ್ಣನ್, ಎನ್.ರಾಘವ, ಎಸ್.ರಾಚಪ್ಪಾಜಿ, ಎನ್.ಸುಧಾ, ಸಿ.ಎಸ್. ಗಂಗಾಂಬಿಕೆ, ಎಂ.ಆರ್. ವಿಜಯಲಕ್ಷ್ಮಿ, ಬ್ಯಾಂಕಿನ ಪ್ರಧಾನ ವ್ಯವಸ್ಥಾಪಕ ಶ್ರೀಧರ್ ಬಿ. ಕುಲಕರ್ಣಿ ಮತ್ತಿತರರು ಉಪಸ್ಥಿತರಿದ್ದರು.



ಮೈಸೂರು ನಗರ ಪಾಲಿಕೆ ಸದಸ್ಯ ಗೋಪಿ ಅವರ ಹುಟ್ಟುಹಬ್ಬದ ಅಂಗವಾಗಿ ಮಂಡಿ ಮೊಹಲ್ಲಾ ನಿವಾಸಿಗಳು ಅವರನ್ನು ಅಭಿನಂದಿಸಿ, ಶುಭಾಶಯ ಕೋರಿದರು. ಈ ವೇಳೆ ದಿ ಮೈಸೂರು ಕೋ ಆಪರೇಟಿವ್ ಬ್ಯಾಂಕ್ ನಿರ್ದೇಶಕರಾದ ರವಿ ರಾಜಕೀಯ, ಎಸ್.ಆರ್.ರವಿ, ಮೈಸೂರು ರಕ್ಷಣಾ ವೇದಿಕೆ ಉಪಾಧ್ಯಕ್ಷ ಕುಮಾರ್‌ಗೌಡ, ಮುಖಂಡರಾದ ಜಗ್ಗಣ್ಣ, ಉಮೇಶ್, ವಾಸಣ್ಣ, ಪುಟ್ಟಸ್ವಾಮಣ್ಣ, ಖಲೀಮ್, ಇಮ್ರಾನ್, ನಂಜುಂಡಿ, ಲೋಹಿತ್, ಅರವಿಂದ, ರವಿ ಉಪಸ್ಥಿತರಿದ್ದರು.

ಹೊಸ ತಾಲೂಕುಗಳು, ಜಿಲ್ಲಾ ಆಸ್ಪತ್ರೆಯಲ್ಲಿ ಡಯಾಲಿಸಿಸ್ ಕೇಂದ್ರ

ಆರೋಗ್ಯ ಇಲಾಖೆ ಆಯುಕ್ತ ಡಿ.ರಂದೀಪ್ ಮಾಹಿತಿ

ಮೈಸೂರು, ಜು. 12(ಆರ್‌ಕೆ)– ಮೈಸೂರು ಜಿಲ್ಲೆಯ ಹೊಸ ತಾಲೂಕುಗಳಾದ ಸರಗೂರು, ಸಾಲಿಗ್ರಾಮ ಹಾಗೂ ಮೈಸೂರು ನಗರದ ಕೆ.ಆರ್.ಎಸ್. ರಸ್ತೆಯಲ್ಲಿರುವ ಜಿಲ್ಲಾ ಆಸ್ಪತ್ರೆಯಲ್ಲಿ ಡಯಾಲಿಸಿಸ್ ಕೇಂದ್ರ ತೆರೆಯುವುದಾಗಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಆಯುಕ್ತ ಡಿ.ರಂದೀಪ್ ತಿಳಿಸಿದ್ದಾರೆ.

ಸರಗೂರು ಮತ್ತು ಸಾಲಿಗ್ರಾಮ ತಾಲೂಕು ಕೇಂದ್ರಗಳ ಸಮುದಾಯ ಆರೋಗ್ಯ ಕೇಂದ್ರ (Community Health Centre)ಗಳಲ್ಲಿ ತಲಾ 2 ಹಾಸಿಗೆ ಮತ್ತು ಜಿಲ್ಲಾ ಆಸ್ಪತ್ರೆಯಲ್ಲಿ 10 ಹಾಸಿಗೆ ಸಾಮರ್ಥ್ಯದ ಡಯಾಲಿಸಿಸ್ ಚಿಕಿತ್ಸಾ ಕೇಂದ್ರ ತೆರೆಯಲು ಸಿದ್ಧತೆ ಮಾಡಲಾಗಿದ್ದು, ಯಂತ್ರ ಅಳವಡಿಸಲು ಟೆಂಡರ್ ಕರೆಯಲಾಗಿದೆ ಎಂದು ತಿಳಿಸಿದರು. ಯೂರಾಲಜಿ, ಕಿಡ್ನಿ ಸಮಸ್ಯೆಯಿಂದ ಬಳಲುತ್ತಿರುವ ರೋಗಿಗಳಿಗೆ ಅಗತ್ಯವಿರುವ ಡಯಾಲಿಸಿಸ್ ಸೇವೆ ಒದಗಿಸಲು ಈ ಕೇಂದ್ರಗಳು ಸಹಕಾರಿಯಾಗಲಿವೆ. ಪ್ರಸ್ತುತ ತಾಲೂಕು ಸಾರ್ವಜನಿಕ ಆಸ್ಪತ್ರೆಗಳಲ್ಲಿ ಮಾತ್ರ ಈ ಸೌಲಭ್ಯವಿದ್ದು, ಹೊಸ ತಾಲೂಕುಗಳಾದ ನಂತರ ಸರಗೂರು ಮತ್ತು ಸಾಲಿಗ್ರಾಮಗಳ ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ ಡಯಾಲಿಸಿಸ್ ಕೇಂದ್ರ ಇಲ್ಲದ ಕಾರಣ ಅಲ್ಲಿಗೆ ಈ ಸೌಲಭ್ಯ ಕಲ್ಪಿಸಲಾಗುತ್ತಿದೆ ಎಂದು ಅವರು ತಿಳಿಸಿದರು.

ಅದೇ ರೀತಿ ಇತ್ತೀಚೆಗೆ ಆರಂಭವಾದ ಮೈಸೂರು ನಗರದ ಕೆ.ಆರ್.ಎಸ್. ರಸ್ತೆಯಲ್ಲಿರುವ ಜಿಲ್ಲಾ ಆಸ್ಪತ್ರೆಯಲ್ಲೂ 10



ಹಾಸಿಗೆ ಸಾಮರ್ಥ್ಯದ ಡಯಾಲಿಸಿಸ್ ಕೇಂದ್ರ ತೆರೆಯಲು ಸರ್ಕಾರ ನಿರ್ಧರಿಸಿರುವುದರಿಂದ ಇಲಾಖೆಯಿಂದ ಟೆಂಡರ್ ಪ್ರಕ್ರಿಯೆ ನಡೆದಿದ್ದು, ಇಷ್ಟರಲ್ಲೇ ಈ ಸೇವೆ ಆರಂಭಿಸಲಾಗುವುದು ಎಂದು ರಂದೀಪ್ ತಿಳಿಸಿದ್ದಾರೆ. ಅದರಿಂದಾಗಿ ಆರೋಗ್ಯ ಇಲಾಖೆ ವ್ಯಾಪ್ತಿಗೆ ಬರುವ ಎಲ್ಲಾ ತಾಲೂಕು ಕೇಂದ್ರಗಳಲ್ಲೂ ಈ ಸೌಲಭ್ಯ ಸಿಗುವಂತಾಗಲಿದ್ದು, ಡಯಾಲಿಸಿಸ್ ಸೇವೆ ಅಗತ್ಯವಿರುವ ರೋಗಿಗಳನ್ನು ಜಿಲ್ಲಾ ಆಸ್ಪತ್ರೆ ಅಥವಾ ಕೆ.ಆರ್. ಆಸ್ಪತ್ರೆಗಳಿಗೆ ರೆಫರ್ ಮಾಡಿ ಕಳುಹಿಸದೇ ತಮ್ಮ ಆಸ್ಪತ್ರೆಯಲ್ಲೇ ಚಿಕಿತ್ಸೆ ನೀಡುವಂತೆ ವೈದ್ಯಾಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ ಎಂದು ತಿಳಿಸಿದರು.

ಅವುಗಳನ್ನು ಹೊರತುಪಡಿಸಿ ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಅಧೀನದ ಕೆ.ಆರ್.ಆಸ್ಪತ್ರೆ ಮತ್ತು ಪಿಕೆಟಿಬಿ ಆಸ್ಪತ್ರೆ ಆವರಣದಲ್ಲಿರುವ ರಾಜಕುಮಾರಿ ಕೃಷ್ಣಾಜಮ್ಮಣ್ಣಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳಲ್ಲಿ ಹಾಗೂ ಕಾರ್ಮಿಕ ಇಲಾಖೆಯಡಿ ನಡೆಯುತ್ತಿರುವ ಇಎಸ್‌ಐ ಆಸ್ಪತ್ರೆಗಳಲ್ಲಿ ಡಯಾಲಿಸಿಸ್ ಕೇಂದ್ರಗಳಿದ್ದು, ರೋಗಿಗಳಿಗೆ ಸೇವೆ ದೊರೆಯುತ್ತಿದೆ.

ಸಿಎಂಎ ಕೋರ್ಸ್‌ಗಳಿಗೆ ಪ್ರವೇಶ

ಮೈಸೂರು, ಜು. 12– ದಿ ಇನ್ಸ್‌ಟಿಟ್ಯೂಟ್ ಆಫ್ ಕಾಸ್ಟ್ ಅಕೌಂಟೆಂಟ್ಸ್ ಆಪ್ ಇಂಡಿಯಾದ, ಮೈಸೂರು ಚಾಪ್ಟರ್ ವತಿಯಿಂದ ಫೌಂಡೇಷನ್, ಇಂಟರ್‌ಮೀಡಿಯೆಟ್ ಮತ್ತು ಫೈನಲ್ ಕೋರ್ಸ್ (ಸಿಎಂಎ)ಗಳಿಗೆ ಡಿಸೆಂಬರ್ 2023ರ ಪರೀಕ್ಷೆ ನೋಂದಣಿಗೆ ಜು. 31 ಕೊನೆ ದಿನಾಂಕ. ಸಿಎಂಎ ಫೌಂಡೇಷನ್‌ಗೆ ಸೇರಲು ದ್ವಿತೀಯ ಪಿಯುಸಿ ಪಾಸಾಗಿರಬೇಕು. ಸಿಎಂಎ ಇಂಟರ್‌ಮಿಡಿಯೇಟ್‌ಗೆ ಸೇರಲು ಯಾವುದಾದರೂ ಪದವಿ ಪಾಸ್ ಆಗಿರಬೇಕು. ಸಿಎಂಎ ಫೈನಲ್ ಕೋರ್ಸ್‌ಗೆ ಸೇರಲು ಸಿಎಂಎ ಇಂಟರ್ ಮೀಡಿಯೇಟ್ ಪಾಸಾಗಿರಬೇಕು. ಆಸಕ್ತಿಯುಳ್ಳ ವಿದ್ಯಾರ್ಥಿಗಳು 1420, ಕೃಷ್ಣಮೂರ್ತಿಪುರಂ, 7ನೇ ಕ್ರಾಸ್‌ನಲ್ಲಿರುವ ಮೈಸೂರು ಚಾಪ್ಟರ್ ಕಚೇರಿಗೆ ನೇರವಾಗಿ ಅಥವಾ ದೂ. 0821–2331083, ಮೊ. 97317 89222, 99001 11552 ಮೂಲಕ ಬೆಳಗ್ಗೆ 10 ರಿಂದ 12 ವರೆಗೆ ಮತ್ತು ಸಂಜೆ 5 ರಿಂದ 7.30 ರವರೆಗೆ ಸಂಪರ್ಕಿಸಬಹುದು.

ಕೆಬಿಡಿಎಸ್‌ನಿಂದ ಸಚಿವ ಎಚ್‌ಸಿಎಂಗೆ ಮನವಿ

ಅಂಬೇಡ್ಕರ್ ಭವನಗಳನ್ನು ಬುದ್ಧವಿಹಾರಗಳಾಗಿ ಪರಿವರ್ತಿಸಲು ಒತ್ತಾಯ

ಮೈಸೂರು, ಜು.12– ಬಾಬಾಸಾಹೇಬ್ ಅಂಬೇಡ್ಕರ್ ಬೋಧಿಸತ್ವರೇ ಆಗಿರುವುದರಿಂದ ಅವರ ಹೆಸರಿನಲ್ಲಿರುವ ಎಲ್ಲಾ ಭವನಗಳನ್ನು ಇನ್ನು ಮುಂದೆ ಬುದ್ಧವಿಹಾರಗಳೆಂದು ಕರೆಯಲ್ಪಡಬೇಕು. ಅವುಗಳಿಗೆ ಧಾರ್ಮಿಕ ಸ್ವರೂಪ ನೀಡಬೇಕು ಎಂದು ಕರ್ನಾಟಕ ಬುದ್ಧಧಮ್ಮ ಸಮಿತಿಯು (ಕೆಬಿಡಿಎಸ್) ಸಮಾಜ ಕಲ್ಯಾಣ ಸಚಿವರು ಆದ ಜಿಲ್ಲಾ ಉಸ್ತುವಾರಿ ಸಚಿವ ಎಚ್.ಸಿ. ಮಹದೇವಪ್ಪ ಅವರನ್ನು ಒತ್ತಾಯಿಸಿದೆ.

ನಗರದಲ್ಲಿರುವ ಸಚಿವ ಎಚ್.ಸಿ. ಮಹದೇವಪ್ಪ ನಿವಾಸಕ್ಕೆ ಭೇಟಿ ನೀಡಿ, ಮನವಿ ಮಾಡಿದ ಸಮಿತಿಯ ಸದಸ್ಯರು, ಅಂಬೇಡ್ಕರ್ ಭವನಗಳನ್ನು ಬುದ್ಧವಿಹಾರಗಳನ್ನಾಗಿ ಪರಿವರ್ತಿಸಬೇಕು. ಈ ಮೂಲಕ ಅಂಬೇಡ್ಕರ್ ಅವರ ಆಶಯಗಳನ್ನು ಈಡೇರಿಸುವ ಕೆಲಸ ಮಾಡಬೇಕು. ಈಗಿರುವ ಗ್ರಾಮೀಣ ಪ್ರದೇಶದ ಅಂಬೇಡ್ಕರ್ ಭವನಗಳು ವಾರಸುದಾರರಿಲ್ಲದಂತಾಗಿ ಪಾಳುಬಿದ್ದಿವೆ. ಕಟ್ಟಡದ ಸುತ್ತಮುತ್ತ ಗಿಡ–ಗಂಟಿಗಳು ಬೆಳೆದು ಅನೈರ್ಮಲ್ಯದಿಂದ ಕೂಡಿವೆ. ಜನಪ್ರತಿನಿಧಿಗಳು ಗ್ರಾಮ ಸಮಿತಿಗಳನ್ನು ರಚಿಸಿ ಅವರ ಅಧೀನದಲ್ಲಿ ಕೆಲಸ ನಿರ್ವಹಿಸುವಂತೆ ಮಾಡಬೇಕು ಎಂದು ಮನವಿ ಮಾಡಿದರು.

ಈ ವೇಳೆ ಸಮಿತಿಯ ಪ್ರಧಾನ ಕಾರ್ಯದರ್ಶಿ ಆರ್.ಮಹಾದೇವಪ್ಪ, ಪ್ರದೇಶ ಅಭಿವೃದ್ಧಿ ಮಂಡಳಿಯ ಯೋಜನಾ ನಿರ್ದೇಶಕ ಡಿ.ಚಂದ್ರಶೇಖರಯ್ಯ, ಸಮಿತಿಯ ಸಹ ಕಾರ್ಯದರ್ಶಿ ಎಚ್.ಶಿವರಾಜು,



ಮುಖಂಡರಾದ ಕೆ.ಎಂ.ಪುಟ್ಟು, ರಾಜು ಹಂಪಾಪುರ, ಆರ್.ನಟರಾಜು, ಈರೇಶ್ ನಗರ್ಲೆ, ಡಾ.ಮಂಜು ಸತ್ತಿಗೆಹುಂಡಿ, ಸಮಿತಿಯ ಪದಾಧಿಕಾರಿಗಳು ಹಾಜರಿದ್ದರು.

ನಗರದಲ್ಲಿ ಎಲ್ಲೆಂದರಲ್ಲಿ ವ್ಯಾಪಕವಾಗಿ ನಡೆಯುತ್ತಿದೆ ಹುಚ್ಚಾಟದ ವ್ಹೀಲಿಂಗ್!



ಮೈಸೂರು, ಜು.12(ಎಂಕೆ)– ಮೈಸೂರಿನಲ್ಲಿ ಸಂಚಾರ ನಿಯಮ ಉಲ್ಲಂಘನೆ ಮಿತಿ ಮೀರಿದ್ದು, ನಗರದ ಮಧ್ಯದಲ್ಲಿರುವ ರಸ್ತೆಗಳಲ್ಲಿಯೇ ವ್ಹೀಲಿಂಗ್ ಮಾಡುವುದು ಸಾಮಾನ್ಯವಾಗಿದೆ.

ಜೆಎಲ್‌ಬಿ ರಸ್ತೆ, ನಾರಾಯಣ ಶಾಸ್ತ್ರಿ ರಸ್ತೆ, ಸಯ್ಯಾಜಿರಾವ್ ರಸ್ತೆ, ವಿದ್ಯಾರಣ್ಯಪುರಂ ಮುಖ್ಯ ರಸ್ತೆ, ರಿಂಗ್ ರೋಡ್ ಸೇರಿದಂತೆ ನಗರದ ಮಧ್ಯದಲ್ಲಿರುವ ಶಾಲಾ–ಕಾಲೇಜುಗಳ ಅಕ್ಕ–ಪಕ್ಕದ ರಸ್ತೆಗಳಲ್ಲಿ ವ್ಹೀಲಿಂಗ್ ಹೆಚ್ಚಾಗಿದೆ. ಹಾಗೆಯೇ ತ್ರಿಬಲ್ ರೈಡಿಂಗ್, ಹೆಲ್ಮೆಟ್ ಧರಿಸದೆ ದ್ವಿಚಕ್ರ ವಾಹನ ಸಂಚಾರ ಹೆಚ್ಚಾಗಿದ್ದು, ಕೇಳುವವರು ಇಲ್ಲದಂತಾಗಿದೆ. ಸಿಗ್ನಲ್‌ಗಳಲ್ಲಿ ಸಿಸಿ ಕ್ಯಾಮರಾ ಕಣ್ತಪ್ಪಿಸಲು ನಂಬರ್ ಪ್ಲೇಟ್ ಮುಚ್ಚಿಕೊಳ್ಳುವುದು, ನಂಬರ್‌ಗಳು ಸ್ಪಷ್ಟವಾಗಿ ಕಾಣಿಸದಂತೆ ಮಾಡುವುದು, ಬೈಕ್ ಅಥವಾ ಸ್ಕೂಟರ್ ಹಿಂಬದಿಯಲ್ಲಿ ಮಾತ್ರ ನಂಬರ್ ಪ್ಲೇಟ್ ಹಾಕಿ, ಮುಂದೆ ನಂಬರ್ ಹಾಕದೆ ಅಡ್ಡಾಡುವುದು ವಿಪರೀತವಾಗಿದೆ.

60 ಸಾವಿರ ಪ್ರಕರಣ ದಾಖಲು: ಕಳೆದ ಜೂನ್ ತಿಂಗಳಿನಲ್ಲಿ 60,474 ಸಂಚಾರ ನಿಯಮ ಉಲ್ಲಂಘಟನೆ ಪ್ರಕರಣಗಳು ದಾಖಲಾಗಿವೆ. ಸಿಸಿ ಕ್ಯಾಮರಾಗಳಲ್ಲಿಂದ 60 ಸಾವಿರಕ್ಕೂ ಹೆಚ್ಚು ಪ್ರಕರಣಗಳು ದಾಖಲಾಗಿದ್ದು, ಪೊಲೀಸ್ ಕಾರ್ಯಾಚರಣೆ ನಡೆಸಿದ್ದರೆ ಇನ್ನೆಷ್ಟು ಪ್ರಕರಣಗಳು ದಾಖಲಾಗುತ್ತಿದ್ದವೋ ಎಬ ಪ್ರಶ್ನೆ ಕಾಡಿದೆ.

ವಿದ್ಯಾರ್ಥಿಯೊಬ್ಬನ ವ್ಹೀಲಿಂಗ್ ಆಟ: ನಾರಾಯಣ ಶಾಸ್ತ್ರಿ ರಸ್ತೆಯಲ್ಲಿ ಬುಧವಾರ ಮಧ್ಯಾಹ್ನ ಕಾಲೇಜು ವಿದ್ಯಾರ್ಥಿಯೊರ್ವ ನಡುರಸ್ತೆಯಲ್ಲೇ ವ್ಹೀಲಿಂಗ್ ಮಾಡುವ ಮೂಲಕ ರಸ್ತೆಯಲ್ಲಿದ್ದವರಿಗೆ ಭಯಹುಟ್ಟಿಸಿದ ಘಟನೆ ನಡೆಯಿತು. ಎರಡ್ಮೂರು ಬಾರಿ ರಸ್ತೆಯಲ್ಲಿ ವ್ಹೀಲಿಂಗ್ ಮಾಡಿದ ಆತ ಒಂದೆರಡು ಬಾರಿ ಒಬ್ಬನೇ ವ್ಹೀಲಿಂಗ್ ಮಾಡಿ, ಮತ್ತೊಮ್ಮೆ ತನ್ನ ಸ್ನೇಹಿತನನ್ನು ಹಿಂಬದಿ ಕೂರಿಸಿಕೊಂಡು ವ್ಹೀಲಿಂಗ್ ಮಾಡಿದ. ಇದರಿಂದ ಎದುರುಗಡೆ ಬರುತ್ತಿದ್ದ ವಾಹನ ಸವಾರರು ಗಾಬರಿಗೊಂಡರಲ್ಲದೆ ವಿದ್ಯಾರ್ಥಿಯ ಹುಚ್ಚಾಟಕ್ಕೆ ಕಿಡಿಕಾರಿದರು.

ಉಪನ್ಯಾಸಕರಿಗೆ ರೋವರಿಂಗ್, ರೇಂಜರಿಂಗ್ ಕುರಿತು ತರಬೇತಿ ಶಿಬಿರ

ಮೈಸೂರು, ಜು. 12–ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ (ಕರ್ನಾಟಕ), ಮೈಸೂರು ಜಿಲ್ಲಾ ಸಂಸ್ಥೆ ವತಿಯಿಂದ ಮೈಸೂರು ವಿಭಾಗದ ಸರ್ಕಾರಿ, ಅನುದಾನಿತ, ಅನುದಾನ ರಹಿತ ಪದವಿಪೂರ್ವ ಕಾಲೇಜು ಗಳ ಉಪನ್ಯಾಸಕರಿಗೆ ರೋವರಿಂಗ್, ರೇಂಜರಿಂಗ್ ವಿಭಾಗಗಳ ಕುರಿತು ಒಂದು ದಿನದ ತರಬೇತಿ ಶಿಬಿರವನ್ನು ಶಾಲಾ ಶಿಕ್ಷಣ ಇಲಾಖೆ (ಪದವಿಪೂರ್ವ) ಸಹ ಭಾಗಿತ್ವದಲ್ಲಿ ವಿದ್ಯಾವರ್ಧಕ ಇಂಜಿನಿಯರಿಂಗ್ ಕಾಲೇಜಿನ ಸಾಹು ಕಾರ್ ಚೆನ್ನಯ್ಯ ಸಭಾಂಗಣದಲ್ಲಿ ಆಯೋಜಿಸಲಾಗಿತ್ತು.

ಶಿಬಿರದ ಉದ್ಘಾಟನೆಯನ್ನು ಬೆಂಗಳೂರು ಪದವಿ ಪೂರ್ವ ಶಿಕ್ಷಣ ಇಲಾಖೆಯ ಸಹಾಯಕ ನಿರ್ದೇಶಕ





ಗುಬ್ಬಿಗೂಡು ರಮೇಶ್ ನೆರವೇರಿಸಿದರು. ಶಿಬಿರಕ್ಕೆ ನೆರೆಯ 8 ಜಿಲ್ಲೆಗಳಿಂದ ಬಂದಿದ್ದ ಸುಮಾರು 300ಕ್ಕೂ ಹೆಚ್ಚು ಶಿಬಿರಾರ್ಥಿಗಳಿಗೆ ಶುಭ ಹಾರೈಸಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಪದವಿ ಪೂರ್ವ ಶಿಕ್ಷಣ ಇಲಾಖೆ ಮೈಸೂರು ಜಿಲ್ಲೆ ಉಪನಿರ್ದೇಶಕಿ ನಾಗಮ್ಮ ಮಾತನಾಡಿ, ವಿದ್ಯಾರ್ಥಿ ಗಳಲ್ಲಿ ಶಿಸ್ತನ್ನು ಮೈಗೂಡಿಸಲು ಸ್ಕೌಟ್ಸ್ ಮತ್ತು ಗೈಡ್ಸ್ ಸಹಕಾರಿ. ಅವರನ್ನು ಸಮಾಜದಲ್ಲಿ ಉತ್ತಮ ಪ್ರಜೆಗಳನ್ನಾಗಿ ರೂಪಿಸಲು ಉಪನ್ಯಾಸಕರು ಪ್ರಯತ್ನ ಪಡಬೇಕು ಎಂದು ತಿಳಿಸಿದರು. ಸಂಸ್ಥಾಪಕ ಬೇಡನ್ ಪೊವೆಲ್ ಅವರ ಆದರ್ಶ ಮತ್ತು ವಿದ್ಯಾರ್ಥಿಗಳ ವಯಸ್ಸಿನ ಅನುಗುಣವಾಗಿ ವಿಂಗಡಿಸಿರುವ ವಿವಿಧ ವಿಭಾಗಗಳ ಬಗ್ಗೆ ಮಾಹಿತಿ ನೀಡುತ್ತಾ, 15 ರಿಂದ 25 ವಯಸ್ಸಿನ ಯುವಕ ಯುವತಿಯರಿಗೆ ರೋವರ್ಸ್ (Rovers) ಮತ್ತು ರೇಂಜರ್ಸ್ (Rangers) ವಿಭಾಗದ ಧ್ಯೇಯವನ್ನು ಸ್ಕೌಟ್ಸ್ ಮತ್ತು ಗೈಡ್ಸ್‌ನ ಜಿಲ್ಲಾ ಮುಖ್ಯ ಆಯುಕ್ತ ಪಿ.ವಿಶ್ವನಾಥ್ ತಿಳಿಸಿದರು. ಶಿಬಿರದಲ್ಲಿ ಮೈಸೂರು, ಮಂಡ್ಯ, ಚಾಮರಾಜನಗರ, ಚಿಕ್ಕಮಗಳೂರು, ಹಾಸನ, ಕೊಡಗು, ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗಳಿಂದ 300ಕ್ಕೂ ಹೆಚ್ಚು ಉಪನ್ಯಾಸಕರು ಭಾಗವಹಿಸಿದ್ದರು.



ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರನ್ನು ಲಕ್ನೋದಲ್ಲಿ ಸುತ್ತೂರು ಮಠದ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು ಭೇಟಿಯಾದ ಸಂದರ್ಭದಲ್ಲಿ ಅವರನ್ನು ಸನ್ಮಾನಿಸಿ, ಅಭಿನಂದಿಸಿದರು. ಸೌರವ್ ಶರ್ಮಾ, ಡಾ. ಬಿ. ಸುರೇಶ್, ಎಸ್.ಪಿ. ಮಂಜುನಾಥ್, ಇತರ ಶ್ರೀಗಳು, ಜೆಎಸ್‌ಎಸ್ ಸಂಸ್ಥೆಯ ಅಧಿಕಾರಿಗಳು ಹಾಗೂ ಸಿಬ್ಬಂದಿ ಈ ವೇಳೆ ಉಪಸ್ಥಿತರಿದ್ದರು.

ಜು.15ರಂದು ಸಾಮೂಹಿಕ ಸತ್ಯನಾರಾಯಣ ಪೂಜೆ

ಮೈಸೂರು, 12(ಸಿಎನ್)– ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ ಟ್ರಸ್ಟ್, ತಿಲಕನಗರ ವಲಯದ ಒಂಭತ್ತು ಒಕ್ಕೂಟದ ಸಹಯೋಗದಲ್ಲಿ ದಿ. 15 (ಶನಿವಾರ)ರಂದು, ಪಡುವಾರಹಳ್ಳಿಯ ಮಲೆ ಮಹದೇಶ್ವರ ದೇವಸ್ಥಾನ ಸಭಾಭವನದಲ್ಲಿ ಸಾಮೂಹಿಕ ಸತ್ಯನಾರಾಯಣ ಪೂಜೆ ಹಾಗೂ ಧಾರ್ಮಿಕ ಸಭಾ ಕಾರ್ಯಕ್ರಮವನ್ನು ಏರ್ಪಡಿಲಾಗಿದೆ.

ಬೆಳಗ್ಗೆ 7 ರಿಂದ 10.30 ರವರೆಗೆ ಸಾಮೂಹಿಕ ಸತ್ಯನಾರಾಯಣ ಪೂಜೆ ನೇರವೇರಲಿದೆ. ಬಳಿಕ 11 ಗಂಟೆಯಿಂದ ಮಧ್ಯಾಹ್ನ 1 ಗಂಟೆವರೆಗೆ ಧಾರ್ಮಿಕ ಸಭಾ ಕಾರ್ಯಕ್ರಮ ನೆರವೇರಲಿದೆ. ಮಧ್ಯಾಹ್ನ 1 ಗಂಟೆಯ ಬಳಿಕ ಪ್ರಸಾದ ವಿತರಣೆ ಹಾಗೂ ಅನ್ನ ಸಂತರ್ಪಣೆ ನಡೆಯಲಿದೆ.

ಆದಿಚುಂಚನಗಿರಿ ಮೈಸೂರು ಶಾಖಾ ಮಠದ ಸೋಮೇಶ್ವರನಾಥ ಸ್ವಾಮೀಜಿ ಹಾಗೂ ವಿಜಯನಗರ ಶ್ರೀ ಯೋಗ ನರಸಿಂಹಸ್ವಾಮಿ ದೇವಸ್ಥಾನ ಸಂಸ್ಥಾಪಕರಾದ ನಾಡೋಜ ಭಾಷ್ಯಂ ಸ್ವಾಮೀಜಿಯವರು ದಿವ್ಯ ಸಾನ್ನಿಧ್ಯ ವಹಿಸಲಿದ್ದು, ರಾಮಕೃಷ್ಣ ಆಶ್ರಮದ ಜ್ಞಾನಯೋಗಾನಂದ ಸ್ವಾಮೀಜಿ ಪ್ರವಚನ ನೀಡಲಿದ್ದಾರೆ.

ಚಾಮರಾಜ ಕ್ಷೇತ್ರ ಶಾಸಕರಾದ ಹರೀಶ್ ಗೌಡ ಅವರ ಅಧ್ಯಕ್ಷತೆಯಲ್ಲಿ ಕಾರ್ಯಕ್ರಮ ನಡೆಯಲಿದ್ದು, ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ ಟ್ರಸ್ಟ್ ಅಧ್ಯಕ್ಷ ಜಯರಾಮ ನೆಲ್ಲಿತಾಯ ಅವರು ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ.

ವಿಶೇಷ ಆಹ್ವಾನಿತರು: ಮೈಸೂರು–ಕೊಡಗು ಸಂಸದ ಪ್ರತಾಪ್ ಸಿಂಹ, ಚಾಮುಂಡೇಶ್ವರಿ ಕ್ಷೇತ್ರ ಶಾಸಕ ಜಿ.ಟಿ.ದೇವೇಗೌಡ, ನಗರಪಾಲಿಕೆ ಸದಸ್ಯರಾದ ನಮ್ರತಾ ರಮೇಶ್, ಭಾಗ್ಯ ಮಾದೇಶ್, ಜಿಲ್ಲಾ ಒಕ್ಕಲಿಗರ ಸಂಘದ ಅಧ್ಯಕ್ಷ ಮರಿಸ್ವಾಮಿ, ಎಂ. ಲಕ್ಷ್ಮಣ್, ಮಲ್ಲಹಳ್ಳಿ ಮಹದೇವಸ್ವಾಮಿ, ಭೈರಪ್ಪ, ನಂದಿನಿ ಶೇಠ್ ಭಾಗವಹಿಸಲಿದ್ದಾರೆ.

ವಿಶೇಷ ಸೂಚನೆ: ಸತ್ಯನಾರಾಯಣ ಪೂಜೆಗೆ ಕುಳಿತುಕೊಳ್ಳುವ ಜೋಡಿಗಳು ಪೂಜೆಗೆ ಬೇಕಾದ ಸಾಮಗ್ರಿಗಳನ್ನು ತರಬೇಕು. ಶನಿವಾರ ಬೆಳಗ್ಗೆ 7 ಗಂಟೆಯ ಒಳಗಾಗಿ ಪೂಜಾ ಸಮಗ್ರಿ ಒದಗಿಸಬೇಕಾಗಿ ಪ್ರಧಾನ ಅರ್ಚಕರು ತಿಳಿಸಿದ್ದಾರೆ. ಸಾಮೂಹಿಕ ಸತ್ಯನಾರಾಯಣ ಪೂಜೆ ಹಾಗೂ ಧಾರ್ಮಿಕ ಸಭಾ ಕಾರ್ಯಕ್ರಮಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತಾದಿಗಳು, ಅಭಿಮಾನಿಗಳು, ಕಾರ್ಯಕರ್ತರು ಆಗಮಿಸಿ ಭಗವಂತ ಕೃಪೆಗೆ ಪಾತ್ರರಾಗಬೇಕಾಗಿ ಕೋರಲಾಗಿದೆ.

ಹತ್ಯೆಯ ಗಂಭೀರವಾಗಿ ಪರಿಗಣಿಸಿ ಶಿಕ್ಷೆ ನೀಡಿ

ಸೂಕ್ತ ತನಿಖೆ ನಡೆಸಲು ಮೈಸೂರು ನಗರ, ಜಿಲ್ಲಾ ಬ್ರಾಹ್ಮಣ ಸಂಘ ಆಗ್ರಹ

ಮೈಸೂರು, ಜು. 12–ಚಿಕ್ಕೋಡಿಯಲ್ಲಿ ಜೈನ ಮುನಿ ಶ್ರೀ ಕಾಮಕುಮಾರ ನಂದಿ ಮಹಾರಾಜರ ಹತ್ಯೆಯನ್ನು ಮೈಸೂರು ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘ ಖಂಡಿಸುತ್ತದೆ ಎಂದು ಮೈಸೂರು ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ. ಪ್ರಕಾಶ್ ತಿಳಿಸಿದ್ದಾರೆ. ಸಮಾಜದಲ್ಲಿ ಅಪರಾಧ ಪ್ರಕರಣಗಳು ಹೆಚ್ಚಾಗಲು ಕಾನೂನಿನ ಭಯವಿಲ್ಲದಿರುವುದೇ ಮುಖ್ಯ ಕಾರಣ. ಯಾವುದೇ ಒತ್ತಡಕ್ಕೂ ಮಣಿಯದೇ ತನಿಖೆ ನಡೆಸಿ ಅಪರಾಧದಲ್ಲಿ ಭಾಗಿಯಾದ ಆರೋಪಿಗಳಿಗೆ ಕಠಿಣ ಶಿಕ್ಷೆ ವಿಧಿಸಬೇಕು.

ಈ ಹತ್ಯೆಯಿಂದ ಇಡೀ ಮಾನವ ಸಮುದಾಯವೇ ತಲೆ ತಗ್ಗಿಸುವಂತಾಗಿದೆ. ಸರ್ಕಾರ ಕೂಡಲೇ ಕ್ರಮ ಕೈಗೊಳ್ಳಬೇಕು. ಸಮಾಜದ ಏಳಿಗೆಗಾಗಿ ಜೀವನವನ್ನು ಮುಡಿಪಾಗಿಟ್ಟಿದ್ದ ಶ್ರೀಗಳನ್ನು ಹೀಗೆ ಅಮಾನುಷವಾಗಿ ಹತ್ಯೆ ಮಾಡಿರುವುದು ಘೋರ ಅಪರಾಧ ಎಂದು ಖಂಡಿಸಿದ್ದಾರೆ. ಅಹಿಂಸಾವಾದಿ ಜೈನ ಧರ್ಮದ ಮುನಿಗಳನ್ನು ಹತ್ಯೆಗೈದು, ಮಾನವ ಕುಲಕ್ಕೆ ದೊಡ್ಡ ಅಪಮಾನ ಮಾಡಿದ್ದಾರೆ. ಯಾವುದೇ ಸಮಾಜದ ಸ್ವಾಮೀಜಿ ಮತ್ತು ಮುನಿಗಳಿಗೆ ಸರ್ಕಾರ ರಕ್ಷಣೆ ನೀಡಬೇಕು. ಇನ್ನೆಂದೂ ಇಂತಹ ಘಟನೆ ಮರುಕಳಿಸಬಾರದು. ಸಮಾಜ ಸೇವೆ ಮಾಡುವವರ ಕಷ್ಟಸುಖಗಳನ್ನು ಸರ್ಕಾರ ಆಲಿಸಬೇಕು. ಈ ಕೊಲೆ ಪ್ರಕರಣವನ್ನು ಸಿಬಿಐ ತನಿಖೆಗೆ ವಹಿಸಬೇಕು ಎಂದು ಒತ್ತಾಯಿಸಿದರು. ಸಿಎಂ ಸಿದ್ದರಾಮಯ್ಯ ಮತ್ತು ಗೃಹ ಸಚಿವ ಡಾ. ಜಿ. ಪರಮೇಶ್ವರ್, ದುಷ್ಕರ್ಮಿಗಳಿಗೆ ಕಠಿಣ ಶಿಕ್ಷೆಯಾಗುವಂತೆ ಕ್ರಮ ಕೈಗೊಳ್ಳಬೇಕು. ಇಲ್ಲದಿದ್ದರೆ ಶಾಂತಪ್ರಿಯ ಜೈನ ಸಮುದಾಯದೊಂದಿಗೆ ಸೇರಿ ಬೀದಿಗಿಳಿದು ಹೋರಾಟ ಮಾಡಬೇಕಾಗುತ್ತದೆ ಎಂದು ಎಚ್ಚರಿಸಿದ್ದಾರೆ.

ಉತ್ತರ ಭಾರತ ಪ್ರವಾಸದಿಂದ ಮೈಸೂರಿನ 19 ಮಂದಿ ಇಂದು ರಾತ್ರಿ ಸುರಕ್ಷಿತ ವಾಪಸ್







ಮೈಸೂರು, ಜು.12(ಆರ್‌ಕೆ)–ಉತ್ತರ ಭಾರತ ಪ್ರವಾಸಕ್ಕೆ ತೆರಳಿದ್ದ ಮೈಸೂರಿನ 19 ಮಂದಿ ಮನಾಲಿಯಲ್ಲಿ ಸುರಕ್ಷಿತವಾಗಿದ್ದು, ನಾಳೆ(ಜು.13) ರಾತ್ರಿ ವೇಳೆಗೆ ಮೈಸೂರಿಗೆ ಹಿಂದಿರುಗುತ್ತೇವೆ ಎಂದು ಪ್ಯಾಕೇಜ್ ಟೂರ್ ಮೇಲ್ವಿಚಾರಕ ಧರ್ಮೇಶ್ ತಿಳಿಸಿದ್ದಾರೆ.

ಬೆಂಗಳೂರಿನ ಸುಭಾಷ್ ಡಿಸ್ಟ್ರಿಬ್ಯೂಟರ್ಸ್ ಪ್ರೈವೇಟ್ ಲಿಮಿಟೆಡ್‌ನಿಂದ ಮೈಸೂರಿನ 19 ಮಂದಿ ಸೇರಿ ರಾಜ್ಯದ 103 ಮಂದಿಯನ್ನು ಪ್ಯಾಕೇಜ್ ಟೂರ್‌ನಲ್ಲಿ ಮನಾಲಿಗೆ ಕರೆದುಕೊಂಡು ಬಂದಿದ್ದೆವು. ಜೂನ್ 6ರಂದು ಬೆಂಗಳೂರಿನಿಂದ ಹೊರಟು 7ರಂದು ಮನಾಲಿ ತಲುಪಿದ್ದೆವು. ಆದರೆ ಉತ್ತರ ಭಾರತದ ರಾಜ್ಯಗಳಲ್ಲಿ ಅತಿಯಾದ ಮಳೆಯಿಂದ ನೆರೆ ಹಾವಳಿ ಉಂಟಾದ ಪರಿಣಾಮ ಇಲ್ಲಿ ವಿದ್ಯುತ್ ಸಂಪರ್ಕ, ರಸ್ತೆ, ರೈಲು ಸಂಪರ್ಕ, ದೂರವಾಣಿ ಮತ್ತು ಮೊಬೈಲ್ ಸಂಪರ್ಕ ಕಡಿತಗೊಂಡಿದ್ದರಿಂದ ನಾವು ಎಲ್ಲಿಗೂ ಹೋಗಲು ಸಾಧ್ಯವಾಗಲಿಲ್ಲ ಎಂದು ಧರ್ಮೇಶ್ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಪ್ರವಾಸಕ್ಕೆ ಬಂದಿರುವ ಯಾರೂ ತಮ್ಮ ಸಂಬಂಧಿಕರೊಂದಿಗೆ ಸಂಪರ್ಕ ಸಾಧಿಸಲು ಸಾಧ್ಯವಾಗದ ಕಾರಣ ಆತಂಕ ಸೃಷ್ಟಿಯಾಗಿತ್ತು. ಆದರೆ ನಾವೆಲ್ಲರೂ ಮನಾಲಿಯ ಹೋಟೆಲ್‌ವೊಂದರಲ್ಲಿ ಸುರಕ್ಷಿತವಾಗಿದ್ದೇವೆ. ಇಂದು ದೆಹಲಿಯತ್ತ ಪ್ರಯಾಣ ಬೆಳೆಸಿದ್ದು, ಗುರುವಾರ ರಾತ್ರಿ ಮೈಸೂರು ತಲುಪುತ್ತೇವೆ ಎಂದು ಹೇಳಿದರು.

ಮೈಸೂರಿನಿಂದ ರಮ್ಯ, ಮಹೇಶ್, ವೀಣಾ, ಗೋಪಾಲ್, ಸುಮುಖ್, ಸುಮಿತ್, ಪ್ರೀತಿ, ಯತೀಶ್, ನವ್ಯ, ಶ್ರೀನಿಧಿ, ರೂಮಾನಜ್, ಸೈಯ್ಯದ್ ಇಶಾಕ್, ತಿರುಪತಿ, ಅಭಿರಾಮಿ, ಪದ್ಮನಾಭ್, ಅಶ್ವಿನಿ, ರಾಕೇಶ್, ಧರ್ಮೇಶ್ ಅವರು ಪ್ರವಾಸಕ್ಕೆ ಬಂದಿದ್ದು, ಅವರು ಮೈಸೂರಿನ ಗಾಂಧಿನಗರ, ಕುವೆಂಪುನಗರ, ವಿದ್ಯಾರಣ್ಯಪುರಂ, ಗೋಣಿಕೊಪ್ಪ ಹಾಗೂ ಕೆ.ಆರ್.ಪೇಟೆಯವರಾಗಿದ್ದಾರೆ ಎಂದು ಧರ್ಮೇಶ್ 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.

ಮನಾಲಿಯಲ್ಲಿ ಸ್ಥಳೀಯ ಆಡಳಿತವು ರಕ್ಷಣಾ ಕಾರ್ಯದಲ್ಲಿ ತೊಡಗಿದ್ದು, ಊಟ–ತಿಂಡಿ, ವಸತಿಗೆ ಅನುಕೂಲ ಕಲ್ಪಿಸಿದೆ. ಇದೀಗ ಮಳೆ ಪ್ರಮಾಣ ಕಡಿಮೆಯಾಗಿರುವುದರಿಂದ ನಾವು ಟೆಂಪೋ ಟ್ರಾವೆಲ್‌ಗಳಲ್ಲಿ ದೆಹಲಿಗೆ ಹೋಗುತ್ತಿದ್ದೇವೆ ಎಂದು ಧರ್ಮೇಶ್ ತಿಳಿಸಿದರು. ನಾವೆಲ್ಲಾ ಸುರಕ್ಷಿತವಾಗಿದ್ದೇವೆ. ಆತಂಕ ಬೇಡ. ಮಾಹಿತಿಗಾಗಿ ನನ್ನ ಮೊಬೈಲ್ ಸಂಖ್ಯೆ 9980342636ಗೆ ಸಂಪರ್ಕಿಸಬಹುದೆಂದು ತಿಳಿಸಿದ್ದಾರೆ.

ಸಂಪರ್ಕಕ್ಕೆ ಸಿಗದ ಮೈಸೂರು ನವದಂಪತಿ

ಮೈಸೂರು,ಜು.12(ಆರ್‌ಕೆ)–ನೆರೆ ಹಾವಳಿಯಿಂದ ತತ್ತರಿಸಿರುವ ಉತ್ತರ ಭಾರತ ಪ್ರವಾಸಕ್ಕೆ ತೆರಳಿರುವ ಮೈಸೂರಿನ ನವದಂಪತಿ ಬಗ್ಗೆ ಮಾಹಿತಿ ಲಭ್ಯವಾಗದ ಕಾರಣ ಕುಟುಂಬದವರಲ್ಲಿ ಆತಂಕ ಹೆಚ್ಚಾಗಿದೆ.



ಮೈಸೂರಿನ ಸಿದ್ಧಾರ್ಥನಗರ ನಿವಾಸಿ ಅಂಕುಶ ಪರ್ಮಾರ ಹಾಗೂ ಪತ್ನಿ ನೇಹಾ ಭಟ್ಕಳ್ ಅವರ ಮೊಬೈಲ್ ಫೋನ್‌ಗಳು ಸಂಪರ್ಕಕ್ಕೆ ಸಿಗುತ್ತಿಲ್ಲ ಎಂದು ಕುಟುಂಬದವರು ತಿಳಿಸಿದ್ದಾರೆ. ಜೂನ್ 1ರಂದು ಮೈಸೂರಿನಿಂದ ಉತ್ತರ ಪ್ರದೇಶದ ತೋಶ ಪ್ರದೇಶಕ್ಕೆ ತೆರಳಿದ್ದ ಈ ದಂಪತಿ ಮಂಗಳವಾರ (ಜು.11) ಮೈಸೂರಿಗೆ ಹಿಂದಿರುಗಬೇಕಾಗಿತ್ತು. ಆದರೆ ಇದುವರೆಗೂ ಅವರ ಬಗ್ಗೆ ಯಾವುದೇ ಮಾಹಿತಿ ದೊರೆತಿಲ್ಲ. ಮಂಗಳವಾರ ರಾತ್ರಿವರೆಗೆ ಕಾದಿದ್ದ ಮನೆಯವರು, ಇಂದು ಮೈಸೂರು ಜಿಲ್ಲಾಡಳಿತಕ್ಕೆ ಮಾಹಿತಿ ನೀಡಿದ ಹಿನ್ನೆಲೆಯಲ್ಲಿ ಜಿಲ್ಲಾ ವಿಪತ್ತು ನಿರ್ವಹಣಾಧಿಕಾರಿ ಸುಧೀರ್, ಸಂಬಂಧಪಟ್ಟ ಇಲಾಖೆ ಅಧಿಕಾರಿಗಳ ಸಂಪರ್ಕಿಸಿ ವಿಷಯ ತಿಳಿಸಿದ್ದರಾದರೂ, ಅಂಕುಶ ಮತ್ತು ನೇಹಾ ಅವರ ಬಗ್ಗೆ ಮಾಹಿತಿ ಲಭ್ಯವಾಗಿಲ್ಲ. ಒಂದೆಡೆ ಜಿಲ್ಲಾಡಳಿತ ಸಂಪರ್ಕಿಸಲು ಪ್ರಯತ್ನಿಸುತ್ತಿದ್ದರೆ, ಮತ್ತೊಂದೆಡೆ ಕುಟುಂಬದವರೂ ಪ್ರಯತ್ನ ಮುಂದುವರಿಸಿದ್ದಾರೆ. ನೇಹಾ ಮತ್ತು ಅಂಕುಶ ತಂದೆ–ತಾಯಿ, ಸಂಬಂಧಿಕರಲ್ಲಿ ಆತಂಕ ಹೆಚ್ಚಾಗಿದೆ.

ಬಿ.ಕೆ.ಮೀನಾಕ್ಷಿ ಅಕ್ಕನವರು ದೇಹತ್ಯಾಗ

ಗೋಣಿಕೊಪ್ಪಲು, ಜು. 12–ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವ ವಿದ್ಯಾಲಯದ ಹಿರಿಯ ರಾಜ್ಯೋಗಿನಿ ಬಿ.ಕೆ.ಮೀನಾಕ್ಷಿ ಅಕ್ಕನವರು ಮಂಗಳವಾರ (ಜು.11) ಬೆಳಗ್ಗೆ 5 ಗಂಟೆಗೆ ಮಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ದೇಹ ತ್ಯಾಗ ಮಾಡಿದ್ದಾರೆ.



ಇವರು ಪೂರ್ವಾಶ್ರಮದಲ್ಲಿ ಕೊಡಗಿನ ಪೊನ್ನಂಪೇಟೆ ತಾಲೂಕಿನ ಚಿಕ್ಕಮಂಡೂರಿನವರಾಗಿದ್ದು, ಕಳ್ಳಿಚಂಡ ಕೆ.ಮಾಚಯ್ಯ ಹಾಗೂ ಪಾರ್ವತಿ ದಂಪತಿಯ ಹಿರಿಯ ಪುತ್ರಿಯಾಗಿದ್ದು, ನಾಲ್ವರು ಸಹೋದರರನ್ನು ಅಗಲಿದ್ದಾರೆ. ತಮ್ಮ ವಿದ್ಯಾಭ್ಯಾಸವನ್ನು ಪೊನ್ನಂಪೇಟೆಯಲ್ಲಿ ಮುಗಿಸಿ 1979ರಲ್ಲಿ ಗೋಣಿಕೊಪ್ಪ ಬ್ರಹ್ಮಾಕುಮಾರಿ ವಿಶ್ವವಿದ್ಯಾಲಯದಲ್ಲಿ ಈಶ್ವರೀಯ ಜ್ಞಾನವನ್ನು ಪಡೆದುಕೊಂಡು 1981ರಿಂದ ಅನೇಕ ಶಾಖೆಯಲ್ಲಿ ಸೇವೆ ಸಲ್ಲಿಸಿ 1993ರಿಂದ ಸಂಪೂರ್ಣವಾಗಿ ಕೇರಳದ ಕಣ್ಣೂರಿನಲ್ಲಿ ಮುಖ್ಯ ಸಂಚಾಲಕಿಯಾಗಿ ನಿರಂತರ ಸೇವೆ ಮಾಡುತ್ತಾ, ಅನೇಕ ಜನರ ಜೀವನದ ಪರಿವರ್ತನೆಗೆ ಕಾರಣಕರ್ತರಾಗಿದ್ದಾರೆ.

ಜು.12 (ಬುಧವಾರ) ಬೆಳಗ್ಗೆ 9.30 ರಿಂದ 10.30 ಗಂಟೆವಾರೆಗೆ, ಪಾರ್ಥಿವ ಶರೀರದ ಅಂತಿಮ ದರ್ಶನಕ್ಕೆ ಬ್ರಹ್ಮಾ ಕುಮಾರಿ ಈಶ್ವರೀಯ ವಿಶ್ವವಿದ್ಯಾಲಯ ಗೋಣಿಕೊಪ್ಪ ಶಾಖೆಗೆ ತರಲಾಗುತ್ತದೆ. ನಂತರ ಸ್ವಗ್ರಾಮವಾದ ಚಿಕ್ಕಮಂಡೂರಿನಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಯಿತು ಎಂದು ಮೂಲಗಳು ತಿಳಿಸಿವೆ.

ಇವರ ಅಗಲಿಕೆಗೆ ಮೈಸೂರು ವಲಯದ ಹಿರಿಯ ಸಂಚಾಲಕಿ ಬಿ.ಕೆ. ಲಕ್ಷ್ಮೀ ಬೆಹಂಜಿ, ಕೊಡಗು ವಲಯದ ಮುಖ್ಯ ಸಂಚಾಲಕಿ ಬಿ.ಕೆ.ಗಾಯತ್ರಿ ಬೆಹಂಜಿ ಹಾಗೂ ಸಮಸ್ತ ಬ್ರಹ್ಮಾ ಕುಮಾರಿಸ್ ಸಹೋದರ, ಸಹೋದರಿಯರು ಶ್ರದ್ಧಾಂಜಲಿ ಸಲ್ಲಿಸಿದ್ದಾರೆ.

ಉಚಿತ ತರಬೇತಿಗೆ ಅರ್ಜಿ ಆಹ್ವಾನ

ಮೈಸೂರು, ಜು. 12– ವಿಕಲಚೇತನರಿಗೆ ಉದ್ಯೋಗ ಕೇಂದ್ರಿತ ಉಚಿತ ತರಬೇತಿಗೆ ಸಮರ್ಥನಂ ಅಂಗವಿಕಲರ ಸಂಸ್ಥೆ ಅರ್ಜಿ ಆಹ್ವಾನಿಸಿದೆ. ದೈಹಿಕ, ದೃಷ್ಟಿ, ವಾಕ್ ಮತ್ತು ಶ್ರವಣ ನ್ಯೂನತೆ ಇರುವ ವಿಕಲಚೇತನರು ಅರ್ಜಿ ಸಲ್ಲಿಸಬಹುದು. ಕನಿಷ್ಠ 10ನೇ ತರಗತಿ ಉತ್ತೀರ್ಣರಾಗಿರಬೇಕು, 18 ರಿಂದ 30 ವರ್ಷದ ಒಳಗಿನ ವಿಕಲ ಚೇತನರು ಅರ್ಜಿ ಸಲ್ಲಿಸಬಹುದಾಗಿದೆ. ಸದರಿ ತರಬೇತಿಯು ಜುಲೈ ಮೊದಲನೇ ವಾರದಿಂದ ಪ್ರಾರಂಭವಾಗಿದ್ದು, ತರಬೇತಿ, ಪಠ್ಯಕ್ರಮ, ಊಟ ಮತ್ತು ವಸತಿ, ಮತ್ತು ಪ್ರಮಾಣಪತ್ರ ಎಲ್ಲವೂ ಉಚಿತವಾಗಿರುತ್ತದೆ. ತರಗತಿಯ ಅವಧಿಯು 3 ತಿಂಗಳು ಇರುತ್ತದೆ. ಸಮರ್ಥನಂ ಅಂಗವಿಕಲರ ಸಂಸ್ಥೆ ವಿಕಲಚೇತನರಿಗೆ ತರಬೇತಿ ನೀಡುವಲ್ಲಿ 22 ವರ್ಷಗಳ ಸುದೀರ್ಘವಾದ ಅನುಭವ, ನುರಿತ ಹಾಗೂ ಅನುಭವವುಳ್ಳ ತರಬೇತಿದಾರರು, ಪ್ರತಿಯೊಬ್ಬರ ವಿಚಾರದಲ್ಲೂ ವೈಯಕ್ತಿಕ ಗಮನದ ಜೊತೆಗೆ ಸುಸಜ್ಜಿತ ತರಬೇತಿ ಕೇಂದ್ರ, ಉತ್ತಮ ಪೌಷ್ಟಿಕ ಆಹಾರ ಹಾಗೂ ವಸತಿ ಸೌಲಭ್ಯಗಳು ಅಲ್ಲದೇ ಉದ್ಯೋಗ ದೊರಕಿಸುವಲ್ಲಿ ಬೆಂಬಲ ನೀಡುತ್ತದೆ. ಹೆಚ್ಚಿನ ಮಾಹಿತಿಗಾಗಿ 9449864693, 08068333399, 6364867818 ಸಂಪರ್ಕಿಸಬಹುದು.

ಮೈಸೂರು ಮಿತ್ರ

ನರಸೀಪುರದಲ್ಲಿ ಹತ್ಯೆಗೀಡಾದ ವೇಣುಗೋಪಾಲ್ ನಿವಾಸಕ್ಕೆ ಮಾಜಿ ಸಚಿವ ಬಿ.ಶ್ರೀರಾಮುಲು ಭೇಟಿ

ರಾಜ್ಯದಲ್ಲಿ ಹಿಂದೂ ಪರ ಸಂಘಟನೆಗಳ ಕಾರ್ಯಕರ್ತರಿಗೆ ರಕ್ಷಣೆ ಇಲ್ಲ: ಶ್ರೀರಾಮುಲು

ತಿ.ನರಸೀಪುರ, ಜು.12– ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಹಿಂದೂ ಪರ ಸಂಘಟನೆಯ ಕಾರ್ಯಕರ್ತರಿಗೆ ರಕ್ಷಣೆ ಇಲ್ಲದಂತಾಗಿದ್ದು, ಸಂಘಟನೆಯ ಮುಖ್ಯಸ್ಥರನ್ನು ಮುಗಿಸುವ ಸಂಚು ನಡೆದಿದೆ. ಹಾಗಾಗಿ ಕಾರ್ಯಕರ್ತರು ಜಾಗೃತರಾಗಿರಬೇಕೆಂದು ಮಾಜಿ ಸಚಿವ ಬಿ.ಶ್ರೀರಾಮುಲು ಕರೆ ನೀಡಿದರು.

ಪಟ್ಟಣದಲ್ಲಿ ಭಾನುವಾರ ಹತ್ಯೆಗೀಡಾದ ಯುವ ಬ್ರಿಗೇಡ್ ಕಾರ್ಯಕರ್ತ ವೇಣುಗೋಪಾಲ್ ಅವರ ಮನೆಗೆ ಭೇಟಿ ನೀಡಿ, ಕುಟುಂಬಸ್ಥರಿಗೆ ಸಾಂತ್ವನ ಹೇಳಿ ಪತ್ರಕರ್ತರೊಂದಿಗೆ ಅವರು ಮಾತನಾಡಿದರು.

ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂದ ಮೇಲೆ 16 ಮಂದಿ ಹಿಂದೂ ಕಾರ್ಯಕರ್ತರನ್ನು ಹತ್ಯೆ ಮಾಡಲಾಗಿದೆ. ಒಂದು ಕಡೆ ಜೈನಮುನಿಗಳ ಹತ್ಯೆಯಾದರೆ ನಿನ್ನೆ ಬೆಂಗಳೂರಿನಲ್ಲಿ ಹಿಂದೂಪರ ಸಂಘಟನೆಯ ಕಾರ್ಯಕರ್ತನನ್ನು ಕೊಲೆ ಮಾಡಲಾಗಿದೆ ಸರ್ಕಾರದಲ್ಲಿ ಯಾರಿಗೂ ರಕ್ಷಣೆ ಇಲ್ಲದಂತಾಗಿದ್ದು, ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಸಂಪೂರ್ಣವಾಗಿ ಹದಗೆಟ್ಟಿದೆ. ದಿನದಿಂದ ದಿನಕ್ಕೆ ಹಿಂದೂಗಳ ಹತ್ಯೆಯಾಗುತ್ತಿವೆ. ಮುಖ್ಯಮಂತ್ರಿಗಳು, ಗೃಹ ಸಚಿವರು ಏನು ಮಾಡುತ್ತಿದ್ದಾರೆ. ಮುಖ್ಯಮಂತ್ರಿಗಳ ತವರು ಕ್ಷೇತ್ರದಲ್ಲೇ ಈ ರೀತಿಯ ಹತ್ಯೆಗಳಾದರೆ ರಾಜ್ಯದ ಪರಿಸ್ಥಿತಿ ಏನು ಎಂದು ರಾಮುಲು ಆತಂಕ ವ್ಯಕ್ತಪಡಿಸಿದರು.



ತಿ.ನರಸೀಪುರದಲ್ಲಿ ಹತ್ಯೆಗೀಡಾದ ಯುವ ಬ್ರಿಗೇಡ್ ಕಾರ್ಯಕರ್ತ ವೇಣುಗೋಪಾಲ್ ನಿವಾಸಕ್ಕೆ ಭೇಟಿ ನೀಡಿದ ಮಾಜಿ ಸಚಿವ ಬಿ.ಶ್ರೀರಾಮುಲು, ಕುಟುಂಬಸ್ಥರಿಗೆ ಸಾಂತ್ವನ ಹೇಳಿದರು.

ಕಾಂಗ್ರೆಸ್ ಪಕ್ಷದವರಿಗೆ ಅಧಿಕಾರ ಬೇಕಾಗಿತ್ತು, ಈಗ ಅದು ಸಿಕ್ಕಿದೆ,ಈಗ ರಾಜ್ಯದಲ್ಲಿ ಈ ರೀತಿಯ ಕೃತ್ಯಗಳಿಗೆ ಕುಮ್ಮಕ್ಕು ನೀಡುವ ಕೆಲಸ ಮಾಡುತ್ತಿದ್ದಾರೆ ಎಂದು ಆರೋಪಿಸಿದ ಅವರು, ವೇಣುಗೋಪಾಲ್‌ನನ್ನು ಈ ರೀತಿ ಬರ್ಬರವಾಗಿ ಹತ್ಯೆ ಮಾಡುವ ಉದ್ದೇಶವಾದರೂ ಏನಿತ್ತು.ಆತ ಹಿಂದೂ ಪರ ಸಂಘಟನೆಯಲ್ಲಿ ಕೆಲಸ ಮಾಡುತ್ತಿದ್ದ ಸಾಮಾನ್ಯ ಮನುಷ್ಯ, ಈ ರೀತಿ ಹತ್ಯೆಗಳಿಂದ ಅವರು ಮಾಡುವ ಸಾಧನೆಯಾದರೂ ಏನು ಎಂದು ಪ್ರಶ್ನಿಸಿದರು. ಶವದ ಮೇಲೆ ಬಿಜೆಪಿ ರಾಜಕಾರಣ ಮಾಡುತ್ತಿದೆ ಎಂದು ಕಾಂಗ್ರೆಸ್ ಮುಖಂಡರೊಬ್ಬರ ಹೇಳಿಕೆಯನ್ನು ಪ್ರಸ್ತಾಪಿಸಿದ ರಾಮುಲು, ಶವದ ಮೇಲೆ ರಾಜಕಾರಣ ಮಾಡುವ ಮನಸ್ಥಿತಿ ನಮ್ಮದಲ್ಲ, ನಮ್ಮದು ಪ್ರಜಾಪ್ರಭುತ್ವ ರಾಷ್ಟ್ರ,ಯಾವೊಬ್ಬ ಪ್ರಜೆಗೆ ಅನ್ಯಾಯವಾದರೆ ಎಲ್ಲರೂ ದನಿಗೂಡಿಸಬೇಕಾಗುತ್ತದೆ. ವೇಣುಗೋಪಾಲ ಏನಾದರೂ ಸಮಾಜಘಾತಕ ಕೃತ್ಯಗಳಲ್ಲಿ ಭಾಗಿಯಾಗಿದ್ದಾನಾ, ಆತ ಏನು ತಪ್ಪು ಮಾಡಿದ್ದ, ಕೇವಲ ಹನುಮ ಜಯಂತಿ ಮಾಡಿದನೆಂಬ ಕಾರಣಕ್ಕೆ ಹತ್ಯೆ ಮಾಡಿದ್ದಾರೆ. ಆತನ ಫೋನ್ ಕಾಲ್ ಪರಿಶೀಲನೆ ಮಾಡಿ, ಯಾರ್‍ಯಾರು ಆತನ ಸಂಪರ್ಕದಲ್ಲಿದ್ದರು, ಯಾರ ಕುಮ್ಮಕ್ಕಿನಿಂದ ಹತ್ಯೆಯಾಗಿದೆ ಎಂಬುದು ಬಯಲಿಗೆ ಬರಲಿದೆ ಎಂದರು.

ಈ ವೇಳೆ ಜಿಲ್ಲಾಧ್ಯಕ್ಷೆ ಮಂಗಳಾ ಸೋಮಶೇಖರ್, ತಾಲೂಕು ಅಧ್ಯಕ್ಷ ಕೆ.ಸಿ.ಲೋಕೇಶ್ ನಾಯಕ್, ಬಿಜೆಪಿ ನಿಕಟಪೂರ್ವ ಅಭ್ಯರ್ಥಿ ಡಾ.ರೇವಣ್ಣ, ಪುರಸಭಾ ಸದಸ್ಯ ಎಸ್.ಕೆ.ಕಿರಣ್, ಎನ್.ಲೋಕೇಶ್, ಕೆ. ನಂಜುಂಡಸ್ವಾಮಿ, ಕಿಟ್ಟಿ, ಕುರುಬೂರು ಶಿವು, ಚೌಹಳ್ಳಿ ಸಿದ್ದರಾಜು, ಬೈರಾಪುರ ಬಾಲು, ಕೆಬ್ಬೇಹುಂಡಿ ಶಿವಕುಮಾರ್, ರಂಗೂನಾಯಕ್, ವೆಂಕಟರಮಣ ಶೆಟ್ಟಿ, ಕರೋಹಟ್ಟಿ ಮಹಾದೇವಯ್ಯ, ಯುವ ಬ್ರಿಗೇಡ್ ಸಂಘಟನೆಯ ರಾಮಾನುಜಂ, ಮರಡೀಪುರ ನಾಗರಾಜು, ನಿವೃತ್ತ ಪಿಎಸ್ಐ ಮಹದೇವನಾಯಕ, ಮೂಗೂರು ಜಯಣ್ಣ, ಕುಮಾರ ಸೇರಿದಂತೆ ಬಿಜೆಪಿ ಕಾರ್ಯಕರ್ತರು, ಮುಖಂಡರು ಹಾಜರಿದ್ದರು.

ಚುಂಚನಕಟ್ಟೆ ಶ್ರೀರಾಮ ದೇವಾಲಯದ ಹುಂಡಿಯಲ್ಲಿ 6.65 ಲಕ್ಷ ರೂ. ಸಂಗ್ರಹ



ಚುಂಚನಕಟ್ಟೆ ಜು.12– ಸಾಲಿಗ್ರಾಮ ತಾಲೂಕಿನ ಇತಿಹಾಸ ಪ್ರಸಿದ್ಧ ಚುಂಚನಕಟ್ಟೆ ಶ್ರೀರಾಮ ದೇವಾಲಯದ ಹುಂಡಿಯಲ್ಲಿ 6.65 ಲಕ್ಷ ರೂ. ಸಂಗ್ರಹವಾಗಿದೆ.

ಇಂದು ದೇವಾಲಯದ ಆವರಣದಲ್ಲಿ ಆಡಳಿತ ಸಿಬ್ಬಂದಿ ಹಾಗೂ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ಅಧಿಕಾರಿಗಳ ತಂಡ ಹುಂಡಿ ತೆರೆದು ಎಣಿಕೆ ಮಾಡಲಾಗಿ 6,65,695 ರೂಪಾಯಿಗಳು ಸಂಗ್ರಹವಾಗಿದ್ದು ದೇವಾಲಯದ ಖಾತೆಗೆ ಜಮಾ ಮಾಡಲಾಗಿದೆ.

ಈ ಸಂದರ್ಭದಲ್ಲಿ ಉಪ ತಹಶೀಲ್ದಾರ್ ಶರತ್‌ಕುಮಾರ್, ಆರ್ಐ ಚಿದಾನಂದ ಬಾಬು, ದೇವಾಲಯದ ಇಒ ರಘು, ಪಾರುಪತ್ತೆಗಾರ ಪವನ್, ವಿಎ ಮೇಘನಾ, ಮಧು, ಭಾಗ್ಯಲಕ್ಷ್ಮಿ, ಮುಖ್ಯಪೇದೆ ಶ್ರೀನಿವಾಸ್, ಅರ್ಚಕ ವಾಸುದೇವನ್, ನಾರಾಯಣ ಅಯ್ಯಂಗಾರ್, ದೇವಾಲಯದ ಸಿಬ್ಬಂದಿಗಳು, ಅನಂತು, ಮಣಿ, ತಿಮ್ಮ ಶೆಟ್ಟಿ, ಚಂದ್ರ ನಾಯ್ಕ ಮತ್ತಿತರರು ಹಾಜರಿದ್ದರು.

ಜು.15ರಿಂದ ಹುಣಸೂರಲ್ಲಿ ವಿವಿ ಮಟ್ಟದ ಕ್ರೀಡಾಕೂಟ

ಹುಣಸೂರು, ಜು.12– ಹುಣಸೂರು ನಗರದ ಸರ್ಕಾರಿ ಮಹಿಳಾ ಕಾಲೇಜಿನ ಆತಿಥ್ಯದಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಅಂತರ ಕಾಲೇಜು ಅಂತರ ವಲಯ ಮಹಿಳೆಯರ ಕ್ರೀಡಾಕೂಟವನ್ನು ಜು.15ರಿಂದ 17ರವರೆಗೆ ಆಯೋಜಿಸಲಾಗಿದೆ ಎಂದು ಕಾಲೇಜು ಅಭಿವೃದ್ಧಿ ಸಮಿತಿ ಉಪಾಧ್ಯಕ್ಷ ಮೋದೂರು ಮಹೇಶಾರಾಧ್ಯ ತಿಳಿಸಿದ್ದಾರೆ.

ಶಾಸಕ ಜಿ.ಡಿ.ಹರೀಶ್‌ಗೌಡರ ಆಸಕ್ತಿ ಮತ್ತು ಸಂಪೂರ್ಣ ಬೆಂಬಲದೊಂದಿಗೆ ಇದೇ ಮೊದಲ ಬಾರಿಗೆ ಹುಣಸೂರಿನಲ್ಲಿ ವಿಶ್ವವಿದ್ಯಾನಿಲಯ ಮಟ್ಟದ 13 ವಿವಿಧ ಕ್ರೀಡೆಗಳನ್ನೊಳಗೊಂಡ ಬೃಹತ್ ಕ್ರೀಡಾಕೂಟವನ್ನು ಆಯೋಜಿಸಲಾಗಿದೆ. ಕ್ರೀಡಾಕೂಟದ ಸಕಲ ಯಶಸ್ಸಿಗೆ ಶಾಸಕ ಜಿ.ಡಿ.ಹರೀಶ್‌ಗೌಡ ಬೆನ್ನೆಲುಬಾಗಿ ನಿಂತಿದ್ದಾರೆ ಎಂದು ಹೇಳಿದರು.

ಮೈಸೂರು ವಿವಿಯ 5 ವಲಯಗಳಾದ ಮಾಂಡವ್ಯ(ಮಂಡ್ಯ), ಚಾಮರಾಜ, ಮಲೆನಾಡು, ಚಾಮುಂಡಿ ಮತ್ತು ಕೃಷ್ಣರಾಜ ವಲಯಗಳಿಂದ 800ಕ್ಕೂ ಹೆಚ್ಚು ಕ್ರೀಡಾಪಟುಗಳು ಕ್ರೀಡಾಕೂಟದಲ್ಲಿ ಭಾಗವಹಿಸಲಿದ್ದಾರೆ. ತಾಲೂಕಿನ ಕ್ರೀಡಾಸಕ್ತರು, ದಾನಿಗಳು ಕ್ರೀಡಾಕೂಟದ ಯಶಸ್ವಿಗಾಗಿ ಕೈಜೋಡಿಸಿದ್ದು, ಹಬ್ಬದ ಸಂಭ್ರಮದೊಂದಿಗೆ ಕ್ರೀಡಾಕೂಟ ನಡೆಯಲಿದೆ ಎಂದು ಸುದ್ದಿಗೋಷ್ಠಿಯಲ್ಲಿ ಅವರು ವಿವರಿಸಿದರು. ಕಾಲೇಜಿನ ದೈಹಿಕ ಶಿಕ್ಷಣ ನಿರ್ದೇಶಕ ಡಾ.ಕೆ.ಎಸ್.ಭಾಸ್ಕರ್ ಮಾತನಾಡಿ, ಜು.15ರ ಬೆಳಗ್ಗೆ 9.30ಕ್ಕೆ ನಗರದ ಮುನೇಶ್ವರ ಕಾವಲ್ ಮೈದಾನದಲ್ಲಿ ಕ್ರೀಡಾಕೂಟಕ್ಕೆ ಶಾಸಕ ಜಿ.ಡಿ.ಹರೀಶ್‌ಗೌಡ ಚಾಲನೆ ನೀಡಲಿದ್ದಾರೆ. ವಿಶೇಷ ಆಹ್ವಾನಿತರಾಗಿ ಅಂತಾರಾಷ್ಟ್ರೀಯ ವಾಲಿಬಾಲ್ ಆಟಗಾರ್ತಿ ಎಚ್.ಎನ್.ಹೇಮಲತಾ ಭಾಗವಹಿಸಲಿದ್ದಾರೆ. ನಗರಸಭಾ ಸದಸ್ಯ ಶ್ರೀನಾಥ್, ಉಪವಿಭಾಗಾಧಿಕಾರಿ ರುಚಿ ಬಿಂದಾಲ್, ಡಿವೈಎಸ್‌ಪಿ ಮಹೇಶ್, ಪೌರಾಯುಕ್ತ ಸುಜಯ್ ಕುಮಾರ್, ಕಾಲೇಜು ಶಿಕ್ಷಣ ಇಲಾಖೆ ನೋಡಲ್ ಅಧಿಕಾರಿ ಡಾ.ಆರ್.ಶ್ರೀಕಾಂತ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ ಎಂದರು.



ಹಾಕಿ, ಕುಡ್ಡಿ, ವಾಲಿಬಾಲ್, ಥ್ರೋಬಾಲ್, ಬಾಸ್ಕೆಟ್ ಬಾಲ್, ಟೆನಿಕಾಯ್ಟ್, ಷಟಲ್ ಬ್ಯಾಡ್ಮಿಂಟನ್, ಬಾಲ್ ಬ್ಯಾಡ್ಮಿಂಟನ್, ಚೆಸ್, ಸಾಫ್ಟ್ ಬಾಲ್, ಹ್ಯಾಂಡ್‌ಬಾಲ್, ಖೋ–ಖೋ, ಟೆನಿಸ್, ಟೇಬಲ್ ಟೆನಿಸ್ ಕ್ರೀಡೆಗಳ ಪಂದ್ಯಾವಳಿ ಆಯೋಜನೆಗೊಂಡಿದ್ದು, ವಲಯ ಮಟ್ಟದಿಂದ ಆಯ್ಕೆಯಾಗಿ ನೇರವಾಗಿ ಕ್ರೀಡಾಕೂಟದಲ್ಲಿ ಭಾಗವಹಿಸಲು ಈಗಾಗಲೇ 60 ತಂಡಗಳು ನೋಂದಣಿಗೊಂಡಿವೆ. ಮಿಕ್ಕಂತೆ ಕ್ರೀಡಾಕೂಟದಲ್ಲಿ ಭಾಗವಹಿಸಲು ಈಗಾಗಲೇ 36 ತಂಡಗಳು ನೋಂದಾಯಿಸಿಕೊಂಡಿವೆ ಎಂದರು. ಸಮಾರೋಪ ಸಮಾರಂಭ ಮತ್ತು ಬಹುಮಾನ ವಿತರಣಾ ಕಾರ್ಯಕ್ರಮವನ್ನು ಜು.17ರಂದು ಕಾಲೇಜು ಆವರಣದಲ್ಲಿ ಆಯೋಜಿಸಲಾಗಿದ್ದು, ಶಾಸಕ ಜಿ.ಡಿ.ಹರೀಶ್‌ಗೌಡ ವಿಜೇತರಿಗೆ ಬಹುಮಾನಗಳನ್ನು ವಿತರಿಸಲಿದ್ದಾರೆ. ಸಮಾರೋಪ ಭಾಷಣವನ್ನು ಮೈಸೂರು ವಿವಿಯ ಕುಲಸಚಿವರಾದ ವಿ.ಆರ್. ಶೈಲಜಾ ನೆರವೇರಿಸಲಿದ್ದಾರೆ.

ಸರಿಯಾಗಿ ಕರ್ತವ್ಯ ನಿರ್ವಹಿಸದ ಅಧಿಕಾರಿಗಳ ವಿರುದ್ಧ ದೂರು



ಸಾರ್ವಜನಿಕರಿಂದ ದೂರು ಸ್ವೀಕರಿಸಿದ ಲೋಕಾಯುಕ್ತ ಡಿವೈಎಸ್‌ಪಿ ಮಾಲ್ತೇಶ್

ಪಿರಿಯಾಪಟ್ಟಣ, ಜು.12– ಸರ್ಕಾರಿ ಕಚೇರಿಗಳಲ್ಲಿ ತಮ್ಮ ಕೆಲಸ ಮಾಡಿಕೊಡದೆ ಕಚೇರಿಗೆ ಅಲೆದಾಡಿಸಿದರೂ ಸಹ ಸಾರ್ವಜನಿಕರು ಲೋಕಾಯುಕ್ತ ಪೊಲೀಸರಿಗೆ ದೂರು ನೀಡಬಹುದು ಎಂದು ಲೋಕಾಯುಕ್ತ ಡಿವೈಎಸ್‌ಪಿ ಮಾಲ್ತೇಶ್ ತಿಳಿಸಿದರು.

ಪಟ್ಟಣದ ತಾಲೂಕು ಪಂಚಾಯಿತಿ ಸಭಾಂಗಣದಲ್ಲಿ ಸಾರ್ವಜನಿಕರಿಂದ ದೂರು ಸ್ವೀಕರಿಸಿ ಮಾತನಾಡಿದ ಅವರು, ತಾಲೂಕಿನ ವಿವಿಧ ಇಲಾಖೆಗಳ ಅಧಿಕಾರಿಗಳು ಸರಿಯಾಗಿ ಕರ್ತವ್ಯ ನಿರ್ವಹಿಸುತ್ತಿಲ್ಲ ಹಾಗೂ ಯಾರಿಗೂ ಹೆದರುವುದಿಲ್ಲ ಎಂಬ ದೂರು ಕೇಳಿಬರುತ್ತಿದೆ ಎಂದರು.

ತಮ್ಮ ಇಲಾಖೆಗಳಲ್ಲಿ ಕ್ಯಾಶ್ ಡಿಕ್ಲರೇಷನ್ ಪುಸ್ತಕಗಳನ್ನು ಕಡ್ಡಾಯವಾಗಿ ನಮೂದಿಸಬೇಕು. ತಾಲೂಕಿನಲ್ಲಿರುವ ಕೆರೆಗಳನ್ನು ರಕ್ಷಿಸುವುದು ಆಯಾಯ ಸಂಬಂಧಪಟ್ಟ ಅಧಿಕಾರಿಗಳ ಕರ್ತವ್ಯವಾಗಿದೆ ಆದರೆ ಅಧಿಕಾರಿಗಳ ನಿರ್ಲಕ್ಷದಿಂದ ಕೆರೆಗಳು ಕ್ಷೀಣಿಸುತ್ತಿವೆ. ಮುಂದಿನ ಪೀಳಿಗೆಯ ಏಳಿಗಾಗಿ ಸಂಬಂಧಪಟ್ಟ ಅಧಿಕಾರಿಗಳು ಕೆರೆಗಳ ರಕ್ಷಣೆಗೆ ಮುಂದಾಗಬೇಕು ಹಾಗೂ ತಾಲೂಕಿನಲ್ಲಿರುವ ಕೆರೆಗಳ ಸಂಖ್ಯೆಯ ಮಾಹಿತಿಯನ್ನು ಶೀಘ್ರವೇ ನೀಡಬೇಕೆಂದು ಸಾರ್ವಜನಿಕರು ಸರ್ಕಾರಿ ಅಧಿಕಾರಿಗಳಿಗೆ ಕರೆ ಮಾಡಿದಾಗ ದೂರವಾಣಿಗಳನ್ನು ಸ್ವೀಕರಿಸುತ್ತಿಲ್ಲ ಎಂಬ ದೂರು ಹೆಚ್ಚಾಗಿ ಕೇಳಿ ಬರುತ್ತಿದ್ದು, ಇಂತಹ ವರ್ತನೆಗಳನ್ನು ಸರಿಪಡಿಸಿಕೊಳ್ಳಬೇಕು. ಇಲ್ಲದಿದ್ದರೆ ಅಂತಹ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂದು ಅವರು ಎಚ್ಚರಿಸಿದರು.

ಕುಡಿಯುವ ನೀರಿನ ಟ್ಯಾಂಕ್‌ಗಳನ್ನು ಶುಚಿಗೊಳಿಸದೆ ಪಂಚಾಯಿತಿಗಳಲ್ಲಿ ಅಭಿವೃದ್ಧಿ ಅಧಿಕಾರಿಗಳು ನಕಲಿ ಬಿಲ್ಲುಗಳನ್ನು ಮಾಡುತ್ತಿದ್ದಾರೆ. ಈ ಬಗ್ಗೆ ಹೆಚ್ಚು ನಿಗಾ ವಹಿಸಬೇಕೆಂದು ತಾಲೂಕು ಕಾರ್ಯನಿರ್ವಹಕಾಧಿಕಾರಿಗಳಿಗೆ ಸೂಚನೆ ನೀಡಿದರು. ಅಂಗನವಾಡಿ ಕೇಂದ್ರಗಳಲ್ಲಿ ನೌಕರರು ರೊಟೇಶನ್ ಆಧಾರದ ಮೇಲೆ ಕೆಲಸ ನಿರ್ವಹಿಸುತ್ತಿದ್ದು, ಶುಚಿತ್ವಕ್ಕೆ ಮಹತ್ವ ನೀಡುತ್ತಿಲ್ಲ. ಇದನ್ನು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಅಧಿಕಾರಿಗಳು ಗಂಭೀರವಾಗಿ ಪರಿಗಣಿಸಿಬೇಕು. ಹೀಗೆ ತಾಲೂಕಿನ ವಿವಿಧ ಇಲಾಖೆಗಳ ಮೇಲೆ ದೂರುಗಳು ಕೇಳಿ ಬರುತ್ತಿದ್ದು ಅಧಿಕಾರಿಗಳು ಎಚ್ಚರ ವಹಿಸಿ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಬೇಕು. ಪಟ್ಟಣದ ಪುರಸಭೆ, ವಿದ್ಯುತ್ ಇಲಾಖೆ, ಶಿಕ್ಷಣ ಇಲಾಖೆ, ಕಂದಾಯ ಇಲಾಖೆ, ಗ್ರಾಮ ಪಂಚಾಯಿತಿ ಗಳಿಗೆ ಸಂಬಂಧಪಟ್ಟಂತೆ ಹೆಚ್ಚು ದೂರುಗಳು ಕೇಳಿ ಬರುತ್ತಿವೆ ಇಂತಹ ದೂರುಗಳ ಬಗ್ಗೆ ಹೆಚ್ಚು ನಿಗಾವಹಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಸುಮಾರು 30 ದೂರುಗಳನ್ನು ಸ್ವೀಕರಿಸಿ ಇವುಗಳ ಪೈಕಿ ಕೆಲವು ದೂರುಗಳಿಗೆ ಸ್ಥಳದಲ್ಲೇ ಪರಿಹಾರ ನೀಡಿ ಮತ್ತೆ ಕೆಲವು ದೂರುಗಳಿಗೆ ಸಂಬಂಧಪಟ್ಟ ಇಲಾಖೆಯ ಮುಖ್ಯಸ್ಥರ ಮುಖಾಂತರ ಸೂಕ್ತ ಕ್ರಮ ವಹಿಸುವಂತೆ ತಿಳಿಸಿದರು.

ಈ ಸಂದರ್ಭದಲ್ಲಿ ಲೋಕಾಯುಕ್ತ ಇನ್‌ಸ್ಪೆಕ್ಟರ್, ರೂಪಶ್ರೀ, ರವಿಕುಮಾರ, ಉಮೇಶ್, ತಹಸೀಲ್ದಾರ್ ಕುಂಜಿ ಅಹಮದ್ ಸರ್ಕಲ್ ಇನ್‌ಸ್ಪೆಕ್ಟರ್ ಶ್ರೀಧರ್ ಲೋಕಾಯುಕ್ತ ಕಚೇರಿಯ ಸಿಬ್ಬಂದಿಗಳಾದ ತ್ರಿವೇಣಿ, ಪ್ರದೀಪ್ ಸೇರಿದಂತೆ ತಾಲೂಕಿನ ವಿವಿಧ ಇಲಾಖೆಯ ಅಧಿಕಾರಿಗಳು, ಪಿಡಿಓ ಗಳು ಹಾಜರಿದ್ದರು.

ಶ್ರೀಕಂಠೇಶ್ವರಸ್ವಾಮಿ ಹುಂಡಿಯಲ್ಲಿ 1.77 ಕೋಟಿ ರೂ.



ನಂಜನಗೂಡು, ಜು.12– ನಗರದ ಶ್ರೀಕಂಠೇಶ್ವರಸ್ವಾಮಿ ದೇವಾಲಯದ 34 ಹುಂಡಿಗಳಲ್ಲಿ 1.77 ಕೋಟಿ ಹಣ ಸಂಗ್ರಹವಾಗಿದೆ.

ದೇವಾಲಯದ ದಾಸೋಹ ಭವನದಲ್ಲಿ ಬುಧವಾರ ಪೊಲೀಸರ ಭದ್ರತೆಯಲ್ಲಿ ಹುಂಡಿಗಳನ್ನು ತೆರೆದು ಎಣಿಕೆ ಕಾರ್ಯ ನಡೆಸಲಾಯಿತು. ನಗದು 1,77,08,710 ರೂ., ಚಿನ್ನ 65 ಗ್ರಾಂ, 3.5 ಕೆ.ಜಿ ಬೆಳ್ಳಿ ಹಾಗೂ 64 ವಿದೇಶಿ ಕರೆನ್ಸಿಗಳು ದೊರೆತಿವೆ.

ಕೆನರಾಬ್ಯಾಂಕ್ ಹಾಗೂ ದೇವಾಲಯದ ಸಿಬ್ಬಂದಿ, ನೂರಕ್ಕೂ ಹೆಚ್ಚು ಸ್ವಸಹಾಯ ಸಂಘದ ಮಹಿಳಾ ಸದಸ್ಯೆಯರು ಹುಂಡಿಯ ಹಣ ಎಣಿಕೆಯಲ್ಲಿ ಭಾಗಿಯಾಗಿದ್ದರು.

ದೇವಾಲಯದ ಇಒ ಜಗದೀಶ್ ಕುಮಾರ್, ಲೆಕ್ಕಾಧಿಕಾರಿ ಗುರುಮಲ್ಲಯ್ಯ, ಕೆನರಾ ಬ್ಯಾಕ್ ವ್ಯವಸ್ಥಾಪಕಿ ಲಕ್ಷ್ಮಿ ಉಪಸ್ಥಿತರಿದ್ದರು.

ವೇಣುಗೋಪಾಲ್ ನಿವಾಸಕ್ಕೆ ನಾಯಕ ಸಮಾಜದ ಮುಖಂಡರು ಭೇಟಿ, ಸಾಂತ್ವನ

ತಿ.ನರಸೀಪುರ, ಜು.12– ತಿ.ನರಸೀಪುರ ಪಟ್ಟಣದಲ್ಲಿ ಕ್ಷುಲ್ಲಕ ಕಾರಣಕ್ಕೆ ಹತ್ಯೆಯಾದ ನಾಯಕ ಜನಾಂಗದ ಯುವ ಬ್ರಿಗೇಡ್ ಸಂಚಾಲಕ ವೇಣುಗೋಪಾಲ್ ಮನೆಗೆ ಭೇಟಿ ನೀಡಿದ ನಾಯಕ ಜನಾಂಗದ ಮುಖಂಡರು ಕುಟುಂಬಸ್ಥರಿಗೆ ಸಾಂತ್ವನ ಹೇಳಿ ಆತ್ಮಸ್ಥೈರ್ಯ ತುಂಬಿದರು.

ಸರ್ಕಾರದಿಂದ ಬರುವ ಪರಿಹಾರ ಕೊಡಿಸುವ ಸಂಬಂಧ ಸಮಾಜ ಕಲ್ಯಾಣ ಸಚಿವ ಡಾ.ಎಚ್.ಸಿ.ಮಹದೇವಪ್ಪರನ್ನು ಭೇಟಿ ಮಾಡಿ ಪರಿಹಾರ ಕೊಡಿಸಲು ಪ್ರಾಮಾಣಿಕ ಪ್ರಯತ್ನ ಮಾಡುವುದಾಗಿ ಭರವಸೆ ನೀಡಿದರು. ಈ ವೇಳೆ ಜಿಲ್ಲಾಧ್ಯಕ್ಷ ರಾಮಚಂದ್ರು, ಉಪಾಧ್ಯಕ್ಷ ನಂಜನಗೂಡು ಸುಬ್ಬಣ್ಣ, ಗುಂಡ್ಲುಪೇಟೆಯ ಮಲ್ಲೇಶ್, ಕಪನಿ ನಾಯಕ, ನಾಯಕ ಸಂಘದ ತಾಲೂಕು ಅಧ್ಯಕ್ಷ ಬನ್ನೂರು ಚಿಕ್ಕಣ್ಣ, ನಗರಸಭಾ ಸದಸ್ಯ ಆರ್.ಸುಂದರ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಡಿ.ಬಸವರಾಜು, ತಾಲೂಕು ನಾಯಕ ನೌಕರ ಸಂಘದ ಅಧ್ಯಕ್ಷ ಪಿ.ಶಶಿಧರ್, ವಾಲ್ಮೀಕಿ ಶಿಕ್ಷಣ ಸಂಸ್ಥೆಯ ಗೌರವಾಧ್ಯಕ್ಷ ಮಹದೇವಯ್ಯ, ಕಾರ್ಯದರ್ಶಿ ಆಲಗೂಡು ನಾಗರಾಜು, ಗ್ರಾಪಂ ಮಾಜಿ ಅಧ್ಯಕ್ಷ ಅಣ್ಣಯ್ಯಸ್ವಾಮಿ, ಕುಮಾರ, ಶ್ರೀನಿವಾಸ, ಮೂರ್ತಿ ಹಾಜರಿದ್ದರು.

ಜು.15, ಹೆಚ್.ಡಿ.ಕೋಟೆಯಲ್ಲಿ ಅದ್ದೂರಿ ಬಸವ ಜಯಂತಿ ಆಚರಣೆ

ವೈಭವದ ಮೆರವಣಿಗೆ, ಸಭಾ ಕಾರ್ಯಕ್ರಮದಲ್ಲಿ ಶ್ರೀಗಳು, ಗಣ್ಯರು ಭಾಗಿ



ಪತ್ರಿಕಾಗೋಷ್ಠಿಯಲ್ಲಿ ಮಾತನಾಡುತ್ತಿರುವ ಮೊತ್ತ ಬಸವರಾಜಪ್ಪ, ಮತ್ತಿತರರು.

ಹೆಚ್.ಡಿ. ಕೋಟೆ ಜು.12– ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ವತಿಯಿಂದ ಜು.15 ರಂದು ಪಟ್ಟಣದಲ್ಲಿ ವಿಜೃಂಭಣೆಯಿಂದ ಬಸವ ಜಯಂತಿಯನ್ನು ಆಚರಿಸಲಾಗುವುದು ಎಂದು ಮಹಾಸಭಾದ ತಾಲೂಕು ಅಧ್ಯಕ್ಷ ಮೊತ್ತ ಬಸವರಾಜಪ್ಪ ತಿಳಿಸಿದ್ದಾರೆ.

ತಾಲೂಕು ಪತ್ರಕರ್ತರ ಸಂಘದ ಕಚೇರಿಯಲ್ಲಿ ಪತ್ರಿಕಾಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಅವರು, ಪಟ್ಟಣದಲ್ಲಿರುವ ಶ್ರೀ ಶಿವಾತ್ರೇಶ್ವರ ಮಂಗಳ ಮಂಟಪದಲ್ಲಿ ಕಾರ್ಯಕ್ರಮ ನಡೆಯಲಿದೆ ಎಂದರು. ಅಂದು ಬೆಳಗ್ಗೆ 8 ಗಂಟೆಗೆ ಬಸವ ಜಯಂತಿ ಮೆರವಣಿಗೆಯು ನಂದಿ ಧ್ವಜ ಪೂಜೆಯೊಂದಿಗೆ ಶ್ರೀ ಬಸವೇಶ್ವರ ಪುತ್ಥಳಿಯನ್ನು ಬೆಳ್ಳಿ ರಥದಲ್ಲಿರಿಸಿ, ಶರಣರ ವಚನಗಳು, ಅಲಂಕೃತ ಚಿತ್ರಗಳು, ಭಜನಾ ಮೇಳ, ವೀರಗಾಸೆ ಕುಣಿತ, ವೀರಭದ್ರ ನೃತ್ಯ, ಮಹಿಳಾ ಜಾನಪದ ಕಲಾವಿದರಿಂದ ವೀರಗಾಸೆ ಕುಣಿತ, ಡೊಳ್ಳು ಕುಣಿತ, ಮಂಗಳ ವಾದ್ಯ, ಚಂಡೆಮದ್ದಳೆ, ನಗಾರಿ ತಮಟೆ, ಬ್ಯಾಂಡ್ ಸೆಟ್, ಗಾರುಡಿ ಗೊಂಬೆ ಸೇರಿದಂತೆ ವಿವಿಧ ಜಾನಪದ ಕಲಾತಂಡಗಳೊಂದಿಗೆ ಪದವಿ ಪೂರ್ವ ಕಾಲೇಜು ಮೈದಾನದಿಂದ ಹೊರಟು ಹೆಚ್.ಬಿ.ಮುಖ್ಯರಸ್ತೆಯ ಮೂಲಕ ಬಹಳ ಅದ್ದೂರಿ ಮತ್ತು ಸಂಭ್ರಮದಿಂದ ಮಂಗಳ ಮಂಟಪದಲ್ಲಿ ನಿರ್ಮಿಸಿರುವ ಶರಣರ ಅನುಭವ ಮಂಟಪವನ್ನು ಸೇರಲಿದೆ ಎಂದು ಅವರು ವಿವರಿಸಿದರು.

ಮೆರವಣಿಗೆಯನ್ನು ತಾಲೂಕಿನ ವಿವಿಧ ಮಠಗಳ ಮಠಾಧ್ಯಕ್ಷರಾದ ಮಹದೇವ ಸ್ವಾಮೀಜಿ, ನಾಗೇಂದ್ರ ಸ್ವಾಮೀಜಿ, ಗುರುಶಾಂತ ಸ್ವಾಮೀಜಿ, ಚನ್ನಬಸವ ಸ್ವಾಮೀಜಿ, ಷಡಕ್ಷರಿ ಸ್ವಾಮೀಜಿ, ಚಂದ್ರಶೇಖರ ಸ್ವಾಮೀಜಿ, ತೋಂಟದಾರ್ಯ ಸ್ವಾಮೀಜಿ, ಮಲ್ಲಿಕಾರ್ಜುನ ಸ್ವಾಮೀಜಿಗಳು ಚಾಲನೆ ನೀಡಲಿದ್ದಾರೆ ಎಂದು ಮೊತ್ತ ಬಸವರಾಜಪ್ಪ ಹೇಳಿದರು.

ಮಧ್ಯಾಹ್ನ 12ಕ್ಕೆ ನಡೆಯುವ ಧಾರ್ಮಿಕ ಸಭೆಯ ಸಾನ್ನಿಧ್ಯವನ್ನು ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ವಹಿಸಲಿದ್ದಾರೆ. ಗುರುಮಲ್ಲೇಶ್ವರ ಮಠದ ಮಹಾಂತಸ್ವಾಮಿಗಳ ಸಮ್ಮುಖದಲ್ಲಿ ನಡೆಯುವ ಕಾರ್ಯಕ್ರಮವನ್ನು ಅರಣ್ಯ ಸಚಿವ ಈಶ್ವರಖಂಡ್ರೆ ಉದ್ಘಾಟಿಸಲಿದ್ದಾರೆ. ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಅವರು ಬಸವೇಶ್ವರರ ಭಾವಚಿತ್ರವನ್ನು, ಸಿದ್ದಗಂಗಾ ಮಠದ ಡಾ.ಶಿವಕುಮಾರ ಸ್ವಾಮಿಗಳ ಭಾವಚಿತ್ರವನ್ನು ಶಾಸಕ ಬಿ.ವೈ. ವಿಜಯೇಂದ್ರ ಯಡಿಯೂರಪ್ಪ, ಸಿದ್ದೇಶ್ವರ ಶ್ರೀಗಳ ಭಾವಚಿತ್ರವನ್ನು ಮಹಿಳಾ ಮತ್ತು ಮಕ್ಕಳಾ ಖಾತೆ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಹಾಗೂ ಹಾನಗಲ್ ಕುಮಾರಸ್ವಾಮೀಜಿಯವರ ಭಾವಚಿತ್ರವನ್ನು ಕ್ಷೇತ್ರದ ಶಾಸಕ ಅನಿಲ್ ಚಿಕ್ಕಮಾದು ಅನಾವರಣಗೊಳಿಸಲಿದ್ದಾರೆ. ನಂತರ ವಿರಾಜಪೇಟೆಯ ನಿವೃತ್ತ ಕ್ಷೇತ್ರ ಶಿಕ್ಷಣಾಧಿಕಾರಿ ಶೈಲಾ ಬೀಳಗಿ ಅವರ ಉಪನ್ಯಾಸ ಇರಲಿದೆ ಎಂದು ಅವರು ಕಾರ್ಯಕ್ರಮದ ವಿವರಗಳನ್ನು ನೀಡಿದರು.

ಇದೆ ವೇಳೆ ಎಸ್.ಎಸ್.ಎಲ್.ಸಿ ಮತ್ತು ಪಿಯುಸಿಯಲ್ಲಿ ಹೆಚ್ಚು ಅಂಕ ಪಡೆದ ಜನಾಂಗದ ವಿದ್ಯಾರ್ಥಿಗಳನ್ನು ಚಾಮರಾಜನಗರ ಲೋಕಸಭಾ ಸದಸ್ಯ ವಿ.ಶ್ರೀನಿವಾಸ ಪ್ರಸಾದ್ ಅಭಿನಂದಿಸಲಿದ್ದಾರೆ. ಅಲ್ಲದೇ ಇದೇ ಮೊದಲ ಬಾರಿಗೆ ವಿಧಾನ ಸಭಾ ಸದಸ್ಯರಾಗಿ ಆಯ್ಕೆಯಾದ ಶ್ರೀವತ್ಸ, ಗಣೇಶ್ ಪ್ರಸಾದ್, ಜಿ.ಡಿ. ಹರೀಶ್‌ಗೌಡ, ರವಿಶಂಕರ್ ಮತ್ತು ದರ್ಶನ್ ಧೃವನಾರಾಯಣ್ ಅವರುಗಳನ್ನು ಸಮಾಜದ ವತಿಯಿಂದ ಸನ್ಮಾನಿಸಲಾಗುವುದು ಎಂದು ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಎನ್.ಎಸ್ ಗುರುಸ್ವಾಮಿ, ಜೆ.ಬಿ. ಶಿವಸ್ವಾಮಿ, ಪಿ.ಕೆ. ಶಿವರಾಜು, ಜೆ.ಎಂ. ಮಹದೇವಪ್ಪ, ತೋಟದ ಬೆಳೆಗಾರರ ಸಂಘದ ಅಧ್ಯಕ್ಷ ಎಂ.ನಂದೀಶ್, ಗ್ರಾಪಂ ಅಧ್ಯಕ್ಷ ಕೆಂಡಗಣ್ಣಸ್ವಾಮಿ, ಪಟೇಲ್ ಮಹದೇವಪ್ಪ ಜೆ.ಪಿ.ಶಿವರಾಜಪ್ಪ ಸಿ.ಎನ್. ನಾಗಣ್ಣ, ಮೇಟಿಕುಪ್ಪೆ ಗುರುಸ್ವಾಮಿ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಅಮ್ಮನವರ ಹಬ್ಬ : ಮನೆ–ಮನೆಗೆ ಕೋಳಿ ವಿತರಣೆ



ತಿ.ನರಸೀಪುರ ತಾಲೂಕಿನ ಆಲಗೂಡು ಗ್ರಾಮದಲ್ಲಿ ನಡೆಯುವ ಅಮ್ಮನವರ ಹಬ್ಬದ ಹಿನ್ನೆಲೆಯುಲ್ಲಿ ಪುರಸಭೆ ಮಾಜಿ ಅಧ್ಯಕ್ಷ ಎಸ್.ಮದನ್ ರಾಜ್ ಪ್ರತಿ ವರ್ಷದಂತೆ ಈ ವರ್ಷವು ಗ್ರಾಮದ 400 ಮನೆಗಳಿಗೆ ಕೋಳಿಗಳನ್ನು ನೀಡಿ, ಧಾರ್ಮಿಕ ಕಾರ್ಯಕ್ರಮಕ್ಕೆ ಶುಭ ಕೋರಿದರು. ಈ ವೇಳೆ ಗ್ರಾಮದ ಕರಿಯಣ್ಣ, ಸೋಮಣ್ಣ, ಪ್ರಕಾಶ್, ರಾಚಪ್ಪಾಜಿ, ನಾಗ, ಕಾರ್ತಿಕ್, ದಿನಕರ್, ಸಿದ್ದರಾಜು ಅಲಿಯಾಸ್ ಲಾಲಿ ಮತ್ತಿತರರಿದ್ದರು.

ಹಿಂದೂ ಕಾರ್ಯಕರ್ತರ ರಕ್ಷಣೆಗೆ ಆಗ್ರಹಿಸಿ ತಹಶೀಲ್ದಾರ್ ಮನವಿ ಸಲ್ಲಿಕೆ



ನಂಜನಗೂಡು, ಜು.12– ತಾಲೂಕಿನ ಯುವ ಬ್ರಿಗೇಡ್ ಕಾರ್ಯಕರ್ತರು ಬುಧವಾರ ತಾಲೂಕು ಕಚೇರಿಯಲ್ಲಿ ತಹಶೀಲ್ದಾರ್ ಶಿವಕುಮಾರ್ ಅವರಿಗೆ ಹಿಂದೂ ಕಾರ್ಯಕರ್ತರಿಗೆ ಸರ್ಕಾರ ರಕ್ಷಣೆ ನೀಡುವಂತೆ ಆಗ್ರಹಿಸಿ ಮನವಿ ಸಲ್ಲಿಸಿದರು.

ಯುವ ಬ್ರಿಗೇಡ್ ತಾಲೂಕು ಸಂಚಾಲಕ ಸುನೀಲ್ ಮಾತನಾಡಿ, ಕಳೆದ ಜು.9 ರಂದು ತಿ.ನರಸೀಪುರದಲ್ಲಿ ಹನುಮ ಜಯಂತಿಯನ್ನು ಯಶಸ್ವಿಯಾಗಿ ನಡೆಸಿದ ಯುವ ಬ್ರಿಗೇಡ್ ಸಂಚಾಲಕ ವೇಣುಗೋಪಾಲ್ ಅವರನ್ನು ಕಿಡಿಗೇಡಿಗಳು ಬರ್ಬರವಾಗಿ ಹತ್ಯೆ ಮಾಡಿದ್ದಾರೆ. ಮೂರು ದಿನಗಳ ಹಿಂದೆ ಚಿಕ್ಕೋಡಿಯಲ್ಲಿ ಜೈನ ಮುನಿಗಳ ಹತ್ಯೆಯಾಗಿದೆ. ಈ ಎರಡು ಹತ್ಯೆಗಳು ಸಮಾಜದ ಸ್ವಾಸ್ಥ್ಯವನ್ನು ಕೆಡಿಸುವುದಲ್ಲದೆ, ಎಲ್ಲೆಡೆ ಭಯದ ವಾತಾವರಣ ಮೂಡಿಸಿದೆ. ಈ ಹಿನ್ನೆಲೆಯಲ್ಲಿ ಹಿಂದೂಗಳ ರಕ್ಷಣೆ ಹಾಗೂ ಕೊಲೆಗಡುಕರ ವಿರುದ್ಧ ಸೂಕ್ತ ಕ್ರಮವಹಿಸಬೇಕೆಂದು ಸರ್ಕಾರವನ್ನು ಆಗ್ರಹಿಸುತ್ತೇವೆ ಎಂದರು.

ತಹಶೀಲ್ದಾರ್ ಅವರಿಗೆ ಮನವಿ ಸಲ್ಲಿಸಿದ ಯುವ ಬ್ರಿಗೇಡ್ ಕಾರ್ಯಕರ್ತರು ಮನವಿ ಪತ್ರವನ್ನು ರಾಜ್ಯಪಾಲರಿಗೆ ಕಳುಹಿಸಬೇಕಾಗಿ ಮನವಿ ಮಾಡಿದರು. ಯುವ ಬ್ರಿಗೇಡ್ ಕಾರ್ಯಕರ್ತರಾದ ಅನಂತ, ಅರ್ಜುನ್, ಮಹದೇವ್, ರಂಗಸ್ವಾಮಿ, ಕಿಶೋರ್, ನಟರಾಜ್, ಶ್ರೀಕಾಂತ್ ಜೋಯಿಸ್ ಉಪಸ್ಥಿತರಿದ್ದರು.

ರಾಹುಲ್ ಅನರ್ಹತೆ ಹಿಂದೆ ಕೇಂದ್ರ ಬಿಜೆಪಿ ಸರ್ಕಾರದ ಪಿತೂರಿ;
ಕಾಂಗ್ರೆಸ್ ಮೌನ ಪ್ರತಿಭಟನೆ



ಮೈಸೂರಿನ ಗಾಂಧಿಚೌಕದಲ್ಲಿ ಕಾಂಗ್ರೆಸ್ ವತಿಯಿಂದ ಬುಧವಾರ ಮೌನ ಪ್ರತಿಭಟನೆ ನಡೆಸಲಾಯಿತು.

ಮೈಸೂರು,ಜು.12(ಪಿಎಂ)–ಸಂಸತ್ ಸದಸ್ಯ ಸ್ಥಾನದಿಂದ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರನ್ನು ಅನರ್ಹಗೊಳಿಸಿದ ಕ್ರಮದ ಹಿಂದೆ ಕೇಂದ್ರ ಬಿಜೆಪಿ ಸರ್ಕಾರದ ಪಿತೂರಿ ಇದೆ ಎಂದು ಆರೋಪಿಸಿ ನಗರ ಮತ್ತು ಗ್ರಾಮಾಂತರ ಜಿಲ್ಲಾ ಕಾಂಗ್ರೆಸ್ ವತಿಯಿಂದ ಬುಧವಾರ ಮೌನ ಪ್ರತಿಭಟನೆ ನಡೆಸಲಾಯಿತು.

ಮೈಸೂರಿನ ಗಾಂಧಿಚೌಕದಲ್ಲಿ ಜವಾಯಿಸಿದ ಪ್ರತಿಭಟನಾಕಾರರು, 'ರಾಹುಲ್ ಗಾಂಧಿಯವರ ಸತ್ಯದ ನಡಿಗೆಯಲ್ಲಿ ನಮ್ಮ ಹೆಜ್ಜೆ', 'ಕುತಂತ್ರ ವಾಮಮಾರ್ಗಿ ಬಿಜೆಪಿಗೆ ಧಿಕ್ಕಾರ', 'ಇದು ಮಹಾತ್ಮ ಗಾಂಧಿ ಹುಟ್ಟಿದ ದೇಶ, ಹಿಟ್ಲರ್ ಸಂಸ್ಕೃತಿ ಉಳಿಯುವುದಿಲ್ಲ', 'ಸಂವಿಧಾನ ವಿರೋಧಿ ಕೇಂದ್ರ ಬಿಜೆಪಿ ಸರ್ಕಾರಕ್ಕೆ ಧಿಕ್ಕಾರ' ಎಂಬಿತ್ಯಾದಿ ಘೋಷವಾಕ್ಯಗಳ ಫಲಕಗಳನ್ನಿಡಿದು ಮೌನವಾಗಿ ಪ್ರತಿಭಟನೆ ನಡೆಸಿದರು. ಜಗತ್ತಿನ ಶ್ರೇಷ್ಠ ಮನ್ನಣೆ ಗಳಿಸಿರುವ ಭಾರತದ ಸಂಸತ್ ಒಳಗೆ ಮತ್ತು ಹೊರಗೆ ಪ್ರಧಾನಿ ನರೇಂದ್ರ ಮೋದಿಯವರ ಏಕಚಕ್ರಾಧಿಪತ್ಯದ ಹಿಟ್ಲರ್ ಮಾದರಿಯನ್ನು ರಾಹುಲ್ ಗಾಂಧಿಯವರು ಟೀಕಿಸಿದ್ದನ್ನೇ ಗುರಿಯಾಗಿಸಿ ಅವರನ್ನು ಸಂಸದ ಸ್ಥಾನದಿಂದ ಅನರ್ಹಗೊಳಿಸಲಾಗಿದೆ ಎಂದು ಆರೋಪಿಸಿದರು.

ಮಾನನಷ್ಟ ಮೊಕದ್ದಮೆಯಲ್ಲಿ ಸೂರತ್ ನ್ಯಾಯಾಲಯದ ಆದೇಶವನ್ನು ಮುಂದಿಟ್ಟುಕೊಂಡು ರಾಹುಲ್ ಗಾಂಧಿಯವರ ಸಂಸತ್ ಸದಸ್ಯತ್ವ ಅನರ್ಹಗೊಳಿಸಿರುವುದು ಅಸಾಂವಿಧಾನಿಕ. ಕೇಂದ್ರದ ಬಿಜೆಪಿ ಸರ್ಕಾರವು ತೀರ್ಪು ಬಂದ ಎರಡು ದಿನಗಳ ಒಳಗಾಗಿಯೇ ರಾಹುಲ್ ಗಾಂಧಿ ಅವರ ಸಂಸತ್ ಸದಸ್ಯ ಸ್ಥಾನವನ್ನು ಅನರ್ಹಗೊಳ್ಳುವಂತೆ ಮಾಡಿರುವುದು ಹಲವು ಅನುಮಾನಗಳಿಗೆ ಎಡೆಮಾಡಿದೆ ಎಂದು ಕಿಡಿಕಾರಿದರು.

ಇದು ಕೇವಲ ಕಾನೂನಾತ್ಮಕ ವಿಷಯವಲ್ಲ, ರಾಜಕೀಯವೂ ಇದರಲ್ಲಿ ಅಡಗಿದೆ. ಸೇಡು, ಭಯ ಮತ್ತು ಬೆದರಿಕೆಯ ರಾಜಕಾರಣಕ್ಕೆ ಇದು ಮತ್ತೊಂದು ಉದಾಹರಣೆ. ಬಿಜೆಪಿ ಸರ್ಕಾರವು ಸಂಸತ್ತಿನಲ್ಲಿ ಗಟ್ಟಿ ಧ್ವನಿಗಳನ್ನು ಹತ್ತಿಕ್ಕಲು ಇಂತಹ ಕುತಂತ್ರಗಳ ಮೇಲೆ ಅವಲಂಬಿತವಾಗಿದೆ ಎಂದು ದೂರಿದರು.

ಬಿಜೆಪಿಯ ಇಂತಹ ದುಷ್ಕೃತ್ಯಗಳಿಗೆ ಕಾಂಗ್ರೆಸ್ ಎಂದಿಗೂ ಹೆದರುವುದಿಲ್ಲ. ರಾಹುಲ್ ಗಾಂಧಿಯವರೊಂದಿಗೆ ಇಡೀ ಕಾಂಗ್ರೆಸ್ ಗಟ್ಟಿಯಾಗಿ ನಿಲ್ಲುತ್ತದೆ. ದೇಶ ಮಾತ್ರವಲ್ಲದೆ, ಇಡೀ ಜಗತ್ತು ರಾಹುಲ್ ಗಾಂಧಿಯವರ ಬೆನ್ನಿಗೆ ನಿಲ್ಲುತ್ತದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಇದೇ ವೇಳೆ ಮಾಧ್ಯಮದವರೊಂದಿಗೆ ಮಾತನಾಡಿದ ಕಾಂಗ್ರೆಸ್ ಜಿಲ್ಲಾಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್, ರಾಹುಲ್ ಗಾಂಧಿ ಅವರು ಸಂಸತ್ ಒಳಗೆ ಮತ್ತು ಹೊರಗೆ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಬಿಜೆಪಿ ಸರ್ಕಾರದ ಸಂವಿಧಾನ ವಿರೋಧಿ ನಡೆವಳಿಕೆ ವಿರೋಧಿಸಿ ಮಾತನಾಡುತ್ತಿದ್ದರು. ಸಂಸತ್‌ನಲ್ಲಿ ಯಾರೂ ಪ್ರಧಾನಿಗಳನ್ನು ಪ್ರಶ್ನೆ ಮಾಡಬಾರದು ಎಂಬ ಕಾರಣಕ್ಕಾಗಿ ದೊಡ್ಡ ಮಟ್ಟದ ಸಂಚು ರೂಪಿಸಿ, ರಾಹುಲ್‌ಗಾಂಧಿ ಅವರನ್ನು ಸಂಸದ ಸ್ಥಾನದಿಂದ ಅನರ್ಹಗೊಳಿಸಲಾಗಿದೆ. ಪ್ರಜಾಪ್ರಭುತ್ವ ವ್ಯವಸ್ಥೆ ಹೊಂದಿರುವ ಅನೇಕ ರಾಷ್ಟ್ರಗಳು ಹೀಗೆ ಅನರ್ಹಗೊಳಿಸಿರುವ ಕ್ರಮವನ್ನು ತಪ್ಪು ಎಂದು ಟೀಕಿಸಿವೆ ಎಂದು ಬಿಜೆಪಿ ವಿರುದ್ಧ ಕಿಡಿಕಾರಿದರು. ಮಾಜಿ ಶಾಸಕರಾದ ವಾಸು, ಎಂ.ಕೆ.ಸೋಮಶೇಖರ್, ಕಾಂಗ್ರೆಸ್ ನಗರಾಧ್ಯಕ್ಷ ಆರ್.ಮೂರ್ತಿ, ಪ್ರಧಾನ ಕಾರ್ಯದರ್ಶಿಗಳಾದ ಶಿವಣ್ಣ, ಗಿರೀಶ್, ಮಾಜಿ ಮೇಯರ್‌ಗಳಾದ ಬಿ.ಕೆ.ಪ್ರಕಾಶ್, ಮೋದಾಮಣಿ, ಪುಷ್ಪಲತಾ ಚಿಕ್ಕಣ್ಣ, ಪುಷ್ಪಲತಾ ಜಗನ್ನಾಥ್, ಮುಖಂಡರಾದ ನಾಗಭೂಷಣ್, ಸೋಮಸುಂದರ್, ಅಶೋಕ್, ನಾಗೇಶ್, ಶೌಕತ್ ಅಲಿಖಾನ್, ಸೈಯದ್ ಇಕ್ಬಾಲ್, ಡೈರಿ ವೆಂಕಟೇಶ್, ಮೈಸೂರು ಬಸವಣ್ಣ, ಸುನಂದ ಕುಮಾರ್, ನಾಗೇಶ್ ಮತ್ತಿತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ದುರ್ಬಲರಿಗೆ ಧ್ವನಿಯಾಗಿದ್ದ ಕೆ.ಎಚ್.ರಾಮಯ್ಯರು ಪಠ್ಯವಾಗಲಿ: ಡಾ. ಎಸ್.ಪಿ.ಯೋಗಣ್ಣ



ಮೈಸೂರು, ಜು. 12(ಸಿಎನ್)–ಹಿಂದುಳಿದ ವರ್ಗಗಳ ಮೀಸಲಾತಿಗೆ ಭದ್ರ ಬುನಾದಿ ಹಾಕಿದಂಥ ಕೆ.ಎಚ್. ರಾಮಯ್ಯ ಅವರ ಜನ್ಮದಿನವನ್ನು ಸರ್ಕಾರದಿಂದಲೇ ಆಚರಣೆ ಮಾಡಬೇಕು. ಕೆಂಪೇಗೌಡರಿಗೆ ಸಿಕ್ಕ ಮಾನ್ಯತೆ ಇವರಿಗೂ ಸಿಗಬೇಕು. ಜೊತೆಗೆ ಪಠ್ಯ ಪುಸ್ತಕಗಳಲ್ಲಿ ಅವರ ಸಾಧನೆ ಕುರಿತ ವಿಷಯವನ್ನು ಅಳವಡಿಸಬೇಕು ಎಂದು ಸುಯೋಗ ಆಸ್ಪತ್ರೆ ಮುಖ್ಯಸ್ಥ ಡಾ.ಎಸ್.ಪಿ.ಯೋಗಣ್ಣ ಒತ್ತಾಯಿಸಿದರು.

ನಗರದ ಪುರಭವನದಲ್ಲಿ ಕರ್ನಾಟಕ ರಾಜ್ಯ ಒಕ್ಕಲಿಗರ ವಿಕಾಸ ವೇದಿಕೆ ವತಿಯಿಂದ ಕೆ.ಎಚ್.ರಾಮಯ್ಯ ಅವರ ಜನ್ಮದಿನ ಅಂಗವಾಗಿ ಬುಧವಾರ ಆಯೋಜಿಸಲಾಗಿದ್ದ 'ಬಾಲ ವಿಕಾಸ, ಯುವ ವಿಕಾಸ, ವಿಕಾಸಶ್ರೀ ಪ್ರಶಸ್ತಿ ಪ್ರದಾನ ಸಮಾರಂಭಕೆ ಚಾಲನೆ ನೀಡಿ ಮಾತನಾಡಿದರು. ಧ್ವನಿ ಇಲ್ಲದವರಿಗೆ ಧ್ವನಿ ನೀಡಿದ, ಸಾಮಾಜಿಕ ನ್ಯಾಯಕ್ಕೆ ಸದಾ ಬೆಂಬಲವಾಗಿದ್ದ ನಾಯಕ ಕೆ.ಎಚ್. ರಾಮಯ್ಯ, ನಾಡಿಗೂ, ಒಕ್ಕಲಿಗ ಸಮುದಾಯಕ್ಕೂ ಅಪಾರ ಸೇವೆ ಸಲ್ಲಿಸಿದವರು ಎಂದು ಸ್ಮರಿಸಿದರು.

ಇಂದಿನ ಆದಿಚುಂಚನಗಿರಿ ಮಠ ಉಳಿಯಲು ಕೆ.ಎಚ್.ರಾಮಯ್ಯ ಮುಖ್ಯ ಕಾರಣ, ಆದರೆ ಇಂದು ಅವರನ್ನು ನಿರ್ಲಕ್ಷ್ಯ ಮಾಡಲಾಗಿದೆ. ಅವರೇ ಸ್ಥಾಪಿಸಿದ ರಾಜ್ಯ ಒಕ್ಕಲಿಗರ ಸಂಘವೂ ಸಹ ಸ್ಮರಿಸುತ್ತಿಲ್ಲ. ರಾಮಯ್ಯ ಅವರು ನಗರದಲ್ಲಿ ಆರಂಭಿಸಿದ ವಿದ್ಯಾರ್ಥಿನಿಲಯದಲ್ಲಿದ್ದ ಅನೇಕರು ಇಂದು ಅಧಿಕಾರಿಗಳಾಗಿ, ಉದ್ಯಮಿಗಳಾಗಿ ಹೊರಹೊಮ್ಮಿದ್ದಾರೆ. ಆದರೆ, ಅವರಲ್ಲಿ ರಾಮಯ್ಯನವರ ಆದರ್ಶ ಇದೆಯೇ ಎಂಬುದು ಯಕ್ಷ ಪ್ರಶ್ನೆಯಾಗಿದೆ ಎಂದರು. ಹಿಂದುಳಿದ ವರ್ಗಕ್ಕೆ ನಾಲ್ವಡಿ ಕೃಷ್ಣರಾಜ ಒಡೆಯರ್ ಮೀಸಲಾತಿ ಘೋಷಿಸಿದ ಮಹಾತ್ಮರಾದರೆ, ಅದಕ್ಕೆ ಭದ್ರ ಬುನಾದಿ ಹಾಕಿದ್ದ ರಾಮಯ್ಯನವರೂ ದೀನ ದಲಿತರ ಹಿತ ಚಿಂತಕರು. ಎಲ್ಲರಿಂದಲೂ ಅವರನ್ನು ಸ್ಮರಿಸುವ ಕೆಲಸವಾಗಲಿ. ಅವರಿಂದ ಲಾಭ ಪಡೆದ ಸಮುದಾಯವು ಇತರರಿಗೂ ಸಹಕರಿಸುವಂತಾಗಲಿ ಎಂದು ಆಶಯ ವ್ಯಕ್ತಪಡಿಸಿದರು.

ಸಾಹಿತಿ ಸತೀಶ್ ಜವರೇಗೌಡ ಮಾತನಾಡಿ, ಈಗಿನ ಯುವಕರಲ್ಲಿ ಉತ್ಸಾಹ ಕಳೆಗುಂದಿದೆ. ಅವರ ಮನಸ್ಸು ಭೋಗದ ಕಡೆಗೆ ಸೆಳೆಯುತ್ತದೆ. ಹಾಗಾಗಿ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಯುವಕರ ಸಂಖ್ಯೆ ಕಡಿಮೆ ಇರುತ್ತದೆ. ವಯೋವೃದ್ಧರ ಸಂಖ್ಯೆ ಹೆಚ್ಚಿರುತ್ತದೆ ಎಂದು ಬೇಸರ ವ್ಯಕ್ತಪಡಿಸಿದರು. ಯಾವುದೇ ವ್ಯಕ್ತಿಯ ಸಾಧನೆಯನ್ನು ಗುರುತಿಸಿ ಸಮಾಜ ಪ್ರೋತ್ಸಾಹಿಸಿದಾಗ ಆತನು ಇನ್ನಷ್ಟು ಉತ್ತಮ ಕಾರ್ಯ ಮಾಡಲು ಪ್ರೇರೇಪಣೆಯಾಗುತ್ತದೆ. ಈ ನಿಟ್ಟಿನಲ್ಲಿ ವೇದಿಕೆಯು ವಯೋಮಾನಕ್ಕೆ ಅನುಗುಣವಾಗಿ ಬಾಲ ವಿಕಾಸ, ಯುವ ವಿಕಾಸ, ವಿಕಾಸಶ್ರೀ ಪ್ರಶಸ್ತಿ ನೀಡುತ್ತಿರುವುದು ಪ್ರಶಂಸನೀಯ ಸಂಗತಿ ಎಂದರು.

ಈ ವೇಳೆ ಉದ್ಯಮಿ ಮಧುಸೂದನ್, ಯಶಸ್ವಿ ರೈತ ಕೆ.ಎಲ್.ಜಯರಾಮೇಗೌಡ, ಸಾಹಿತಿ ಯಶೋಧಾ ರಾಮಕೃಷ್ಣ, ಸಮಾಜ ಸೇವಕಿ ಪದ್ಮಾ ಶ್ರೀನಿವಾಸ್, ಸಾಂಸ್ಕೃತಿಕ ಸಂಘಟಕ ಪ್ರಕಾಶ್ ಅವರಿಗೆ ವಿಕಾಸಶ್ರೀ ಪ್ರಶಸ್ತಿ, ಇನ್ನಿತರ ಸಾಧಕರಿಗೆ ಬಾಲ ವಿಕಾಸ, ಯುವ ವಿಕಾಸಶ್ರೀ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಈ ಸಂದರ್ಭ ಭರತನಾಟ್ಯ ಪ್ರದರ್ಶನ ನೀಡಿದ ಪುಟಾಣಿ ಬಿಂದುಶ್ರೀ ಗೌಡ ಪ್ರೇಕ್ಷಕರ ಮನ ಸೆಳೆದರು.

ಅರೇ ಶಂಕರ ಮಹಾಸಂಸ್ಥಾನ ಮಠದ ಸಿದ್ದರಾಮ ಚೈತನ್ಯ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ವೇದಿಕೆ ಗೌರವಾಧ್ಯಕ್ಷ ಎಚ್.ಕೆ.ರಾಮು, ಪ್ರಧಾನ ಕಾರ್ಯದರ್ಶಿ ಕೆ.ಆರ್.ಮಿಲ್ ಶಿವಣ್ಣ, ಸಮಾಜ ಸೇವಕ ರಾಮಕೃಷ್ಣೇಗೌಡ, ಗೌಡತಿಯರ ಸೇನೆ ರಾಜ್ಯಾಧ್ಯಕ್ಷೆ ರೇಣುಕಾ ಭಕ್ತರಹಳ್ಳಿ, ವಿಶ್ವ ಒಕ್ಕಲಿಗರ ಜನಜಾಗೃತಿ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಕ್ರಾಂತಿ ಸಿಂಹ ಇದ್ದರು.

ರಾಜೀವ್‌ಗಾಂಧಿ ವಸತಿ ನಿಗಮದಿಂದ 7.06 ಲಕ್ಷ ಮನೆ ನಿರ್ಮಾಣ ಗುರಿ

ಬೆಂಗಳೂರು, ಜು.12–ರಾಜೀವ್‌ಗಾಂಧಿ ವಸತಿ ನಿಗಮ ವತಿಯಿಂದ 2020–21 ರಿಂದ 2022–23ರವರೆಗೆ 7,06,290 ಮನೆ ನಿರ್ಮಾಣದ ಗುರಿ ಹೊಂದಿದ್ದು, 68, 177 ಮನೆ ಪೂರ್ಣಗೊಳಿಸಲಾಗಿದೆ ಎಂದು ವಸತಿ ಸಚಿವ ಜಮೀರ್ ಅಹಮದ್ ಖಾನ್ ತಿಳಿಸಿದ್ದಾರೆ.

ವಿಧಾನಪರಿಷತ್‌ನಲ್ಲಿ ಬುಧವಾರ ಬಿಜೆಪಿಯ ಡಿ . ಎಸ್. ಅರುಣ್ ಅವರ ಪ್ರಶ್ನೆಗೆ ಉತ್ತರಿಸಿದ ಅವರು, ಬಸವ ವಸತಿ , ಅಂಬೇಡ್ಕರ್ ನಿವಾಸ್ ನಗರ ಮತ್ತು ಗ್ರಾಮೀಣ, ದೇವರಾಜ ಅರಸು ನಗರ ಮತ್ತು ಗ್ರಾಮೀಣ, ಪ್ರಧಾನಮಂತ್ರಿ ಅವಾಸ್ ಗ್ರಾಮ, ವಾಜಪೇಯಿ ವಸತಿ ನಗರ ಯೋಜನೆಯಡಿಯಲ್ಲಿ 7,06,290 ಮನೆಗಳ ನಿರ್ಮಾಣ ಗುರಿ ಪೈಕಿ 3,68,177 ಮನೆ ನಿರ್ಮಾಣಕ್ಕೆ ಅನುಮೋದನೆ ದೊರೆತಿದ್ದು, 68,177 ಮನೆ ಪೂರ್ಣಗೊಂಡಿದೆ. 1,19,090 ಮನೆಗಳು ವಿವಿಧ ಹಂತದಲ್ಲಿವೆ. 1,77,868 ಮನೆ ಇನ್ನೂ ಪ್ರಾರಂಭಗೊಂಡಿಲ್ಲ. 3042 ಮನೆ ತಡೆ ಹಿಡಿಯಲಾಗಿದೆ ಎಂದು ಹೇಳಿದರು.

ಇದೇ ವೇಳೆ ಪಿಎಂಎವೈ ನಗರ ಮತ್ತು ಮುಖ್ಯಮಂತ್ರಿಯವರ ಒಂದು ಲಕ್ಷ ಮನೆ ಯೋಜನೆಯಲ್ಲಿ 1.05,267 ಮನೆ ನಿರ್ಮಾಣದ ಗುರಿ ಹೊಂದಿದ್ದು



99,218 ಮನೆ ನಿರ್ಮಾಣಕ್ಕೆ ಅನುಮೋದನೆ ದೊರೆತು 10,148 ಮನೆ ಪೂರ್ಣಗೊಂಡಿದ್ದು 60,277 ಮನೆ ನಿರ್ಮಾಣ ವಿವಿಧ ಹಂತದಲ್ಲಿದೆ, 28,793 ಮನೆಗಳ ಕಾಮಗಾರಿ ಇನ್ನೂ ಪ್ರಾರಂಭ ಆಗಿಲ್ಲ ಎಂದು ವಿವರಿಸಿದರು.

ವಸತಿ ಯೋಜನೆಗಳಿಗೆ ಒಟ್ಟಾರೆ 8,11,557 ಮನೆಗಳ ಪೈಕಿ 4,67,395 ಫಲಾನುಭವಿಗಳಿಗೆ ಕಾಮಗಾರಿ ಆದೇಶ ನೀಡಲಾಗಿದೆ. ಈ ಪೈಕಿ 78, 325 ಮನೆಗಳು ಪೂರ್ಣಗೊಂಡಿದ್ದು, 1,79,367 ಮನೆ ವಿವಿಧ ಹಂತದಲ್ಲಿ ಪ್ರಗತಿಯಲ್ಲಿದೆ, 2,06,661 ಮನೆ ಪೂರ್ಣಗೊಳ್ಳಲು ಬಾಕಿ ಇದೆ. ಉಳಿದ 3,042 ಮನೆ ಫಲಾನುಭವಿಗಳು ಆಸಕ್ತಿ ತೋರದಿರುವುದು ಸೇರಿ ನಾನಾ ಕಾರಣಕ್ಕೆ ಬ್ಲಾಕ್ ಮಾಡಲಾಗಿದೆ ಎಂದು ತಿಳಿಸಿದರು. ಎರಡೂ ಯೋಜನೆಗಳಿಗೆ 3,961,01 ಕೋಟಿ ರೂ. ಹಣ ಬಿಡುಗಡೆ ಮಾಡಲಾಗಿದೆ ಎಂದು ತಿಳಿಸಿದರು.

IN THE COURT OF ADD CIVIL JUDGE & JMFC AT K.R.NAGARA
O.S NO 8/2020

Plaintiff: Nagachandra Gargisha S/o Late H.N Sathyanarayana Aged about 33 years Residing at No.68, 4th Main, Vinayaka Layout Batharahalli K.R Puram, Bangalore 560049 Both are also residing at No 151, Hosa Agrahara, KR. Nagara Town Mysore Taluk Mysore District And another **Vs**

Defendant: The Secretary and others

Opponent: Chennapaiah Aged About 98 years, Residing at No 151, Hosa Agrahara, K.R Nagara Town Mysore Taluk Mysore District.

PUBLIC NOTICE

Plaintiff has filed the above suit for relief of Declaration and Mandatory Injunction against Defendants. Plaintiff has impleaded as per IA under Order 1Rule 10(2) CPC. The opponent who is to be arrived as Defendant No 6, who is residing at the said address mentioned in cause title, is hereby called to appear before Honourable Add Civil Judge and J MF C court At.K.R. Nagara on 22.08.2023 Date either in person or through advocate, failing which Opponent would be placed Ex Parte.

SCHEDULE: Property Bg Sy No 277/4, situated at K.R Nagar Taluk Hosa Agrahara, Hobli, Hosa Agrahara Grama, measuring 1 Acre 12 Guntas, bounded on East by: Remaining portion of Property Sy No 277/ 4. West by: Boregowda's Land / at Present Chandrappa's Property North by: Remaining portion of the property of Sy no 277/4 South by: Hittalu with House.

Sd/- BY ORDER OF THE COURT
Chief Ministerial officer,
Civil Judge and JMFC Court
K.R.NAGARA-571602

Sd/- Advocate for Plaintiff K.R. NAGARA

ತಾಲ್ಲೂಕು ಪಂಚಾಯತ್ ಚಾಮರಾಜನಗರ ಜಿಲ್ಲೆ, ಚಾಮರಾಜನಗರ
ಸತ್ತಿ ರಸ್ತೆ, ಚಾಮರಾಜನಗರ

email- eotpcnagar@gmail.com ದೂರವಾಣಿ: 08226-225392

E-PROCUREMENT TENDER NOTIFICATION
(Website: http://kppp.karnataka.gov.in)

2023-24 ನೇ ಸಾಲಿನ ವರ್ಷದ 9 ತಿಂಗಳ ಅವಧಿಗೆ ತಾಲ್ಲೂಕು ಪಂಚಾಯಿತಿ ಕಛೇರಿಗೆ ಖಾಲಿ ಇರುವ ಹುದ್ದೆಗಳಿಗೆ ಎದುರಾಗಿ ಅರ್ಹತೆಯುಳ್ಳ ಸಿಬ್ಬಂದಿಯನ್ನು ತಾತ್ಕಾಲಿಕವಾಗಿ ಹೊರ ಸಂಪನ್ಮೂಲ ಸ್ಥಳೀಯ ಏಜೆನ್ಸಿ ಮೂಲಕ ಕರ್ನಾಟಕ ಸಾರ್ವಜನಿಕ ಸಂಗ್ರಹಣಗಳಲ್ಲಿ ಪಾರದರ್ಶಕ ಅಧಿನಿಯಮ (KTPP) 1999 ನಿಯಮಗಳು 2000 ರ ಪ್ರಕಾರ http://kppp.karnataka.gov.in E- ಟೆಂಡರ್ ಪಡೆಯಲು ಉದ್ದೇಶಿಸಲಾಗಿದೆ.

1	ಟೆಂಡರ್ ಪ್ರಕಟಣೆ ದಿನಾಂಕ	ಟೆಂಡರ್ ಸಂ: ತಾಪಂಚಾ: ಆಡಳಿತ/ಸಿಬ್ಬಂದಿ/ ಸಿಆರ್– 01/2023–24 ದಿನಾಂಕ : 10.07.2023
2	ಟೆಂಡರ್ ಫಾರಂ ಅಪ್‌ಲೋಡ್ ಮಾಡಲು ಪ್ರಾರಂಭಿಸುವ ದಿನಾಂಕ	ದಿನಾಂಕ :12.07.2023
3	ಟೆಂಡರ್ ಫಾರಂ ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ	ದಿನಾಂಕ:24.07.2023, ಮಧ್ಯಾಹ್ನ 3.00 ಗಂಟೆಗೆ
4	ಇ ತಾಂತ್ರಿಕ ಲಕೋಟೆ ತೆರೆಯುವ ಸ್ಥಳ, ವೇಳೆ ಮತ್ತು ದಿನಾಂಕ	ತಾಲ್ಲೂಕು ಪಂಚಾಯತ್ ಕಾರ್ಯಾಲಯ, ಚಾಮರಾಜನಗರ, ದಿನಾಂಕ:25.07.2023 ಸಂಜೆ 4.00 ಗಂಟೆಗೆ
5	ಹಣಕಾಸಿನ ಲಕೋಟೆಯನ್ನು ತೆರೆಯುವ ಸ್ಥಳ, ವೇಳೆ ಮತ್ತು ದಿನಾಂಕ	ತಾಲ್ಲೂಕು ಪಂಚಾಯತ್ ಕಾರ್ಯಾಲಯ, ಚಾಮರಾಜನಗರ, ದಿನಾಂಕ:26.07.2023 ಸಂಜೆ 4.00 ಗಂಟೆಗೆ
6	ಟೆಂಡರ್‌ನೊಂದಿಗೆ ಪಾವತಿಸಬೇಕಾದ ಇ.ಎಂ.ಡಿ ಮೊತ್ತ	ರೂ. 55,000–00
7	ಸಂಪರ್ಕಿಸಬೇಕಾದ ಅಧಿಕಾರಿ ಹಾಗೂ ವಿಳಾಸ ದೂರವಾಣಿ ಸಂಖ್ಯೆ	ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯಿತಿ, ಸತ್ತಿ ರಸ್ತೆ, ಚಾಮರಾಜನಗರ ದೂರವಾಣಿ– 08226-225392, ಮೊ:9480858100

ಸಹಿ/– ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯಿತಿ, ಚಾಮರಾಜನಗರ

ವಾ.ಸಾ.ಸಂ.ಇ/ಚಾ.ನಗರ64/2023-24

ಮೈಸೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರವರ ಕಛೇರಿ
ನೀಸ&ಒಚ (ಪಶ್ಚಿಮ) ವಿಭಾಗ, ಮೈಸೂರು

ಟೆಂಡರ್ ಪ್ರಕಟಣೆ ಸಂಖ್ಯೆ : ಮೈನಪಾ/ಕಾಇಂ/ನೀಸ&ಒಚ(ಪಶ್ಚಿಮ)/ಟಿಎನ್–1/455/2023–24 ದಿನಾಂಕ: 12–07–2023

ಟೆಂಡರ್ ತಿದ್ದುಪಡಿ ಪ್ರಕಟಣೆ

ಕರ್ನಾಟಕ ಸರ್ಕಾರದ ಕೆಪಿಪಿಪಿ ಪೋರ್ಟಲ್ ಮುಖಾಂತರ ಮಾತ್ರ

ಮೈಸೂರು ಮಹಾನಗರ ಪಾಲಿಕೆಯ ವಿವಿಧ ಲೆಕ್ಕ ಶೀರ್ಷಿಕೆಗಳಾದ ನಗರಪಾಲಿಕೆ ಸಾಮಾನ್ಯ ನಿಧಿ ಅನುದಾನದಡಿ KTPP ನಿಯಮಗಳಿಗೆ ಒಳಪಟ್ಟಂತೆ ಟೆಂಡರ್‌ಗಳಿಗೆ ಕರ್ನಾಟಕ ಸರ್ಕಾರದ ಕೆಪಿಪಿಪಿ ಪೋರ್ಟಲ್ ಮುಖಾಂತರ ದಿನಾಂಕ: 12–7–2023 ಮತ್ತು 14–07–2023ರಂದು ಪ್ರಕಟಿಸಲಾಗುವುದೆಂದು ಪತ್ರಿಕಾ ಪ್ರಕಟಣೆ ಹೊರಡಿಸಲಾಗಿತ್ತು. ತಾಂತ್ರಿಕ ಕಾರಣಗಳಿಂದ ಸದರಿ ಟೆಂಡರ್‌ಗಳನ್ನು ಈ ಕೆಳಕಂಡ ದಿನಾಂಕದಂದು ಪ್ರಕಟಿಸಲಾಗುವುದು. ವಿವರ ಈ ಕೆಳಕಂಡಂತಿರುತ್ತದೆ.

				ಸಂಜೆ 5:30 ಗಂಟೆ ನಂತರ	ಸಂಜೆ 5:30 ಗಂಟೆ ಒಳಗೆ	ಸಂಜೆ 5:45 ಗಂಟೆಯ ನಂತರ
ಕ್ರ ಸಂ.	ವಿವರ	ಕಾಮಗಾರಿಗಳು	ಟೆಂಡರ್ ಮೊತ್ತ (ರೂ.ಲಕ್ಷಗಳಲ್ಲಿ)	ಇ–ಪೋರ್ಟಲ್‌ನಲ್ಲಿ ಟೆಂಡರ್ ಚಾಲ್ತಿಗೆ ಬರುವ ದಿನಾಂಕ	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ	ಟೆಂಡರ್ / ತಾಂತ್ರಿಕ ಬಿಡ್ ತೆರೆಯುವ ದಿನಾಂಕ
1	Kw-1, Kw-2 & Kw-4	79 ಸಂಖ್ಯೆ	1583.20	19-07-2023	03-08-2023	04-08-2023
2	Service Tender Kc-2	5 ಸಂಖ್ಯೆ	122.57	19-07-2023	03-08-2023	04-08-2023
3	Service Tender Kc-2	10 ಸಂಖ್ಯೆ	-	19-07-2023	03-08-2023	04-08-2023

ವಿಶೇಷ ಸೂಚನೆ: ಮುಂದೆ ಯಾವುದೇ ಸೂಚನೆ/ಬದಲಾವಣೆ/ತಿದ್ದುಪಡಿಗಳಿದ್ದಲ್ಲಿ ಕರ್ನಾಟಕ ಸರ್ಕಾರದ ಕೆಪಿಪಿಪಿ ಪೋರ್ಟಲ್‌ನಲ್ಲಿ ಅಥವಾ ಪತ್ರಿಕಾ ಪ್ರಕಟಣೆ ಹೊರಡಿಸಲಾಗುವುದು.

ಸಹಿ/– **ಕಾರ್ಯಪಾಲಕ ಅಭಿಯಂತರರು,** ನೀಸ&ಒಚ(ಪಶ್ಚಿಮ) ವಿಭಾಗ, ಮೈಸೂರು ಮಹಾನಗರ ಪಾಲಿಕೆ, ಮೈಸೂರು